ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಚೆಡ್ಡಿಗಳ ಟೆರರಿಸಂ ಜಾಲ


ಫೆಬ್ರವರಿ 2, 2011 ರೂ. 12/-

ಮಾನಗೆಟ್ಟ ಸಂಪುಟ

ದಿವಾನ್ ಅಲಿ ಹತ್ಯೆ



ಉರುಳು!



ಖಾಕಿ-ಕೇಸರಿ ಮಸಲತ್ತು



ಸಮಸ್ಯಾ ಶಿಶು ವಿಭಟ್!



ರಮ್ಯ ಇನ್ ಲವ್

.ವಿ.ಅಕ್ಷರ ಯಾರ ಸಂವೇದನೆಯನ್ನು ಕೊಂದ?

ಉಡುಪಿ ಶೆಟ್ಟಿಗಾರ್ ...ನಿಷ್

ಶಬರಿಮಲೈ ಧನದಾಹಕ್ಕೆ ಜನ ಬಲಿ

ಚಿಕ್ಕಮಗಳೂರು ಅಶ್ಲೀಲ ಚಿತ್ರ ಯಾರದ್ದು?

ನೋ ಕಾಮೆಂಟ್ಸ್

"ನಾವು ಪ್ರತ್ಯೇಕ ತೆಲಂಗಾಣ ಕೇಳುತ್ತಿರುವುದು ತೆಲಂಗಾಣ ಇತರ ಪ್ರದೇಶಗಳಿಗಿಂತ ಹಿಂದುಳಿದಿದೆ ಎಂಬ ಕಾರಣಕ್ಕೆ ಅಲ್ಲ. ಆಂಧ್ರಪ್ರದೇಶ ತೆರಿಗೆ ಆದಾಯವನ್ನೇ ಗಮನಿಸಿ. ಕೇವಲ ವಾಣಿಜ್ಯ ತೆರಿಗೆಯಿಂದ ರಾಜ್ಯದ ಬೊಕ್ಕಸಕ್ಕೆ 24,000 ಕೋಟಿ ರೂ. ಆದಾಯ ಹರಿದುಬರುತ್ತಿದೆ. ಅದರಲ್ಲಿ 16,000 ಕೋಟಿಯಷ್ಟು ತೆರಿಗೆ ಕೇವಲ ತೆಲಂಗಾಣದಿಂದ ಹರಿದುಹೋಗುತ್ತಿದೆ. ಅದು ನಮ್ಮ ಹಣ. ಆದರೆ ಅದು ಬೇರೆಯವರಿಗಾಗಿ ಬಳಕೆಯಾಗುತ್ತಿದೆ. ನಮ್ಮ ಆಕ್ಷೇಪಣೆ ಇರುವುದು ಅದಕ್ಕೆ. ನಮ್ಮ ಹಣ ನಮಗೆ ಬಳಕೆಯಾಗಬೇಕು. ಅದಕ್ಕೆ ಪ್ರತ್ಯೇಕ ತೆಲಂಗಾಣ ಬೇಕು. ಇದು ನಮ್ಮ ಸ್ವಾಭಿಮಾನದ ಪ್ರಶ್ನೆ."

-ಕೆ. ಚಂದ್ರಶೇಖರ ರಾವ್, ತೆಲಂಗಾಣ ರಾಷ್ಟ್ರ ಸಮಿತಿ ಅಧ್ಯಕ್ಷ

"ಉತ್ತರ ಕರ್ನಾಟಕದ ನೆರೆ ಸಂತ್ರಸ್ತರ ಪರಿಹಾರಕ್ಕೆ ಕೇಂದ್ರ ಸರ್ಕಾರವು ಸಾವಿರಾರು ಕೋಟಿ ರೂ.ಗಳನ್ನು ನೀಡಿದೆ. ಅಲ್ಲದೆ ರಾಜ್ಯ ಸರ್ಕಾರವೇ ನೂರಾರು ಕೋಟಿ ರೂ.ಗಳ ದೇಣಿಗೆಯನ್ನೂ ಸಂಗ್ರಹಿಸಿದೆ. ಆದರೂ ಈವರೆಗೆ ಅದು ಸಂತ್ರಸ್ತರ ಪುನರ್‌ವಸತಿಗಾಗಿ ವೆಚ್ಚ ಮಾಡಿರುವುದು ಕೇವಲ 315 ಕೋಟಿ ರೂ.ಗಳನ್ನು ಮಾತ್ರ."

- ಪತ್ರಿಕಾ ವರದಿ

"ಹಿಂದೆ ವಾಜಪೇಯಿ ಅವರ ಕಾಲದಲ್ಲಿ ಬಿಜೆಪಿ ಹೈಕಮಾಂಡ್‌ಗೆ ಪಕ್ಷದ ಮೇಲೆ ಹಿಡಿತವಿತ್ತು. ಈಗ ಎಲ್.ಕೆ. ಅಡ್ವಾಣಿ, ಸುಷ್ಮಾ ಸ್ವರಾಜ್, ನಿತಿನ್ ಗಡ್ಕರಿ ಅವರಿಗೆ ಯಡಿಯೂರಪ್ಪನವರ ಮೇಲೆ ಹಿಡಿತವೇ ಇಲ್ಲವಾಗಿದೆ. ದಕ್ಷಿಣ ಭಾರತದ ಮೊದಲ ಬಿಜೆಪಿ ಸರ್ಕಾರವನ್ನು ಕಳೆದುಕೊಳ್ಳಬಾರದೆಂಬ ಉದ್ದೇಶದಿಂದ ಯಡಿಯೂರಪ್ಪನವರಿಗೆ ಹೈಕಮಾಂಡ್ ಬೆಂಬಲ ನೀಡುತ್ತಿದೆ."

- ಬಂಗಾರಪ್ಪ

ನಂಬಿದ್ರೆನಂಬಿ ಬಿಟ್ರೆಬಿಡಿ

"ಆದರ್ಶ್ ಕೋಆಪರೇಟೀವ್ ಹೌಸಿಂಗ್ ಸೊಸೈಟಿಯವರು 31 ಅಂತಸ್ತುಗಳ ಬೃಹತ್ ವಸತಿ ಸಮುಚ್ಚಯವನ್ನು ಕಟ್ಟಿರುವುದು ಸಂಪೂರ್ಣವಾಗಿ ಕಾನೂನು ಬಾಹಿರವಾಗಿದೆ. ಅವರು ಕೋಸ್ಟಲ್ ರೆಗ್ಯುಲೇಟರಿ ವಲಯದ ಎಲ್ಲಾ ಕಾನೂನುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸಿದ್ದಾರೆ. ಹೀಗಾಗಿ ಇನ್ನು ಮೂರು ತಿಂಗಳಲ್ಲಿ ಇಡೀ ಸಮುಚ್ಚಯವನ್ನು ಕೆಡವಿ ಹಾಕಲು ಆದೇಶಿಸಲಾಗಿದೆ. ಹಾಗೊಂದು ವೇಳೆ ಅವರು ಆದೇಶವನ್ನು ಪಾಲಿಸದಿದ್ದರೆ ಪರಿಸರ ಇಲಾಖೆಯೇ ನೇರವಾಗಿ ಕ್ರಮಕ್ಕೆ ಮುಂದಾಗಲಿದೆ."

-ಜೈರಾಂ ರಮೇಶ್, ಕೇಂದ್ರ ಪರಿಸರ ಮಂತ್ರಿ

"ನನ್ನ ಟೀಕಾಕಾರರು ಏನೇ ಹೇಳಲಿ, ಯಶಸ್ವಿಯಾಗಿ ಮುಗಿದ ನಮ್ಮ ಐದನೇ ಜಾಗತಿಕ ಗುಜರಾತ್ ಸಮ್ಮೇಳನ ಒಂದು ಬಂಡವಾಳಶಾಹಿಗಳ ಸಮ್ಮೇಳನವಾಗಿರಲಿಲ್ಲ. ಬದಲಿಗೆ ಅದು ಬಂಡವಾಳಶಾಹಿಗಳಿಗೆ ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ಅರ್ಥಮಾಡಿಸುವ ಮತ್ತು ಅವರು ಜನರಿಂದ ಪಡೆದುಕೊಂಡಿದ್ದಕ್ಕೆ ಪ್ರತಿಯಾಗಿ ಜನರಿಗೆ ಏನನ್ನಾದರೂ ಮರಳಿಸುವಂತೆ ಮಾಡುವ ಸಮ್ಮೇಳನವಾಗಿತ್ತು."

- ನರೇಂದ್ರ ಮೋದಿ

"ಬಿನಾಯಕ್ ಸೇನ್ ಅವರ ವಿಚಾರಣೆ ನಡೆಯುವಾಗ ನಮ್ಮ ಮನೆಯಿಂದ ವಸ್ತುಗಳನ್ನು ಮಹಜರು ಮಾಡಿದ ವಿಡಿಯೋ ಚಿತ್ರಣವನ್ನು ನೋಡಿ ಎಂದು ನ್ಯಾಯಾಧೀಶರಿಗೆ ಮನವಿ ಮಾಡಿದೆವು. ಆದರೆ ಆ ಮಹಾಶಯರು ವಿಡಿಯೋ ಚಿತ್ರಣದ ಪ್ರಿಂಟ್‌ಔಟ್ ಕೇಳಿದರು."

-ಇಳಿನಾ ಸೇನ್

ಪಾವತಿಸಿ ಪಡೆವ ಸುಳ್ಳುಗಳು!

"ಅಧಿಕೃತ ಟಿವಿ ಚಾನೆಲ್‌ಗಳಲ್ಲಿ ಐಪಿಎಲ್ ಕ್ರಿಕೆಟ್ ಆಟದ ವಿಶ್ಲೇಷಣೆ ಮಾಡುವ ಪತ್ರಕರ್ತರಿಗೂ ವಿಶ್ಲೇಷಕರಿಗೂ ಸಂಬಂಧಪಟ್ಟ ಫ್ರಾಂಚೈಸಿಗಳು ದೊಡ್ಡ ಮೊತ್ತವನ್ನು ಕೊಟ್ಟು ಖರೀದಿಸುತ್ತಾರೆ. ಹೀಗಿರುವಾಗ ನಿಷ್ಠೂರ ವಿಶ್ಲೇಷಣೆ ಮಾಡಿ ಆದಾಯದ ಮೂಲವನ್ನು ಯಾವ ಪತ್ರಕರ್ತ ಕಳೆದುಕೊಳ್ಳಲು ಬಯಸುತ್ತಾನೆ?"

- ಹಣ ಪಡೆದು ವಿಶ್ಲೇಷಣೆ ಮಾಡಲು ನಿರಾಕರಿಸಿದ ಒಬ್ಬ ಪತ್ರಕರ್ತ

ಬಡ್ಡಿ ವ್ಯಾಪಾರಿಗಳಿಗೆ ಖಾಕಿ-ಕಾವಿ ರಕ್ಷಣೆ!

"ಕಿರು ಸಾಲ ನೀಡುವ ಹಣಕಾಸು ಸಂಸ್ಥೆಗಳಿಗೆ (ಎಂಎಫ್‌ಐ) ಸರ್ಕಾರವು ಬಡ್ಡಿ ದರದಲ್ಲಿ ರಿಯಾಯತಿ ನೀಡಿ ಪ್ರೋತ್ಸಾಹಿಸಬೇಕು."

-ವೀರೇಂದ್ರ ಹೆಗ್ಗಡೆ

"ಮೈಕ್ರೋ ಫೈನಾನ್ಸ್ ಕಂಪನಿಗಳು ಶೇ.30ರ ದರದಲ್ಲಿ ಬಡ್ಡಿ ಹಾಕುವುದರಲ್ಲಿ ಏನೂ ತಪ್ಪಿಲ್ಲ. ಅವರು ಲಾಭದಾಯಕವಾಗಿ ತಮ್ಮ ವ್ಯವಹಾರ ನಡೆಸಲು ಅಷ್ಟು ಬಡ್ಡಿ ಹಾಕಲೇಬೇಕಾಗುತ್ತದೆ."

- ಶಂಕರ್ ಬಿದರಿ, ಬೆಂಗಳೂರು ಪೊಲೀಸ್ ಕಮಿಷನರ್

ಅಯ್ಯಪ್ಪ ದರ್ಶನದ ದುರಂತ

ಉದ್ಯಮವಾದ ಭಕ್ತಿ, ವ್ಯಾಪಾರಿಯಾದ ಸರ್ಕಾರ ಮತ್ತು ಬಲಿಪಶುವಾದ ಜನತೆ

ಕಳೆದ ಜನವರಿ 14ರಂದು ಮಕರ ಸಂಕ್ರಾಂತಿಯ ರಾತ್ರಿ ಶಬರಿಮಲೈ ಆರಣ್ಯದಲ್ಲಿ ನಡೆದ ದುರಂತದಲ್ಲಿ 102ಕ್ಕೂ ಹೆಚ್ಚು ಅಮಾಯಕ ಹಾಗೂ ನಿಸ್ಸಹಾಯಕ ಜನರು ಮೃತರಾಗಿದ್ದಾರೆ. ಈವರೆಗೆ ಶಬರಿಮಲೈನ ಆಧ್ಯಾತ್ಮ ವನ್ನು ಮತ್ತು ಜನರ ಭಕ್ತಿಯ ಪರವಶತೆಯನ್ನು ವೈಭವೀ ಕರಿಸುತ್ತಿದ್ದ ಮಾಧ್ಯಮಗಳು ಮತ್ತು ಸರ್ಕಾರಗಳು ಪ್ರಾರಂಭ ದಲ್ಲಿ ಈ ಸಾವಿನ ಹೊಣೆಯನ್ನು ಜನರ ತಲೆಗೇ ಕಟ್ಟಿ ಕೈತೊಳೆದುಕೊಳ್ಳುವ ಪ್ರಯತ್ನ ನಡೆಸಿದವು. ಮಕರಜ್ಯೋತಿ ಯನ್ನು ನೋಡಿದ ನಂತರ ವಾಪಸ್ ಮನೆಗೆ ತೆರಳುವ ತರಾತುರಿಯಲ್ಲಿ ನಡೆದ ನೂಕುನುಗ್ಗಲಿನಿಂದಾಗಿ ಈ ಸಾವುಗಳು ಸಂಭವಿಸಿತೆಂದು ಹೇಳುತ್ತಾ ಜನರ ಧಾವಂತ ಮತ್ತು ನೂಕುನುಗ್ಗಲಿನ ಮೇಲೆ ಸಾವಿನ ಹೊಣೆಗಾರಿಕೆಯನ್ನು ವರ್ಗಾಯಿಸಲು ಯತ್ನಿಸಿದರು. ಆದರೆ ಈ ದುರಂತದ ಆಳಕ್ಕೆ ಹೋದರೆ ಮಾಧ್ಯಮಗಳು, ಸುಶಿಕ್ಷಿತ ಜನತೆ, ವೈಜ್ಞಾನಿಕ ಮನೋಭಾವ ಬೆಳೆಸದ ನಮ್ಮ ಆಧುನಿಕತೆ, ಜನರ ಭಕ್ತಿಯನ್ನೂ ಸರಕನ್ನಾಗಿಸಿ ಅದರ ಅತಿಹೆಚ್ಚು ಮಾರಾಟವನ್ನೇ ಗುರಿಯಾಗಿಸಿಕೊಂಡಿರುವ ವ್ಯಾಪಾರಿ ಆರ್ಥಿಕತೆ, ಅದಕ್ಕೆ ಕುಮ್ಮಕ್ಕಾಗಿರುವ ಕಮ್ಯುನಿಸ್ಟ್ ಸರ್ಕಾರ ಇತ್ಯಾದಿಗಳೆಲ್ಲವೂ ಕಾರಣವೆಂಬುದು ಅರ್ಥವಾಗುತ್ತಾ ಹೋಗುತ್ತದೆ.

ಸುಮಾರು ಐವತ್ತು ವರ್ಷಗಳ ಹಿಂದೆ ಕೇವಲ ಕೇರಳದ ಭಾಗಕ್ಕೆ ಮಾತ್ರ ಸೀಮಿತವಾಗಿದ್ದ ಈ ಅಯ್ಯಪ್ಪ ಮಾಲಾವ್ರತ ಕಳೆದ ಎರಡು-ಮೂರು ದಶಕಗಳಲ್ಲಿ ವಿಪರೀತ ಪ್ರಚಾರ ಪಡೆದು ಇಡೀ ದಕ್ಷಿಣ ಭಾರತದಾದ್ಯಂತ ವ್ಯಾಪಿಸುತ್ತಿದೆ. ಅಮಿತಾಭ್ ಬಚ್ಚನ್, ವಿವೇಕ್ ಒಬೆರಾಯ್, ರಜನೀಕಾಂತ್‌ರಂತಹ ನಟರು, ಕ್ರಿಕೆಟ್ ತಾರೆಗಳು ಹಾಗೂ ಪ್ರಖ್ಯಾತ ರಾಜಕಾರಣಿಗಳು ಕಳೆದೊಂದು ದಶಕದಲ್ಲಿ ನಿಯಮಿತವಾಗಿ ಇಲ್ಲಿಗೆ ಭೇಟಿ ಕೊಡುತ್ತಾರೆ. ಹಾಗೆ ಭೇಟಿ ನೀಡುವ ಮೂಲಕ ತಾವು ಪ್ರಚಾರ ಮಾಡುವ ಸೋಪು, ಬ್ಲೇಡುಗಳಂತೆ ಅಯ್ಯಪ್ಪ ಸ್ವಾಮಿಗೂ ಸಾಕಷ್ಟು ಪ್ರಚಾರ ಕೊಡುತ್ತಿದ್ದಾರೆ. ಅವರ ಭೇಟಿಗಳು ಎಲ್ಲಾ ಮಾಧ್ಯಮಗಳಲ್ಲೂ ಸಾಕಷ್ಟು ಪ್ರಚಾರಪಡುವಂತೆ ದೇವಸ್ಥಾನದ ಆಡಳಿತ ಮಂಡಳಿ ನೋಡಿಕೊಂಡು ಬಂದಿರುವುದರಿಂದ ಅಯ್ಯಪ್ಪ ಪಂಥ ಈಗ ನಿಧಾನಕ್ಕೆ ಮಧ್ಯ ಹಾಗೂ ಉತ್ತರ ಭಾರತದವರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಹೀಗಾಗಿ ಈಗ ಭಾರತದಲ್ಲಿ ತಿರುಪತಿಯನ್ನು ಬಿಟ್ಟರೆ ಅತಿಹೆಚ್ಚು ಜನರನ್ನು ಆಕರ್ಷಿಸುವ ಯಾತ್ರಾಸ್ಥಳ ಶಬರಿ ಮಲೈ ಆಗಿದೆ.

ಒಂದು ಅಂದಾಜಿನ ಪ್ರಕಾರ ಕಳೆದ ಕೆಲವು ವರ್ಷ ಗಳಿಂದ ಅಯ್ಯಪ್ಪ ಸೀಸನ್ನಿನಲ್ಲಿ (ಅಂದರೆ ನವಂಬರ್-ಜನ ವರಿಯ ನಡುವೆ) ಈ ಸ್ಥಳಕ್ಕೆ ಏನಿಲ್ಲವೆಂದರೂ 2-2.5 ಕೋಟಿ ಭಕ್ತರು ಭೇಟಿ ನೀಡುತ್ತಾರೆ. ಈ ವರ್ಷ ಅದು ಇನ್ನೂ ಹೆಚ್ಚಾಗಿದೆ. ಕಳೆದ ವರ್ಷ ಯಾತ್ರಾರ್ಥಿಗಳ ಮೇಲೆ ಹಾಕಿದ ವಿವಿಧ ತೆರಿಗೆಗಳಿಂದ ಕೇರಳ ಸರ್ಕಾರಕ್ಕೆ 110 ಕೋಟಿ ಆದಾಯ ಬಂದಿದ್ದರೆ ಈ ವರ್ಷ ಈಗಾಗಲೇ 133 ಕೋಟಿ ರೂಪಾಯಿಯಷ್ಟು ನೇರ ಆದಾಯ ಬಂದಿದೆ. ಇದಲ್ಲದೆ ಅಯ್ಯಪ್ಪ ದೇಗುಲದ ಮೇಲುಸ್ತುವಾರಿ ನೋಡಿ ಕೊಳ್ಳುವ ಟ್ರಾವಂಕೂರ್ ದೇವಸ್ವ ಮಂಡಳಿಗೂ ಹತ್ತಾರು ಕೋಟಿ ರೂಪಾಯಿ ಲಾಭವಾಗಿದೆ. ಜೊತೆಗೆ ಇಡೀ ಶಬರಿಮಲೈ ಪ್ರಾಂತ್ಯದ ಸುತ್ತಮುತ್ತಲಿನ ಅಂಗಡಿ, ಹೋಟೆಲ್, ಇನ್ನಿತರ ವ್ಯಾಪಾರಿಗಳಿಗೂ ನೂರಾರು ಕೋಟಿ ರೂಪಾಯಿ ವಹಿವಾಟಾಗಿದೆ. ಹೀಗಾಗಿ ಅಯ್ಯಪ್ಪ ವ್ರತ ಮತ್ತು ಅಯ್ಯಪ್ಪ ಭಕ್ತಿಯ ಸುತ್ತಾ ಶಬರಿಮಲೈ ಪ್ರಾಂತ್ಯದಲ್ಲಿ ಒಂದು ಆರ್ಥಿಕತೆಯೇ ಸೃಷ್ಟಿಯಾಗಿದೆ ಮತ್ತು ಅದನ್ನು ಯಥಾರೀತಿ ಕಾಪಾಡಿಕೊಳ್ಳುವ ಪಟ್ಟಭದ್ರ ಹಿತಾ ಸಕ್ತಿಗಳೂ ಸೃಷ್ಟಿಯಾಗಿವೆ.

ಅಯ್ಯಪ್ಪ ವ್ರತದ ಭಾಗವಾಗಿ 15-45 ದಿನಗಳ ಕಾಲ ಕಪ್ಪು ಬಟ್ಟೆ ಧರಿಸಿ, ಬರಿಕಾಲಿನ ಓಡಾಟ ಮಾಡುತ್ತಾ ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸುವ ಅಯ್ಯಪ್ಪ ಭಕ್ತರು ಬಹುಪಾಲು ದುಡಿಯುವ ಮತ್ತು ಕೆಳಮಧ್ಯಮ ವರ್ಗದ ಜನರೇ ಆಗಿರುತ್ತಾರೆ. ತಮ್ಮ ವ್ರತದ ಅಂತಿಮ ಭಾಗವಾಗಿ ಇರುಮುಡಿ ಹೊತ್ತು ಶಬರಿಮಲೈ ಪ್ರವಾಸಕ್ಕೆ ಹೊರಡುವ ಭಕ್ತರು ಸಂಕ್ರಾಂತಿಯ ದಿನ ಅಥವಾ ಅದಕ್ಕೆ ಸ್ವಲ್ಪ ಮೊದಲು ಹೇಗಾದರೂ ಮಾಡಿ ಶಬರಿಮಲೈನಲ್ಲಿ ಅಯ್ಯಪ್ಪ ದರ್ಶನ ಮಾಡಿ ತಮ್ಮ ವ್ರತವನ್ನು ಮುಗಿಸುತ್ತಾರೆ. ಹೀಗಾಗಿ ಸಂಕ್ರಾಂತಿ ಹತ್ತಿರ ಬರುತ್ತಿದ್ದಂತೆ ಇಲ್ಲಿ ರಷ್ ಕೂಡಾ ಹೆಚ್ಚಾಗುತ್ತಾ ಹೋಗುತ್ತದೆ.


ಅದರಲ್ಲೂ ಕಳೆದೆರಡು-ಮೂರು ದಶಕಗಳಿಂದ ಸಂಕ್ರಾಂತಿಯ ದಿನ ಸಂಜೆ 6.30ರ ಸುಮಾರಿಗೆ ಶಬರಿಮಲೈ ದೇವಸ್ಥಾನದ ಹಿಂಭಾಗದಲ್ಲಿ ಮಕರವಿಳಕ್ಕು ಅಂದರೆ ಅಪಾರ ಪ್ರಭೆಯುಳ್ಳ ಮಕರ ಜ್ಯೋತಿ "ಕಾಣಿಸಿಕೊಳ್ಳುತ್ತದೆ". ಅದರ ಸಾಕ್ಷಾತ್ ದರ್ಶನ ಮಾಡಿದವರಿಗೆ ಸಕಲ ಸೌಭಾಗ್ಯ, ಮುಕ್ತಿ ಇತ್ಯಾದಿಗಳು ದೊರೆಯುತ್ತವೆ ಎಂಬ ಪ್ರಚಾರು ವ್ಯವಸ್ಥಿತವಾಗಿ ಹಬ್ಬಿದೆ. ಹೀಗಾಗಿ ಸಂಕ್ರಾಂತಿಯ ದಿನಗಳಂದು ಇಡೀ ಶಬರಿಮಲೈ ಪ್ರಾಂತ್ಯದ ಅಕ್ಕಪಕ್ಕದ ಗುಡ್ಡಗಳನ್ನೇರುವ ಜನ ಮಕರಜ್ಯೋತಿಯ ದರ್ಶನಕ್ಕಾಗಿ ಮುಗಿಬೀಳುತ್ತಾರೆ. ಅಲ್ಲದೆ ಈ ಮಕರಜ್ಯೋತಿಯ ದರ್ಶನದ ಸನ್ನಿ ಹೆಚ್ಚುತ್ತಿದ್ದಂತೆ ಮಕರ ಸಂಕ್ರಾಂತಿಯ ಆಜುಬಾಜಿನಲ್ಲಿ ನಿಯಂತ್ರಣ ಮಾಡ ಲಾಗದಷ್ಟು ಜನತೆ ಕಿಕ್ಕಿರಿದು ಕಡೆ ಸಾವಿರಾರು ಸಂಖ್ಯೆಯಲ್ಲಿ ನೆರೆಯುತ್ತಾರೆ. ಇದನ್ನು ನಿಯಂತ್ರಿಸುವ ಅಥವಾ ಅದನ್ನು ತಡೆದು ಸೂಕ್ತ ಸೌಲಭ್ಯ ಒದಗಿಸುವ ಯಾವ ಪ್ರಯತ್ನವನ್ನೂ ಕೇರಳ ಸರ್ಕಾರ ಮಾಡಿಲ್ಲ.

ಉದಾಹರಣೆಗೆ 1999ರಲ್ಲೂ ಸಹ ಸಂಕ್ರಾಂತಿ ದಿನದಂದೇ ಪಂಪಾರಣ್ಯ ಎಂಬ ಕಡೆ ನೂಕುನುಗ್ಗಲಿಂದಾಗಿ ಅವಘಡ ಸಂಭವಿಸಿ 53 ಜನ ಸತ್ತಿದ್ದರು. ಆಗ ಅದರ ಬಗ್ಗೆ ತನಿಖೆ ನಡೆಸಲು ನೇಮಕವಾಗಿದ್ದ ಜಸ್ಟೀಸ್ ಟಿ. ಚಂದ್ರಶೇಖರ್



ಮೆನನ್ ಆಯೋಗ 57 ಸಲಹೆಗಳನ್ನು ಕೊಟ್ಟಿತ್ತು. ಅದೇರೀತಿ 2000ದ ನಂತರದಲ್ಲಿ ನೇಮಕವಾಗಿದ್ದ ಎ.ವಿ. ತಾಮರಕ್ಷನ್ ಸಮಿತಿ ಸಹ ಸಾಕಷ್ಟು ಸಲಹೆಗಳನ್ನು ಕೊಟ್ಟಿತ್ತು. ಆದರೆ ಅವುಗಳ ಯಾವ ಸಲಹೆಗಳನ್ನು ಅನುಷ್ಠಾನಕ್ಕೆ ತರಲು ಕೇರಳದ ಸರ್ಕಾರ ಮುಂದಾಗಲಿಲ್ಲ. ಆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗಲೂ ಅಷ್ಟೆ. ಈಗ ಕಮ್ಯುನಿಸ್ಟ್ ಸರ್ಕಾರ ವಿದ್ದಾಗಲೂ ಅಷ್ಟೆ.

ಈ ಬಾರಿಯೂ ಶಬರಿಮಲೈ ಪ್ರಾಂತ್ಯದ ಉಪ್ಪುಪ್ಪರ-ಪುಲಿಮೇಡು ಅರಣ್ಯ ಪ್ರಾಂತ್ಯದಲ್ಲಿ ಗುಡ್ಡವೊಂದರ ಮೇಲಿಂದ ಜನವರಿ 14ರ ಸಂಜೆ 6.30ರ ಸುಮಾರಿಗೆ ಮಕರಜ್ಯೋತಿಯ ದರ್ಶನ ಮಾಡಿ ಕೃತಾರ್ಥರಾದ ಸುಮಾರು 2.5 ಲಕ್ಷ ಅಯ್ಯಪ್ಪ ಭಕ್ತರು ತರಾತುರಿಯಲ್ಲಿ ಬೆಟ್ಟದ ಕೆಳಗೆ ಇಳಿದು ತಮ್ಮ ವಾಹನಗಳ ಕಡೆಗೆ ಧಾವಿಸುತ್ತಿರುವಾಗ ಈ ನೂಕುನುಗ್ಗಲು ಸಂಭವಿಸಿದೆ. ಇಂಥಾ ಸಂಭವನೀಯ ನೂಕುನುಗ್ಗಲನ್ನು ತಡೆಯಲು ಅಲ್ಲಿದ್ದವರು ಕೇವಲ ನಾಲ್ಕು ಪೊಲೀಸರಂತೆ!



ಶಿವಸುಂದರ್

ಚಾರ್ವಾಕ

ನಾಲ್ಕು ಸಾವಿರ ಪೊಲೀಸರಿದ್ದರೂ ಈ ಜನಪ್ರವಾಹವನ್ನು ತಡೆಯಲು ಸಾಧ್ಯವಿರುತ್ತಿರಲಿಲ್ಲ ಮತ್ತು ಇದು ಊಹಿಸಲಸಾಧ್ಯ ವಾದ ವಿಷಯವೂ ಆಗಿರಲಿಲ್ಲ. ಏಕೆಂದರೆ ಈ ಘಟನೆ ಸಂಭವಿಸುವ ಕೆಲವು ದಿನಗಳ ಮುಂಚೆ ಆ ಪ್ರಾಂತ್ಯದ ಜಿಲ್ಲಾ ಕಲೆಕ್ಟರ್ ಸಹ ಮಕರಜ್ಯೋತಿಯನ್ನು ನೋಡಲು ಜನ ಅನುಮತಿ ನೀಡಿರುವ ದಾರಿಯನ್ನು ಹೊರತುಪಡಿಸಿ ಎಲ್ಲಾ ಮಾರ್ಗಗಳಿಂದಲೂ ನುಗ್ಗಬಹುದೆಂಬ ಎಚ್ಚರಿಕೆಯನ್ನು ನೀಡಿದ್ದರಂತೆ. ಆದರೂ ಈ ಅವಘಡ ಸಂಭವಿಸಿ 102 ಪ್ರಾಣಗಳ ಬಲಿ ತೆಗೆದುಕೊಂಡಿದೆ.

ಇಡೀ ಮಕರವಿಳಕ್ಕು ಸೀಸನ್ನಿನಲ್ಲಿ ಜಾಸ್ತಿ ಜನ ಹರಿದುಬಂದರೂ ಮಕರ ಸಂಕ್ರಾಂತಿಯ ದಿನದಂದೇ ಲಕ್ಷಾಂತರ ಜನ ನೆರೆಯಲು ಕಾರಣ ಅಂದು ಸಂಜೆ ಅಲ್ಲಿ "ಕಾಣಿಸಿಕೊಳ್ಳುವ" ಮಕರ ಜ್ಯೋತಿ!! ನಾಲ್ಕು ದಶಕಗಳ ಹಿಂದೆ ಈ ಮಕರಜ್ಯೋತಿಯ ಪವಾಡವೇನೂ ಸಂಭವಿಸು ತ್ತಿರಲಿಲ್ಲ. ಆದರೆ 70ರ ದಶಕದ ನಂತರ ಇದ್ದಕ್ಕಿದ್ದಂತೆ ಈ ಮಕರಜ್ಯೋತಿ "ಕಾಣಿಸಿಕೊಳ್ಳಲು" ಪ್ರಾರಂಭಿಸಿತು. ಈ ಮಕರಜ್ಯೋತಿಯ ಪವಾಡವೇನು ಎಂದು ಅರಿಯಲು 1973ರಲ್ಲೇ ವಿಚಾರವಾದಿಗಳ ಒಂದು ತಂಡ "ಜ್ಯೋತಿ" ಕಾಣಿಸಿಕೊಳ್ಳುವ ಪೊನ್ನಾಂಬುಮೇಡು ಬೆಟ್ಟಕ್ಕೆ ಗುಟ್ಟಾಗಿ ಹೋಗಿ ಸತ್ಯ ಶೋಧನೆ ನಡೆಸಿತ್ತು.

ಸಂಜೆಯಾಗುತ್ತಿದ್ದಂತೆ ಅಲ್ಲಿಗೆ ಬಂದ ಕೇರಳ ವಿದ್ಯುತ್ ನಿಗಮದ ನೌಕರರು ಮತ್ತು ಅಯ್ಯಪ್ಪ ದೇವಸ್ಥಾನದ ಮಂಡಳಿಯವರು ದೊಡ್ಡ ಬಾಂಡ್ಲಿಯಲ್ಲಿ ಕರ್ಪೂರದ ರಾಶಿ ಯನ್ನು ಸುರಿದು ಅದಕ್ಕೆ ಬೆಂಕಿ ಹಚ್ಚಿದರು. ಅದು ದೊಡ್ಡ ಜ್ವಾಲೆಯಾಗಿ ಬೆಳಗುತ್ತಾ 20-30 ಕಿಮೀ ದೂರದಿಂದ ನೋಡುವವರಿಗೆ ಒಂದು ನಕ್ಷತ್ರವಾಗಿ ಕಾಣಲು ಪ್ರಾರಂಭಿಸಿತು. ಕೆಲವು ನಿಮಿಷಗಳ ನಂತರ ಬೆಂಕಿಯೂ ಮರೆಯಾಗಿ "ನಕ್ಷತ್ರ ಕಣ್ಮರೆಯಾಯಿತು". ಇದೇ ಮಕರಜ್ಯೋತಿಯ ಪವಾಡದ ರಹಸ್ಯ.

ಇದನ್ನು ಪತ್ತೆಹಚ್ಚಿದ ಕೇರಳದ ವಿಚಾರವಾದಿಗಳು 1983ರಲ್ಲಿ ಈ ಇಡೀ ಪ್ರಕ್ರಿಯೆಯನ್ನು ಚಿತ್ರೀಕರಿಸಿ ಕೇರಳದಾದ್ಯಂತ ಪ್ರಚಾರ ಮಾಡಿದರು. ಆದರೆ ದೇವಸ್ಥಾನದ ಆಡಳಿತ ಮಂಡಳಿ ಈ ಚರ್ಚೆಗೆ ಬರಲು ನಿರಾಕರಿಸಿತು. ಆನಂತರ ಈ "ಪವಾಡ" ಕಾರ್ಯದಲ್ಲಿ ಭಾಗವಹಿಸಿದ್ದ ನೌಕರರೇ ನಿಜಾಂಶವನ್ನು ಬಯಲಿಗೆಳೆದಿದ್ದರು.

ಕಳೆದ ಒಂದು ದಶಕದಿಂದ ಕೇರಳದ ಪ್ರಗತಿಪರ ಸಂಘಟನೆಗಳು ಈ ಜ್ಯೋತಿ ಪವಾಡದ ಸುಳ್ಳನ್ನು ಬಯಲಿಗೊಳಿಸಿ ಮಕರವಿಳಕ್ಕು ಸಂದರ್ಭದಲ್ಲಿ ಲಕ್ಷಾಂತರ ಕರಪತ್ರ ಮುದ್ರಿಸಿ ಅಯ್ಯಪ್ಪ ಭಕ್ತರಿಗೆ ಹಂಚುತ್ತಿದ್ದಾರೆ. ಈ ಅವಘಡ ಸಂಭವಿಸಿದ ಮೇಲೆ ಮಕರವಿಳಕ್ಕುವಿನ ಪವಾಡವನ್ನು ಸರ್ಕಾರ ಸುಳ್ಳೆಂದು ಅಧಿಕೃತವಾಗಿ ಘೋಷಿಸಿ ಪ್ರಚಾರ ಮಾಡಬೇಕೆಂದು ಆಗ್ರಹಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೆಲವರು ನ್ಯಾಯಾಲಯದ ಮೆಟ್ಟಿಲನ್ನು ಹತ್ತುತ್ತಿದ್ದಾರೆ. ಅವರ ಈ ಎಲ್ಲಾ ಪ್ರಯತ್ನಗಳಿಂದಾಗಿ ಮಕರಜ್ಯೋತಿಯ ದರ್ಶನದ ಹುಚ್ಚು ಸನ್ನಿಯಲ್ಲಿ ಕೇರಳಿಗರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಕಾರಣದಿಂದಲೇ ಈ ಬಾರಿ ಸತ್ತ 105 ಅಯ್ಯಪ್ಪ ಭಕ್ತರಲ್ಲಿ ಕೇರಳಿಗರು ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದರು.

ಇದೆಲ್ಲ ಆದನಂತರ 2008ರ ಮೇ 28ರಂದು ಅಯ್ಯಪ್ಪ ದೇವಸ್ಥಾನದ ಮಹಾ ಪ್ರಧಾನ ಅರ್ಚಕರಾದ ಕಂಟಾರು ಮಹೇಶ್ವರ ತಂತ್ರಿಗಳೇ ಖುದ್ದು ಪತ್ರಿಕಾ ಹೇಳಿಕೆ ನೀಡಿ ಮಕರಜ್ಯೋತಿ ದೈವಸೃಷ್ಟಿಯಲ್ಲವೆಂದೂ ಅದು ದೇವಸ್ಥಾನ ದವರೇ ನಡೆಸುವ ಕೃತಕ ದೀಪಾರಾಧನೆಯೆಂದೂ, ವಿನಾಕಾರಣ ಜನರು ಅದನ್ನು ಮಕರಜ್ಯೋತಿಯೆಂದು ತಪ್ಪು ತಿಳಿದಿದ್ದಾರೆಂದೂ ಹೇಳಿಕೆ ಇತ್ತರು.

ಇದರಲ್ಲಿರುವ ಕುತಂತ್ರವನ್ನು ನೋಡಿ. 2008ರ ತನಕ ಸರ್ಕಾರಕ್ಕೂ, ಈ ಮುಖ್ಯ ತಂತ್ರಿಗೂ ಜನ ತಪ್ಪು ತಿಳಿವಳಿಕೆಯಿಂದ ತಮ್ಮ ಜೀವನವನ್ನೇ ಪಣಕ್ಕೊಡ್ಡುತ್ತಿದ್ದಾರೆಂದು ಗೊತ್ತಿತ್ತು. ಆದರೂ ಅವರು ಜನರಿಗೆ ನಿಜವೇನೆಂಬುದರ ಬಗ್ಗೆ ತಿಳಿವಳಿಕೆ ನೀಡಲು ಮುಂದಾಗಲಿಲ್ಲ. ಏಕೆ? ಕಾರಣ ಸ್ಪಷ್ಟ. ನಿಜಾಂಶ ಗೊತ್ತಾದರೆ ಭಕ್ತರ ಸಂಖ್ಯೆ ಕಡಿಮೆಯಾಗುತ್ತದೆ. ಆಗ ದೇವಸ್ಥಾನದ ಮತ್ತು ಸರ್ಕಾರದ ಆದಾಯ ಕಡಿಮೆ ಮಾಡುತ್ತದೆ.

ಈ ಸಮೂಹ ಸನ್ನಿಯನ್ನು ಜ್ಯೋತಿ, ವ್ರತ ಇತ್ಯಾದಿಗಳ ಹೆಸರಿನಲ್ಲಿ ಸರ್ಕಾರ ಹಾಗೂ ದೇವಸ್ಥಾನ ಮತ್ತು ಅಲ್ಲಿನ ಆರ್ಥಿಕತೆಯ ಫಲಾನುಭವಿಗಳೆಲ್ಲರೂ ಹೆಚ್ಚಿಸುತ್ತಿದ್ದಾರೆ. ಈ ಪಟ್ಟಭದ್ರ ಹಿತಾಸಕ್ತಿಗಳ ಕೂಟವೇ ಅಮಾಯಕ ಅಯ್ಯಪ್ಪ ಭಕ್ತರ ಸಾವಿಗೆ ನೇರ ಕಾರಣರು. ಎಲ್ಲಿಯತನಕ ಸರ್ಕಾರ ಜನರಲ್ಲಿ ಹುಟ್ಟಿಬ್ಬಿಸುವ ಈ ಮಕರಜ್ಯೋತಿಯ ಪವಾಡದ ನಿಜಾಂಶವನ್ನು ಜನರಿಗೆ ಬಿಚ್ಚಿಡುವುದಿಲ್ಲವೋ ಈ ಸಮೂಹ ಸನ್ನಿಯೂ ಕಡಿಮೆಯಾಗುವುದಿಲ್ಲ.

ಈ ಪವಾಡದ ನಿಜಾಂಶವನ್ನು ಸರ್ಕಾರ ಜನರಿಗೆ ಹೇಳದಿದ್ದರೆ ಮುಂದಾಗಲಿರುವ ಅವಘಡಗಳನ್ನೂ ತಡೆಯಲು ಸಾಧ್ಯವೇ ಇಲ್ಲ. ಈ ನಿಜಾಂಶವನ್ನು ಜನರ ಧಾರ್ಮಿಕ ಶ್ರದ್ಧೆಗೆ ಅಡ್ಡಿ ಮಾಡದೆ ಅವಹೇಳನ ಮಾಡದೇ ಜನರಿಗೆ ತಿಳಿಹೇಳಲು ಸಾಧ್ಯ.

ಇಂದು ಕರ್ನಾಟಕದ ವಿಚಾರವಾದಿಗಳು ಮತ್ತು ಮನುಷ್ಯಪ್ರೇಮಿ ದೈವಭಕ್ತರ ಮೇಲೂ ಇದೇ ಜವಾಬ್ದಾರಿ ಇದೆ. ಆರ್ಥಿಕ ಲಾಭಕ್ಕಾಗಿ ಕೆಲವು ಹಿತಾಸಕ್ತಿಗಳು ಜನರ ಭಕ್ತಿಯನ್ನು ದುರುಪಯೋಗ ಪಡಿಸಿಕೊಂಡು ಪ್ರಾಣಕ್ಕೆ ಎರವಾಗುವುದನ್ನು ತಡೆಯುವುದು ಮನುಷ್ಯರನ್ನು ಪ್ರೀತಿಸುವ ಮತ್ತು ದೇವರಲ್ಲಿ ನಂಬಿಕೆ ಇರುವ ಎಲ್ಲರ ಐಹಿಕ ಮತ್ತು ಪಾರಮಾರ್ಥಿಕ ಕರ್ತವ್ಯವಾಗಿದೆ. ●

ದಲಿತರ ಜೀವಕ್ಕೆ ಬೆಲೆಯಿಲ್ಲವೆ?




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ನಮ್ಮ ದೇಶದಲ್ಲಿ ಜಾರಿಯಲ್ಲಿರುವುದು ಒಂದೇ ವಿಧಾನ. ಆ ಸಂವಿಧಾನವನ್ನಾಧರಿಸಿಯೇ ನಮ್ಮ ಯಾಲಯಗಳು ತಮ್ಮ ತೀರ್ಪುಗಳನ್ನು ನೀಡುತ್ತವೆ. ರೂ ಹಲವು ಪ್ರಕರಣಗಳನ್ನು ಉದಾಹರಣೆಯಾಗಿ ಮಕೊಂಡು ನಮ್ಮ ನ್ಯಾಯಾಲಯಗಳು, ಆಡಳಿತ ವ್ಯವಸ್ಥೆ ತ್ತು ಮಾಧ್ಯಮಗಳು ಹೇಗೆ ಬೇರೆ ಬೇರೆ ವರ್ಗಗಳನ್ನು ತಂತೆ ಹೊರಬಿದ್ದಿರುವ ತೀರ್ಪುಗಳಿಗೆ ಪ್ರತಿಕ್ರಿಯಿಸಿದ್ದಾವೆ ದು ನೋಡಿದರೆ ಗಾಬರಿ ಆಗುತ್ತದೆ.

ಇತ್ತೀಚಿಗೆ 'No one killed Jessica' ಎಂಬ ದಿ ಚಿತ್ರ ಬಿಡುಗಡೆಗೊಂಡಿದೆ. 1999ರಲ್ಲಿ ಹೈ ಸೈಟಿಯ ಬಾರ್ ಒಂದರಲ್ಲಿ ವೈಟ್ರೆಸ್ ಆಗಿ ಕೆಲಸ ಮಾಡುತ್ತಿದ್ದ ಜೆಸ್ಸಿಕಾ ಲಾಲ್ ಎಂಬ ರೂಪದರ್ಶಿ ಲೆಯಾದಳು. ಕಾಂಗ್ರೆಸ್‌ನ ಪ್ರಭಾವಿ ನಾಯಕನೊಬ್ಬನ ನಿಗೆ ಆಕೆ ಒಂದು ಡ್ರಿಂಕ್ ನೀಡಲು ನಿರಾಕರಿಸಿದ್ದರಿಂದ ಆಕೆಯನ್ನು ಗುಂಡಿಟ್ಟು ಕೊಂದಿದ್ದ. ಆ ಪ್ರಕರಣದಲ್ಲಿ ರತದ ಗಣ್ಯಾತಿಗಣ್ಯ ಸೋಷಿಯಲೈಟರು ಪ್ರತ್ಯಕ್ಷದರ್ಶಿಗಳಾಗಿದ್ದರು, ಮೇಲುವರ್ಗ ಕುಟುಂಬದಿಂದ ದಿದ್ದ ಸುಂದರ ಯುವತಿ ಜೆಸ್ಸಿಕಾ ಬಲಿಯಾಗಿದ್ದಳು ತ್ತು ರಾಜಕೀಯ ಪ್ರಭಾವದಿಂದಾಗಿ ಆ ಇಡೀ ಕೇಸ್ ಟ್ಟಿಹೋಗುವ ಸಂಭವವಿತ್ತು. ಈ ಎಲ್ಲ ಕಾರಣಗಳಿಂದಾಗಿ ತೂ ಮಾಧ್ಯಮಗಳು ಈ ಕೇಸಿನತ್ತ ಹೆಚ್ಚು ಗಮನ ಸಿದ್ದವು.

ಹಲವು ವರ್ಷಗಳ ನಂತರ ನ್ಯಾಯಾಲಯವೊಂದು ಸಾಕ್ಷ್ಯಾಧಾರಗಳಿಲ್ಲ ಎಂಬ ಕಾರಣ ನೀಡಿ ಜೆಸ್ಸಿಕಾ ಲಾಲ್‌ಳನ್ನು ಕೊಂದಿದ್ದ ಮನು ಶರ್ಮಾನನ್ನು ಖುಲಾಸೆಗೊಳಿಸಿತು. ಆತ ಮಾಧ್ಯಮಗಳೇ ಪ್ರತಿಭಟನೆಯ ಮುಂದಾಳತ್ವವನ್ನು ವಹಿಸಿಕೊಂಡು ಈ ಪ್ರಕರಣದ ಮರು ವಿಚಾರಣೆ ನಡೆಯಬೇಕೆಂದು ಚೀರಾಡಿದ್ದವು. ಒಂದು ಇಂಗ್ಲಿಷ್ ಟಿವಿ ಚಾನೆಲ್ 'ಜೆಸ್ಸಿಕಾ ಲಾಲ್‌ಗೆ ನ್ಯಾಯ ಒದಗಿಸಿ' ಎಂಬ ಪ್ರತಿಭಟನೆಗೆ ಜನರೆಲ್ಲ ದೆಹಲಿಯ ಇಂಡಿಯಾ ಗೇಟ್ ಹತ್ತಿರ ಸೇರಬೇಕೆಂದು ಕರೆ ನೀಡುತ್ತಿದ್ದುದಲ್ಲದೆ, ಅದನ್ನು



ಸಾರ ಮಡಲು ತನ್ನ ಚಾನೆಲ್‌ಗೆ ಚೆನ್ನಾಗಿರುವ ದೃಶ್ಯಗಳು ಬೇಕೆಂಬ ಕಾರಣಕ್ಕೆ ತಾನೇ ಪ್ರತಿಭಟನಾಕಾರರಿಗೆಲ್ಲ ಮೊಂಬತ್ತಿಗಳನ್ನು ಸರಬರಾಜು ಮಾಡಿ ಆ ದೃಶ್ಯಗಳನ್ನೇ ಪ್ರಸಾರಿಸಿತ್ತು.

ಹೀಗೆ ಮಾಧ್ಯಮಗಳು ತುಂಬಾ ಒತ್ತಡ ಹೇರಿದ್ದರಿಂದ ಜೆಸ್ಸಿಕಾ ಲಾಲ್ ಪ್ರಕರಣದಲ್ಲಿ ಮತ್ತೊಮ್ಮೆ ವಿಚಾರಣೆ ನಡೆದು ಕೊನೆಗೂ ಮನು ಶರ್ಮಾನಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆಯನ್ನು ನೀಡಿತ್ತು.

ಜೆಸ್ಸಿಕಾ ಲಾಲ್ ಮೇಲುವರ್ಗದವಳಾಗಿದ್ದಿರಬಹುದು, ಸೊಸೈಟಿಯ ಅಂಗವಾಗಿದ್ದಿರಬಹುದು. ಆದರೆ ಆಕೆ ಖಂಡಿತವಾಗಿಯೂ ಅಮಾಯಕಳಾಗಿದ್ದಳು. ಆಕೆಯನ್ನು



ಕೊಂದಿದ್ದ, ತನ್ನ ಅಪರಾಧವನ್ನು ಮುಚ್ಚಿಹಾಕಲು ಪ್ರತ್ಯಕ್ಷದರ್ಶಿಗಳಿಗೆ ಹಣವನ್ನು ನೀಡಿ ಅವರನ್ನು ಖರೀದಿಸಿದ್ದ ಹಣದ ಆಮಿಷಕ್ಕೆ ಒಳಗಾದವರನ್ನು ಬೆದರಿಸಿ ಅವರ ಬಾಯಿ ಮುಚ್ಚಿಸಿದ್ದ ಮನು ಶರ್ಮಾನಿಗೆ ಕೊನೆಗೂ ಶಿಕ್ಷೆ ಆಗಿದ್ದು ಸರಿಯಾದದ್ದೆ. ಅದರ ಬಗ್ಗೆ ಯಾವ ತಕರಾರೂ ಇಲ್ಲ.

ಆದರೆ ಜೆಸ್ಸಿಕಾ ಲಾಲ್‌ಗೆ ನ್ಯಾಯ ಸಿಕ್ಕಂತೆ ನಮ್ಮ ಕಂಬಾಲಪಲ್ಲಿಯಲ್ಲಿ ಜೀವಂತವಾಗಿ ದಹನಗೊಂಡ ಏಳು ದಲಿತರಿಗೆ ನ್ಯಾಯ ಸಿಗಲಿಲ್ಲವೇಕೆ? ಪಕ್ಕದ ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ಅಮಾನುಷವಾಗಿ ಕೊಲ್ಲಲ್ಪಟ್ಟ ಭೂತಮಾಂಗೆ ಕುಟುಂಬದ ಸುರೇಖಾ ಮತ್ತು ಪ್ರಿಯಾಂಕ ಎಂಬ ದಲಿತ ಮಹಿಳೆಯರಿಗೆ ನ್ಯಾಯ ಸಿಗಲಿಲ್ಲವೇಕೆ? ಜೆಸ್ಸಿಕಾ ಲಾಲ್ ಎಂಬ ಮೇಲುವರ್ಗದ ಸುಂದರ ಯುವತಿಗೆ ಸೂಕ್ಷ್ಮಮತಿಯಾದ ನ್ಯಾಯಾಂಗ, ಆಡಳಿತ ವ್ಯವಸ್ಥೆ ಮತ್ತು ಮಾಧ್ಯಮಗಳು ಇದ್ದು, ಕಂಬಾಲಪಲ್ಲಿ ಮತ್ತು ಖೈರ್ಲಾಂಜಿಯಲ್ಲಿ ಮಡಿದ ಬಡ ದಲಿತರಿಗೆ ಪ್ರತ್ಯೇಕವಾದ, ಅಸೂಕ್ಷ್ಮವಾದ ನ್ಯಾಯಾಂಗ, ಆಡಳಿತ ವ್ಯವಸ್ಥೆ ಮತ್ತು ಮಾಧ್ಯಮಗಳು ನಮ್ಮ ದೇಶದಲ್ಲಿ ಇವೆಯೇ? ಇದೆ ಎಂದೇ ಹೇಳಬೇಕಿದೆ.

ಇಲ್ಲವಾದರೆ, ಜೆಸ್ಸಿಕಾ ಲಾಲ್ ಪ್ರಕರಣ ಪುನರ್ ವಿಚಾರಣೆ ಆಗಬೇಕೆಂದು ಹಲವಾರು ಲೇಖನಗಳನ್ನು ಪ್ರಕಟಿಸಿದ ಪತ್ರಿಕೆಗಳು ಮತ್ತು ವಿಶೇಷ ಕಾರ್ಯಕ್ರಮಗಳನ್ನು ನಡೆಸಿದ ಟಿವಿ ಚಾನೆಲ್‌ಗಳು ಯಾಕೆ ಕಂಬಾಲಪಲ್ಲಿ ಮತ್ತು ಖೈರ್ಲಾಂಜಿಯಲ್ಲಿನ ದಲಿತರ ಕೊಲೆಗಳ ಬಗೆಗಿನ ತೀರ್ಪುಗಳ ಬಗ್ಗೆ ಒಂದೆರಡು ವರದಿಗಳನ್ನು ಪ್ರಕಟಿಸಿ/ಬಿತ್ತರಿಸಿ ಸುಮ್ಮನಾದವು? ಅವರೆಲ್ಲರ ಕಣ್ಣುಗಳಲ್ಲಿ ಯಾಕೆ ಈ ಎರಡು ದುರಂತಗಳಲ್ಲಿ ಮಡಿದ ಬಡ, ಅಷ್ಟು ಸುಂದರರಲ್ಲದ, ಮೇಲುವರ್ಗಕ್ಕೆ ಸೇರದ, ಯಾವ ರೀತಿಯಲ್ಲೂ ಪ್ರಭಾವ ಹೊಂದಿರದಿದ್ದ ದಲಿತರ ಪ್ರಾಣಗಳು ಜೆಸ್ಸಿಕಾ ಲಾಲ್‌ಳ ಪ್ರಾಣದಷ್ಟೇ ಮುಖ್ಯವಾಗಲಿಲ್ಲ?

ನಮ್ಮ ಸಮಾಜದ, ಮಾಧ್ಯಮಗಳ ದ್ವಂದ್ವ ನೀತಿ ಇಲ್ಲಿಗೇ ನಿಲ್ಲುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ಕಳೆದ ವರ್ಷ ಆಸ್ಟ್ರೇಲಿಯಾ ದೇಶದಲ್ಲಿ ಭಾರತೀಯರ ಮೇಲಾದ ಜನಾಂಗೀಯ ದಾಳಿಗಳನ್ನೇ ನೋಡಿ. ಇವತ್ತು ಆಸ್ಟ್ರೇಲಿಯಾಕ್ಕೆ ವಲಸೆ ಹೋಗಿ ವಾಸಿಸುತ್ತಿರುವ ಭಾರತೀಯರಲ್ಲಿ ಖಂಡಿತವಾಗಿಯೂ ಮೇಲುವರ್ಗದ ಮತ್ತು ಮೇಲುಜಾತಿಯ ಜನರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ದುರ್ಬೀನು ಹಾಕಿ ಹುಡುಕಿದರೆ ಕೆಲವು ಕೆಳವರ್ಗದ ಮತ್ತು ಕೆಳಜಾತಿಯ ಜನ ಸಿಗಬಹುದಷ್ಟೇ. ಇರಲಿ. ಆ ದೇಶದಲ್ಲಿ ಹತ್ತಾರು ಭಾರತೀಯರ ಮೇಲಾದ ದಾಳಿಗಳನ್ನು, ಒಂದೆರಡು ಕೊಲೆಗಳನ್ನು ಕುರಿತಂತೆ ನಮ್ಮ ಸರ್ಕಾರ ಮತ್ತು ಮಾಧ್ಯಮಗಳು ಹೇಗೆ ವರ್ತಿಸಿದವು ನೆನಪಿದೆಯೇ? ಆ ದಾಳಿಗಳು ಜನಾಂಗೀಯ ದ್ವೇಷದಿಂದ ಕೂಡಿದ್ದು ಅವುಗಳು ಈ ದೇಶದ ಸ್ವಾಭಿಮಾನದ ಮೇಲೆ ನಡೆದ ದಾಳಿಗಳೆಂಬಂತೆ ಬೊಬ್ಬೆ ಹಾಕಿದವು. ಆಸ್ಟ್ರೇಲಿಯಾದ ಸರ್ಕಾರ "ಇನ್ನು ಮುಂದೆ ಹೀಗಾಗದಂತೆ ಎಚ್ಚರ ವಹಿಸುತ್ತೇವೆ" ಎಂಬ ಆಶ್ವಾಸನೆ ಕೊಡುವವರೆಗೂ ಅರಚಾಡಿದವು.

ಆದರೆ ಇದೇ ಭಾರತದ ಸರ್ಕಾರ ಮತ್ತು ಮಾಧ್ಯಮಗಳು ಇದೇ ಭಾರತದಲ್ಲಿ ಸಮಾನಹಕ್ಕುಗಳನ್ನು ಹೊಂದಿರುವ ದಲಿತರ ಮೇಲೆ ದಿನನಿತ್ಯ ಆಗುತ್ತಿರುವ ದೌರ್ಜನ್ಯದ ಬಗ್ಗೆ, ಅಮಾನವೀಯತೆ ಬಗ್ಗೆ ಕಿಂಚಿತ್ತೂ ತಲೆ ಕೆಡಿಸಿಕೊಳ್ಳುವುದಿಲ್ಲ. ಅದಕ್ಕಿಂತ ಅಪಾಯಕಾರಿಯಾಗಿ ದಲಿತರ ಹಣೆಬರಹವೇ ಅಂತಹದ್ದು ಎಂಬ ಧೋರಣೆಯನ್ನು ಪ್ರದರ್ಶಿಸುತ್ತವೆ. ಅಂದರೆ ನಮ್ಮ ಸಮಾಜದ ದೃಷ್ಟಿಯಲ್ಲಿ ಆಸ್ಟ್ರೇಲಿಯಾದಲ್ಲಿರುವ ಮೇಲುವರ್ಗದ ಭಾರತೀಯರ ಮೇಲಾದ ದಾಳಿಗಳು "ಅಸಹಜ ಮತ್ತು ಸಹಿಸಲಾಗದಂತಹದ್ದು", ಆದರೆ ಇಲ್ಲೇ ದಲಿತರ ಮೇಲಾಗುವ ದಾಳಿಗಳು "ಸಹಜ ಮತ್ತು ಸಾಮಾನ್ಯ."

ಇದು ನಿಜಕ್ಕೂ ಒಂದು ದೊಡ್ಡ ದುರಂತ. ಧೀಮಂತ ಚಿಂತಕರಾಗಿದ್ದ, ಶೋಷಿತರ ಪರ ದನಿ ಎತ್ತಿದ, ದಲಿತರ ಮಾರ್ಗದರ್ಶಿಯಾಗಿದ್ದ ಡಾ. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚನೆಗೊಂಡ ನಮ್ಮ ದೇಶದ ಸಂವಿಧಾನ ಎಲ್ಲರಿಗೂ ಸಮಾನ ಹಕ್ಕು ನೀಡುತ್ತದೆ. ಆದರೂ ಇವತ್ತು ವಾಸ್ತವವಾಗಿ ದಲಿತರಿಗೆ ನಮ್ಮ ದೇಶದಲ್ಲಿ ಸಮಾನಹಕ್ಕುಗಳಿರಲಿ ಸಮಾನ ನ್ಯಾಯ ಕೂಡ ಸಿಗದಂತಾಗಿದೆ. ಸಹಸ್ರಾರು ವರ್ಷಗಳಿಂದ ಶೋಷಣೆಗೆ ಒಳಗಾಗಿರುವ ದಲಿತರು ಸ್ವಾಭಿಮಾನದ ಬದುಕನ್ನು ನಡೆಸುವಂತಾಗಲಿ ಎಂಬ ಅಂಬೇಡ್ಕರ್ ಅವರ ಆಶಯವನ್ನು ದಿನನಿತ್ಯ ಕಗ್ಗೊಲೆಗೈಯಲಾಗುತ್ತಿದೆ....

ಇದಕ್ಕೆ ಕಾರಣ ನಿಸ್ಸಂಶಯವಾಗಿ ನಮ್ಮ ಸಮಾಜದಲ್ಲಿ ಬ್ರಾಹ್ಮಣಶಾಹಿಗಳ ಸೃಷ್ಟಿಯಾದ ಜಾತಿವ್ಯವಸ್ಥೆ ಇಂದಿಗೂ ಬಲವಾಗಿ ಬೇರು ಬಿಟ್ಟಿರುವುದು. ಹಾಗೂ ನಮ್ಮ ಇಡೀ ವ್ಯವಸ್ಥೆ ಆ ಮೇಲುವರ್ಗ ಮತ್ತು ಜಾತಿಯ ಪರವಾಗಿರುವುದು. ಅಂದರೆ ಎಲ್ಲಿಯತನಕ ಈ ಜಾತಿ ವ್ಯವಸ್ಥೆ ನಾಶವಾಗಿ ಇಲ್ಲಿ ನಿಜವಾದ ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬರುವುದಿಲ್ಲವೋ ಅಲ್ಲಿಯತನಕ ಜೆಸ್ಸಿಕಾ ಲಾಲ್ ತರಹದ ಮೇಲುವರ್ಗದ ಜನರಿಗೆ ನ್ಯಾಯ ಸಿಗುತ್ತಿರುತ್ತದೆ; ಕಂಬಾಲಪಲ್ಲಿ, ಖೈರ್ಲಾಂಜಿ ಸೇರಿದಂತೆ ಭಾರತದ ಸಹಸ್ರಾರು ಕಡೆ ದಲಿತರ ಮೇಲಾಗುವ ಕೊಲೆಗಳು, ದೌರ್ಜನ್ಯಗಳು ಮತ್ತು ದಬ್ಬಾಳಿಕೆಗಳೂ ಮುಂದುವರೆಯುತ್ತಿರುತ್ತವೆ.... •


ಕೌನ್ಸಿಲರ್ ದಿವಾನ್ ಆಲಿ ಹತ್ಯೆ

ಖಾಕಿ-ಕೇಸರಿ ಜಂಟಿ ಮಸಲತ್ತು

ತಾನು ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆಗಿರುವಾಗ ಕನಿಷ್ಠ ಆ ಕಾರಣಕ್ಕಾದರೂ ಸರ್ಕಾರ ತನ್ನನ್ನು ರಕ್ಷಿಸುತ್ತದೆ ಎಂದೇ ಆಲಿ ಲೆಕ್ಕ ಹಾಕಿದ್ದ. ಕೊಟ್ಟ ಬಂದೂಕುಧಾರಿ ಪೊಲೀಸ್ ರಕ್ಷಣೆಯನ್ನೇ ನೆಚ್ಚಿಕೊಂಡ. ತಾನೊಬ್ಬ ರಾಜಕಾರಣಿ ಎನಿಸಿಕೊಂಡಾಕ್ಷಣ ತನ್ನ ಪೂರ್ವಾಶ್ರಮದ ದುಷ್ಮನಿಯೆಲ್ಲ ಖತಮ್ಮಾಯಿತೆಂದೇ ನಂಬಿದ್ದ. ಶಾಸಕ ಜಮೀರ್ ಶ್ರೀರಕ್ಷೆಯಿದ್ದುಬಿಟ್ಟರೆ ತನ್ನನ್ನು ಯಾರೂ ಮುಟ್ಟಲಾರರೆಂದೇ ಭ್ರಮಿಸಿದ್ದ.

ಪಾಪಕೂಪದ ಚದುರಂಗದಲ್ಲಿ ಯಾವ ಕುದುರೆ ಸದ್ದಿಲ್ಲದೆ ಯಾವ ಮನೆಗೆ ಕದಲುವುದೊ? ಯಾರ ಬುರುಡೆಗೆ ಯಾವ ಪಾತ್ರೆಯಲ್ಲಿ ಬಿಸಿನೀರು ಕುದಿಯುವುದೊ? ಅದೂ ಮುಸ್ಲಿಂ ಪಾತಕ ಲೋಕದಲ್ಲಂತೂ ಬದುಕಿ ಉಳಿಯುವುದೇ ಅಪರಾಧವಾಗಿರುವಾಗ ಯಾರ ಆಯಸ್ಸು ಯಾವ ಗಳಿಗೆಯಲ್ಲಿ ಮುಗಿದು ಹೋಗುತ್ತೊ-

ಆಲಿಯ ಅಂತ್ಯವಾಗಿದೆ!


ಮಾಹಿನ್


ಬನಶಂಕರಿ ದೇವಸ್ಥಾನ ವಾರ್ಡಿನ ಬಿಬಿಎಂಪಿ ಕೌನ್ಸಿಲರ್, ಚಾಮರಾಜಪೇಟೆ ಶಾಸಕ ಜಮೀರ್ ಸಾಹೇಬರ ಬಲಗೈ ಬಂಟ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಗೆ ಪರಮಾಪ್ತ ಬದುಕಿದ್ದರೆ ಇವತ್ತಲ್ಲ ನಾಳೆ ಗೃಹಮಂತ್ರಿ ಅಶೋಕ್ ವಿರುದ್ಧ ಪದ್ಮನಾಭನಗರ ವಿಧಾನಸಭಾ ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿಯಾಗಬಹುದಾಗಿದ್ದ ಮೊಹಮ್ಮದ್ ಆಲಿ ಆಲಿಯಾಸ್ ದಿವಾನ್ ಆಲಿಗೆ ಆತನ ರಾಜಕಾರಣವೇ ಸಾವಾಗಿ ಪರಿಣಮಿಸಲಿದೆ ಎಂಬುದು ಯಾವ ಮಾಯೆಯಿಂದ ಗೊತ್ತಾಗಬೇಕು?

ಅದೂ ಬಿಜೆಪಿ ಸರ್ಕಾರದಲ್ಲಿ ಆತನದೇ ಕ್ಷೇತ್ರದಿಂದ ಗೆದ್ದು ಹೋದ ಅಶೋಕ್ ಗೃಹ ಮಂತ್ರಿಯಾಗಿರುವಾಗ?

ತಾನು ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆಗಿರುವಾಗ ಕನಿಷ್ಠ ಆ ಕಾರಣಕ್ಕಾದರೂ ಸರ್ಕಾರ ತನ್ನನ್ನು ರಕ್ಷಿಸುತ್ತದೆ ಎಂದೇ ಆಲಿ ಲೆಕ್ಕ ಹಾಕಿದ್ದ. ಕೊಟ್ಟ ಬಂದೂಕುಧಾರಿ ಪೊಲೀಸ್ ರಕ್ಷಣೆಯನ್ನೇ ನೆಚ್ಚಿಕೊಂಡ. ತಾನೊಬ್ಬ ರಾಜಕಾರಣಿ ಎನಿಸಿಕೊಂಡಾಕ್ಷಣ ತನ್ನ ಪೂರ್ವಾಶ್ರಮದ ದುಷ್ಮನಿಯೆಲ್ಲ ಖತಮ್ಮಾಯಿತೆಂದೇ ನಂಬಿದ್ದ. ಶಾಸಕ ಜಮೀರ್ ಶ್ರೀರಕ್ಷೆಯಿದ್ದುಬಿಟ್ಟರೆ ತನ್ನನ್ನು ಯಾರೂ ಮುಟ್ಟಲಾರರೆಂದೇ ಭ್ರಮಿಸಿದ್ದ.

ಜಮೀರ್‌ನ ದಳಪತಿ

ಆದರೆ ಪಾಪಕೂಪದ ಲೆಕ್ಕಾಚಾರಗಳೇ ಬೇರೆಯಿರುತ್ತವೆ. ವೈಯಕ್ತಿಕ ವೈಷಮ್ಯದ ಮುಂದಿಲ್ಲಿ ಕೌನ್ಸಿಲರ್, ಎಮ್ಮೆಲ್ಲೇ, ಎಂಪಿ, ಮಂತ್ರಿ ಯಾವುದೂ ಗಣನೆಗೆ ಬರುವುದಿಲ್ಲ. ಬಹುಶಃ ಆಲಿಗಿದು ಚೆನ್ನಾಗಿ ಗೊತ್ತಿತ್ತೋ ಏನೋ. ಪ್ರತಿ ಹೆಜ್ಜೆಯನ್ನೂ ಹುಷಾರಾಗೇ ಇಡುತ್ತಿದ್ದ. ಬನಶಂಕರಿ ದೇವಸ್ಥಾನದ ವಾರ್ಡಿಗೆ ಜೆಡಿಎಸ್ ಅಭ್ಯರ್ಥಿಯಾಗಿ ನಿಂತು ಗೆದ್ದ. ಒಮ್ಮೆ ಕೌನ್ಸಿಲರ್ ಎನ್ನಿಸಿಕೊಂಡಾಕ್ಷಣ ಪೊಲೀಸ್ ರಕ್ಷಣೆ ಸಿಕ್ಕೇ ಸಿಗುತ್ತದೆ ಎಂದು ಭ್ರಮಿಸಿದ್ದ. ತನ್ನ ಜೊತೆಗಿದ್ದ ಹುಡುಗರನ್ನೆಲ್ಲ ಕೈಬಿಟ್ಟ. ಪಾಪಕೂಪದಲ್ಲಿ ತನ್ನ ರಕ್ಷಣೆಗೊಂದು ಸಿಂಡಿಕೇಟ್ ರೂಪಿಸಿಕೊಳ್ಳಬೇಕೆಂಬ ಮೂಲಸೂತ್ರವನ್ನೇ ಮರೆತುಬಿಟ್ಟ.


ಆಲಿ ಬಂಗಲೆ...

ಒಂದೆಡೆ ಆಲಿ ಕೌನ್ಸಿಲರ್ ಗತ್ತಿನಲ್ಲಿ ಮೈಮರೆತಿರುವಾಗಲೇ ಮುಸ್ಲಿಂ ಪಾತಕ ಲೋಕದಲ್ಲಿ ಕದಲಿಕೆಗಳಾದವು. ಅದು ಚಾಮರಾಜಪೇಟೆ ಶಾಸಕ ಜಮೀರ್ ಮತ್ತು ರಕ್ತಪಿಪಾಸು ಮಾಹಿನ್ ನಡುವಣ ರಾಜಕೀಯ ವೈಷಮ್ಯ. ಅದಕ್ಕೆ ಬಲಿಯಾದವನು ಆಲಿ!

ಜಮೀರ್ ಚಾಮರಾಜಪೇಟೆಯಿಂದ ಗೆಲ್ಲುವಲ್ಲಿ ದೊಡ್ಡ ಕೊಡುಗೆಯಿದ್ದದ್ದು ಆಲಿಯದ್ದು. ಆ ಹೊತ್ತಿಗಿನ್ನೂ ಆಲಿ ಮತ್ತು ಗೋರಿಪಾಳ್ಯದ ಅಲ್ತಾಫ್ ಮಧ್ಯೆ ಪ್ರಾಣಕ್ಕೆ ಪ್ರಾಣದಂಥ ದೋಸ್ತಿಯಿತ್ತು. ಗೆದ್ದ ಒಂದೇ ವರ್ಷಕ್ಕೆ ಜಮೀರ್ ಅಕ್ಕಪಕ್ಕ ಕಂಗೊಳಿಸತೊಡಗಿದ್ದು ಅಲ್ತಾಫ್‌ನ ಆಜನ್ಮ ಶತ್ರುಗಳಾದ ಆರಿಫ್ ಮತ್ತಾತನ ಮಗ ಇಮ್ರಾನ್. ಸಹಜವಾಗೇ ಜಮೀರ್ ಫೋಟೋ ಹೊತ್ತ ಬ್ಯಾನರು-ಫ್ಲೆಕ್ಸ್‌ಗಳಲ್ಲಿ ಆಲಿಯ ಜೊತೆ ಆರಿಫ್ ಮತ್ತು ಇಮ್ರಾನ್‌ರ ಫೋಟೋಗಳೂ ರಾರಾಜಿಸತೊಡಗಿದವು. ಇದರಿಂದಾಗಿ ಅಲ್ತಾಫ್ ಒಳಗೊಳಗೇ ಕೊರಗತೊಡಗಿದ್ದ. ಅನಾದಿಕಾಲದಿಂದಲೂ ಅಲ್ತಾಫ್-ಆಲಿ ಜೋಡಿಯೆಂದರೆ ಇಡೀ ಮುಸ್ಲಿಂ ಪಾತಕ ಲೋಕವೇ ಥರಗುಡುವಂತಿತ್ತು. ಅದು ಮೊದಲ ಬಾರಿಗೆ ಶಿಥಿಲಗೊಳ್ಳುವಂತೆ ಆಗಿದ್ದು ಜಮೀರ್ ಕಾರಣಕ್ಕೆ.

ಪಾತಕಿ ಮಾಹಿನ್‌ನನ್ನು ತನ್ನ ಪಾಳಯದಿಂದ ಹೊರದಬ್ಬಿದ್ದೇ ತಡ ಜಮೀರ್ ತನ್ನ ದಳಪತಿಯನ್ನಾಗಿ ಆಲಿಯನ್ನು ಪ್ರತಿಷ್ಠಾಪಿಸಿಕೊಂಡಿದ್ದ. ಜೊತೆಗೆ ಗೋರಿಪಾಳ್ಯದ ಆರಿಫ್ ಮತ್ತು ಇಮ್ರಾನ್‌ರನ್ನೂ ಜೊತೆ ಹಾಕಿಕೊಂಡ. ಜಮೀರ್ ಪಾಳೆಯದಲ್ಲಿ ತನಗೆ ಇದಿರಾಗಿ ಆಲಿ ಬೆಳೆಯುತ್ತಿದ್ದಾನೆಂಬುದು ಗೊತ್ತಾಗಿದ್ದೇ ತಡ, ಮಾಹಿನ್ ಆಲಿಯ ವಿರುದ್ಧ ಕತ್ತಿ ಮಸೆಯಲಾರಂಭಿಸಿದ್ದ.


ತನ್ವೀರ್ ಗಾಯಬ್



ಬಹುಶಃ ಆಲಿ ಮತ್ತಷ್ಟು ದುಷ್ಮನ್‌ಗಳನ್ನು ಸೃಷ್ಟಿಸಿಕೊಳ್ಳದೇ ಹೋಗಿದ್ದರೆ ಮಾಹಿನ್ ಇಂಥಾದ್ದೊಂದು ದುಸ್ಸಾಹಸಕ್ಕೆ ಕೈಹಾಕುತ್ತಿರಲಿಲ್ಲ. ಕೋಳಿ ಪಯಾಜ್‌ನ ಕೊಲೆ ಮತ್ತು ಅದಕ್ಕೆ ತನ್ವೀರ್ ಸಾಧಿಸಿದ ಪ್ರತೀಕಾರದ ಹೊತ್ತಿನ ಮುಸ್ಲಿಂ ಪಾತಕಲೋಕಕ್ಕೂ, ಆಲಿ ಕೌನ್ಸಿಲರ್ ಆಗುವ ಸಂದರ್ಭದ ಪರಿಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಆಲಿಯ ಗುರುವಿನಂತಿದ್ದ ತನ್ವೀರ್ ಭೂಗತ ಉಸಾಬರಿಯನ್ನೇ ಬಿಟ್ಟುಬಿಟ್ಟಿದ್ದ. ಆತನ ಬಲಗೈ ಬಂಟನಂತಿದ್ದ ಇಕ್ಬಿಯಾಕ್ ಪೈಲ್ವಾನ್ ಬಂಡೆದ್ದು ಶಿವಾಜಿನಗರದ ಡಾನ್ ಪಟ್ಟಕ್ಕೇರಿದ್ದ. ತನ್ವೀರ್‌ನ ಪರಮಾಪ್ತನಂತಿದ್ದ ತಂಬಾಲು ನಾಸಿಕ್ ಭೂಗತ ವಲಯವನ್ನೇ ತೊರೆದುಹೋಗಿದ್ದ. ತನ್ವೀರ್ ಪಾಳೆಯದ ಮಹಾನ್ ಫೈಟರ್ ತರಕಾರಿ ಖಲೀಲ್ ತನ್ನದೇ ತಾಪತ್ರಯಕ್ಕೆ ಸಿಲುಕಿ ನಾಪತ್ತೆಯಾದ. ಆಲಿಯ ಪಾಲಿಗೆ ಆಪದ್ಬಾಂಧವನಂತಿದ್ದ ಗೋರಿಪಾಳ್ಯದ ಅಲ್ತಾಫ್ ಕೂಡ ತನ್ನ ಪಾಡಿಗೆ ತಾನಿದ್ದು ದೂರಾದ ನಂತರ ಆಲಿ ಒಬ್ಬಂಟಿಯಾದ. ಆಲಿಯ ದುರ್ದಿನಗಳು ಶುರುವಾಗಿದ್ದೇ ಅಲ್ಲಿಂದ.

ಆಲಿಗೆ ದುಷ್ಮನ್‌ಗಳಂತಿದ್ದದ್ದು ಭೈರಸಂದ್ರದ ಅಜಗರ್, ಗುರಪ್ಪನಪಾಳ್ಯದ ಸಮೀರ್-ನವಾಜ್, ಯಾರಬ್‌ನಗರದ ಚೊಂಚಾ ಇಸ್ಮಾಯಿಲ್‌ನ ಮಕ್ಕಳು ಮತ್ತು ಭಕ್ಷಿ ಗಾರ್ಡನ್ನಿನ ಅತ್ತೂಪ್. ಯಾವತ್ತು ಜಮೀರ್ ಕಾರಣಕ್ಕೆ ಮಾಹಿನ್ ಮತ್ತು ಆಲಿ ಮಧ್ಯೆ ವೈರ ಶುರುವಾಯಿತೋ ಆಲಿಯ ದುಷ್ಮನ್‌ಗಳಿಗೆ ಶಕ್ತಿ ಬಂದಂತಾಯ್ತು. ಅದಕ್ಕೆ ಕಾರಣವಾಗಿದ್ದು 2009 ಸೆಪ್ಟೆಂಬರ್ 15ರಂದು ಇಲಿಯಾಸ್‌ನಗರದಲ್ಲಿ ನಡೆದ ಮಚ್ಚೆ ಶೌಕತ್‌ನ ಕೊಲೆ.

ಮೈಕೋ ಲೇಔಟ್ ಪೊಲೀಸ್ ಠಾಣೆಯ ವ್ಯಾಪ್ತಿಯ


ದಿವಾನ್ ಆಲಿ

ಬಿಸ್ಮಿಲ್ಲಾನಗರದಲ್ಲಿ ಫುಟ್ ಪಾತ್ ಪಕ್ಕ ಮೀನಿನ ವ್ಯಾಪಾರ ಮಾಡಿಕೊಂಡಿದ್ದ ಶೌಕತ್‌ಗೆ ಹಫ್ತಾ ಕೊಡುವಂತೆ ಪೀಡಿಸುತ್ತಿದ್ದವನು ಅದೇ ಏರಿಯಾದ ರೌಡಿ ಬೈಲ್ ಜಿಯಾ. ಶೌಕತ್ ಪೊಲೀಸ್ ಠಾಣೆಗೆ ದೂರು ಕೊಟ್ಟ. ಬೈಲ್ ಜಿಯಾ ಹೇಳಿಕೇಳಿ ಮಾಹಿನ್‌ನ ಶಿಷ್ಯ. ಪೊಲೀಸರು ಮಾಹಿನ್ ಮರ್ಜಿಗೆ ಬಿದ್ದು ಶೌಕತ್‌ನನ್ನೇ ಗದರಿಸಿ ಓಡಿಸಿದ್ದರು. ಅಂತಿಮವಾಗಿ ಶೌಕತ್ ಮಾಹಿನ್ ತಂಡಕ್ಕೇ ಬಲಿಯಾದ. ಬಿಸ್ಮಿಲ್ಲಾನಗರದ ಶೌಕತ್‌ನ ಮನೆಗೇ ನುಗ್ಗಿದ ಬೈಲ್ ಜಿಯಾ ಸಮೀರ್-ನವಾಜ್‌ರ ಹಂತಕ ಪಡೆ ಆತನನ್ನು ಮನೆಯಿಂದ ಹೊರಕ್ಕೆಳೆದು ತಂದು ಕೊಚ್ಚಿ ಹಾಕಿತು. ಪುಟ್ಟಪುಟ್ಟ ಮೂವರು ಮಕ್ಕಳ ತಂದೆ ಶೌಕತ್ ಅನ್ಯಾಯವಾಗಿ ಮಾಹಿನ್ ಶಿಷ್ಯರಿಗೆ ಬಲಿಯಾದ.

ಪೊಲೀಸರ ದೋಖಾ


ಹತ್ಯೆಯಾದ ಸ್ಥಳ...

ಶೌಕತ್‌ನ ಅಣ್ಣ ಬರ್ಕತ್ ಮಾಹಿನ್‌ನ ಹೆಸರನ್ನೂ ಸೇರಿಸಿ ದೂರು ಕೊಟ್ಟಿದ್ದ. ಮಾಹಿನ್‌ನ ದುಡ್ಡಿನ ಮುಂದೆ ಪೊಲೀಸ್ ನಿಯತ್ತೇ ಸತ್ತುಹೋಗಿತ್ತು. ಆಗ ಆಡುಗೋಡಿಗೆ ಎಸಿಪಿಯಾಗಿದ್ದ ನಾಗರಾಜ್ ಅದೆಷ್ಟು ಲಕ್ಷ ಮುಕ್ಕಿದರೋ ಗೊತ್ತಿಲ್ಲ; ಮಾಹಿನ್ ಹೆಸರಿದ್ದ ದೂರನ್ನೇ ಹರಿದು ಕಸದಬುಟ್ಟಿಗೆ ಎಸೆದರು. ಶೌಕತ್‌ನ ಪತ್ನಿಯಮ್ಮ ಠಾಣೆಗೆ ಎಳೆದುತಂದಿದ್ದೇ ತಾವೇ ಬರೆಸಿದ ದೂರಿಗೆ ಸಹಿ ಪಡೆದು ಮಾಹಿನ್‌ನನ್ನು ಬಚಾವು ಮಾಡಿಬಿಟ್ಟರು.

ಇದು ಮಾಹಿನ್‌ನ ರಕ್ತದಾಹಕ್ಕೆ ಎಂಥಾ ಕುಮ್ಮಕ್ಕಾಯಿತೆಂದರೆ, ಶೌಕತ್‌ನನ್ನು ಕೊಲ್ಲಿಸಿದ ಎರಡೇ ತಿಂಗಳಿಗೆ ಮಾಹಿನ್ ನಸ್ರು ಅಣ್ಣ ಜಬಿಯನ್ನು ಕೊಲ್ಲಿಸಿದ. ಎಲೆಕ್ಟ್ರಾನಿಕ್ ಸಿಟಿ ಪಕ್ಕದ ಜಬಿಯ ಮನೆಗೇ ನುಗ್ಗಿದ ಮಾಹಿನ್ ಬಂಟರು ಆತನ ಹೆಂಡತಿ ಮಕ್ಕಳ ಎದುರಲ್ಲೇ ಕೊಚ್ಚಿ ಕೊಂದಿದ್ದರು. ಈ ಪ್ರಕರಣದಲ್ಲಿ ಜಬಿಯ ಪತ್ನಿ ಮಾಹಿನ್ ಹೆಸರನ್ನು ಸೇರಿಸಿ ದೂರು ಕೊಟ್ಟಿದ್ದಳು. ಎಫ್‌ಐಆರ್‌ನಲ್ಲಿ ಮಾಹಿನ್ ಹೆಸರಿತ್ತಾದರೂ ನಂತರ ಚಾರ್ಜ್‌ಶೀಟ್‌ನಿಂದ ಆತನ ಹೆಸರನ್ನೇ ಪೊಲೀಸರು ಕೈಬಿಟ್ಟಿದ್ದರು.

ಶಾಸಕ ಜಮೀರ್ ವಿರೋಧಿ ಎಂಬ ಕಾರಣಕ್ಕೆ ಮಾಹಿನ್‌ಗೆ ಸರ್ಕಾರಿ ಕುಮ್ಮಕ್ಕಿತ್ತೋ ಅಥವಾ ಆತನ ರೊಕ್ಕ ಕೆಲಸ ಮಾಡಿತ್ತೋ ಗೊತ್ತಿಲ್ಲ. ಕೊಲೆಯಾದವರ ಬಂಧುಗಳು ಲಿಖಿತ ದೂರು ಕೊಟ್ಟರೂ ಕೂಡ ಹೇಗೋ ಮಾಹಿನ್ ನುಣುಚಿಕೊಳ್ಳುತ್ತಿದ್ದ. ಇದ್ಯಾವುದಕ್ಕೂ ಆಲಿ ತಲೆಕೆಡಿಸಿಕೊಳ್ಳದಿದ್ದರೂ ವಿನಾಕಾರಣ ಆತನ ಹೆಸರು ಈ ಪ್ರಕರಣಗಳಲ್ಲಿ ಕೇಳಿಬರುತ್ತಿದ್ದದ್ದು ಆತ ಮಾಹಿನ್‌ನ ದುಷ್ಮನ್ ಎಂಬ ಕಾರಣಕ್ಕೆ. ಇದಕ್ಕಿದ್ದ ಮತ್ತೊಂದು ಕಾರಣವೆಂದರೆ ಮಚ್ಚೆ ಶೌಕತ್ ಕೊಲೆಯನ್ನು ಕಣ್ಣಾರೆ ಕಂಡಿದ್ದ ಚಾಂದ್ ಎಂಬಾತ ಆಲಿಯ ಶಿಷ್ಯನಾಗಿದ್ದದು. ಆಲಿಯೇ ತನ್ನ ಹುಡುಗನನ್ನು ಬಿಟ್ಟು ತನ್ನ ವಿರುದ್ಧ ಕೋರ್ಟಿನಲ್ಲಿ ಸಾಕ್ಷಿ ಹೇಳಿಸುತ್ತಿದ್ದಾನೆಂದು ಮಾಹಿನ್ ಲೆಕ್ಕ ಹಾಕಿದ್ದ.

ಆ ಹೊತ್ತಿಗೆ ಮಂಡ್ಯ ಜೈಲಿನಲ್ಲಿದ್ದ ಆಲಿಗೆ ಇದ್ಯಾವುದೂ ಗೊತ್ತೇ ಇರಲಿಲ್ಲ. ಜಮೀರ್ ವಿರುದ್ಧ ರೊಚ್ಚಿಗೆದ್ದ ಮಾಹಿನ್ ತನ್ನ ವಿರುದ್ಧ ಕತ್ತಿ ಮಸೆಯುತ್ತಿದ್ದಾನೆಂಬುದು ಆಲಿಗೆ ಶುರುವಿನಲ್ಲೇ ಗೊತ್ತಾಗಿತ್ತು. ಯಾರನ್ನಾದರೂ ಮುಗಿಸಲು ಮಾಹಿನ್ ನಿರ್ಧರಿಸಿದನೆಂದರೆ ಆತನ ಕಾರ್ಯಾಚರಣೆಯೇ ವಿಲಕ್ಷಣ ಶೈಲಿಯಲ್ಲಿರುತ್ತದೆ. ಉಪಾಯವಾಗಿ ತನ್ನ ದುಷ್ಮನ್‌ನ ಜೊತೆ ರಾಜಿ ಮಾಡಿಕೊಂಡಂತೆ ನಟಿಸುತ್ತಾನೆ. ಕರೆದು ಬರಿಯಾನಿಯನ್ನೂ ತಿನ್ನಿಸುತ್ತಾನೆ. 'ನಾವಿಬ್ಬರೂ ಭಾಯಿ ಭಾಯಿ' ಎಂದು ತಬ್ಬಿಕೊಂಡು ಕೈಗಿಷ್ಟು ಕಾಸನ್ನು ಕೊಡುತ್ತಾನೆ. ನಂಬಿದ ದುಷ್ಮನ್ ಮೈಮರೆಯುತ್ತಾನೆ. ಅದನ್ನೇ ಕಾದು ಮಾಹಿನ್ ಮುಗಿಸಿಬಿಡುತ್ತಾನೆ.

ಖುರಾನ್ ಪ್ರಮಾಣ

ಈ ರೀತಿ ರಾಜಿ ನಟಿಸಿಯೇ ಮೊದಲು ಕಲಾಸಿಪಾಳ್ಯದ ಚಟ್ನಿ ಸಲೀಮ್‌ನನ್ನು ಕೊಲ್ಲಿಸಿದ. ತಿಲಕ್‌ನಗರದ ಶೇರೂ ಜೊತೆ ಕೂತು ಬರಿಯಾನಿ ತಿಂದು ಒಂದೇ ತಿಂಗಳಿಗೆ ಆತನನ್ನು ಮುಗಿಸಿಬಿಟ್ಟಿದ್ದ. ನಂತರ ಬಡೇ ಮಕಾನ್ ಏರಿಯಾದ ಅಜಗರ್ ತಮ್ಮ ರಿಯಾಜ್ ಜೊತೆ ರಾಜಿ ಮಾಡಿಕೊಂಡ. ನಂಬಿದ ರಿಯಾಜ್ ಯಾವಾಗಿದ ಗಳಿಗೆಯನ್ನೇ ಕಾದು ಹುಡುಗರನ್ನು ಬಿಟ್ಟು ಕತ್ತರಿಸಿ ಹಾಕಿದ್ದ. ತೀರ ಇತ್ತೀಚೆಗೆ ನಸ್ರು ಅಣ್ಣ ಜಬಿಯನ್ನು ಕರೆಸಿಕೊಂಡು ಕೈಗಿಷ್ಟು ಕಾಸುಕೊಟ್ಟು 'ನಂದೂ ನಿಂದೂ ದುಷ್ಮನಿ ಖತಂ' ಎಂದೇ ಖುರಾನ್ ಮೇಲೆ ಆಣೆಯಿಟ್ಟು ಪ್ರಮಾಣ ಮಾಡಿದ್ದ. ಇದಾಗಿ ತಿಂಗಳಿಗೇ ತನ್ನ ಛೇಲಾ ಷಾನವಾಜ್‌ನನ್ನು ಬಿಟ್ಟು ಜಬಿಯನ್ನು ಕೊಂದು ಹಾಕಿದ್ದ.

ಯಾವತ್ತು ಮಂಡ್ಯ ಜೈಲಿಗೆ ಬಂದು ಆಲಿಯನ್ನು ಕಂಡು ಖುರಾನ್ ಮುಂದಿಟ್ಟು 'ನಂದೂ ನಿಂದೂ ಏನೂ ಇಲ್ಲ, ನಾನು ನೀನೂ ಭಾಯಿ ಭಾಯಿ....' ಎಂದು ಮಾಹಿನ್ ಕೈ ಮಿಲಾಯಿಸಿದನೋ ಆಗಲೇ ಆಲಿಗೆ ಸಾವಿನ ವಾಸನೆ ಹತ್ತಿದೆ. ಅದೇ ಹೊತ್ತಿಗೆ ಪಾಲಿಕೆ ಚುನಾವಣೆ ಬಂದಿದೆ. ಬನಶಂಕರಿ ದೇವಸ್ಥಾನ ವಾರ್ಡಿಗೆ ಆಲಿ ಜೆಡಿಎಸ್ ಅಭ್ಯರ್ಥಿಯಾಗಿ ನಿಂತರೆ ಮಾಹಿನ್ ಪಕ್ಷೇತರನಾಗಿ ಚಿಕ್ಕಪೇಟೆಯಲ್ಲಿ ಸ್ಪರ್ಧಿಸಿದ್ದಾನೆ. ಆಲಿ ಗೆದ್ದನಾದರೂ ಮಾಹಿನ್‌ಗೆ ಠೇವಣಿ ಕೂಡ ಹುಟ್ಟಲಿಲ್ಲ.

ಜಮೀರ್ ಪಾಳೆಯದಲ್ಲಿ ತನ್ನ ಪ್ರತಿಸ್ಪರ್ಧಿಯಂತಿದ್ದ ಆಲಿ ಗೆದ್ದು ತಾನು ಸೋತಿದ್ದನ್ನು ಮಾಹಿನ್ ಹೇಗೆತಾನೆ ಸಹಿಸಲು ಸಾಧ್ಯ? ಮೊದಲೇ ಆಲಿಯನ್ನು ಮುಗಿಸಲು ನಿರ್ಧರಿಸಿದ್ದನಲ್ಲ; ಕ್ರಮೇಣ ಜೈಲಲ್ಲಿದ್ದ ಭೈರಸಂದ್ರದ ಅಜಗರ್‌ನನ್ನು ಸಂಪರ್ಕಿಸಿದ್ದಾನೆ. ಅಜಗರ್ ಆಲಿಯ ಹಳೇ ದುಷ್ಮನ್. ಹಿಂದೊಮ್ಮೆ ನಸ್ರು ಮತ್ತು ಜಬಿಯನ್ನು ಛೂ ಬಿಟ್ಟು ತನ್ನೆರಡೂ ಕೈಗಳನ್ನು ಲ್ಯಾಪ್ಸ್ ಮಾಡಿದ್ದೇ ಆಲಿ ಎಂದು ಅಜಗರ್ ಕಿಡಿಕಾರುತ್ತಿದ್ದ. ಈ ಹೊತ್ತಿಗಾಗಲೇ ಇಲಿಯಾಸ್‌ನಗರದ ಅಫ್ಜಲ್ ಕೊಲೆ ಕೇಸಿನಲ್ಲಿ ಜೀವಾವಧಿ ಶಿಕ್ಷೆಗೀಡಾಗಿದ್ದ ಅಜಗರ್‌ಗೆ ಮಾಹಿನ್‌ನ ಬೆಂಬಲ ಸಿಕ್ಕಿದ್ದೇ ಆನೆ ಬಲ ಬಂದಂತಾಯ್ತು.


ಅಜಗರ್ ಮಾತ್ರವಲ್ಲದೇ ಜೈಲಿನಲ್ಲಿದ್ದ ಪಂಟರ್ ಖಲೀಮ್, ಬೈಲ್‌ಜಿಯಾ, ನೀಲಸಂದ್ರದ ಷಾನವಾಜ್, ಗುರಪ್ಪನಪಾಳ್ಯದ ಸಮೀರ್ ಮತ್ತು ನವಾಜ್‌ರನ್ನು ಜೈಲಿಗೆ ಹೋಗಿ ಎಂಟ್ರಿ ಹಾಕಿ ಮಾತಾಡಿಸಿ ಬಂದ ಮಾಹಿನ್ ಆಲಿಯ ವಿರುದ್ಧ ಕಟುಕರೆಲ್ಲರನ್ನೂ ಒಗ್ಗೂಡಿಸಲಾರಂಭಿಸಿದ್ದಾನೆ. ಇದು ಆಲಿಗೆ ಗೊತ್ತಾಗಿದೆ. ಇಷ್ಟರಲ್ಲೇ ತನ್ನ ಮೇಲೆ ದಾಳಿ ನಡೆಯಲಿದೆ ಎಂಬುದು ಖಾತರಿಯಾಗಿದೆ. ಆದರೆ ಹುಂಬತನವಿತ್ತಲ್ಲ; ತಾನು ಪಾಲಿಕೆ ಸದಸ್ಯನಾಗಿದ್ದರಿಂದ ತನ್ನನ್ನು ಅಷ್ಟು ಸಲೀಸಾಗಿ ಮಾಹಿನ್ ಮುಟ್ಟಲಿಕ್ಕಿಲ್ಲ ಎಂದೇ ಆಲಿ ಲೆಕ್ಕ ಹಾಕಿದ್ದ.

ರಾಬರಿ ಕೇಸ್


ಯಾವತ್ತು ಯಡ್ಡಿ ವಿರುದ್ಧ ಅತೃಪ್ತ ಶಾಸಕರೆಲ್ಲ ಬಂಡೆದ್ದು ಅವಿಶ್ವಾಸ ನಿರ್ಣಯ ತಂದರೋ; ಅಧಿವೇಶನದ ದಿನ ಶಾಸಕ ಜಮೀರ್ ಅಹ್ಮದ್ ನೇರವಾಗಿ ಕಮೀಶನರ್ ಶಂಕರ್ ಬಿದರಿಯ ಮೇಲೆ ಜಗಳಕ್ಕೆ ಬಿದ್ದರು. ಅದೇನಾಯಿತೋ ಗೊತ್ತಿಲ್ಲ ಇದಾಗಿ ತಿಂಗಳಿಗೇ ಆಲಿಯ ರಕ್ಷಣೆಗೆಂದು ನೇಮಿಸಿದ್ದ ಬಂದೂಕುಧಾರಿ ಪೊಲೀಸ್ ರಕ್ಷಣೆಯನ್ನು ರದ್ದುಪಡಿಸಿದ ಒಂದೇ ವಾರಕ್ಕೆ ಆಲಿಯನ್ನು ಮೈಸೂರು ರಸ್ತೆಯ ರಾಬರಿ ಕೇಸಿನಲ್ಲಿ ಸಿಲುಕಿಸಲಾಯ್ತು.

ಚನ್ನಪಟ್ಟಣದ ಶಾಸಕ ಅಶ್ವತ್ಥ್ ಗೆ ಕೊಟ್ಟಿದ್ದ ಎರಡು ಕೋಟಿಯಷ್ಟು ಬಿಜೆಪಿ ರೊಕ್ಕವನ್ನು ಮಾರ್ಗ ಮಧ್ಯದಲ್ಲೇ ದುಷ್ಕರ್ಮಿಗಳು ದಾಳಿ ನಡೆಸಿ ಕಿತ್ತು ಕೊಂಡಿದ್ದರು. ಅದನ್ನು ಸಾಗಿಸುತ್ತಿದ್ದವನು ಚನ್ನಪಟ್ಟಣದ ಪುರಸಭೆಯ ಅಧ್ಯಕ್ಷ ಜಿಯಾವುಲ್ಲಾ. ಈ ಕೇಸಿನಲ್ಲಿ ಅದ್ಯೇಗೋ ಆಲಿಯ ಹೆಸರು ಕೇಳಿ ಬಂತು. ದೂರು ಕೊಟ್ಟಿದ್ದ ಜಿಯಾವುಲ್ಲಾನೇ ನಡೆದ


ಆಲಿ ಕುಟುಂಬದವರ ರೋದನ


ಮಾದೇಗೌಡ


ಮಂಡ್ಯ
ಡಿಸಿ ತಮ್ಮಣ್ಣ V/s ಮಾದೇಗೌಡ
ಅನಾಗರಿಕ ಜಗಳ!


ತಮ್ಮಣ್ಣ


ಮಾಜಿ ಸಂಸದ ಮತ್ತು ಮಾಜಿ ಮುತ್ಸದ್ದಿ ಕಾಂಗ್ರೆಸ್ಸಿನ ಮುದಿ ರಾಜಕಾರಣಿ ಜಿ.ಮಾದೇಗೌಡ ಮತ್ತು ಮದ್ದೂರಿನ ಮಾಜಿ ಕಾಂಗ್ರೆಸ್ಸಿಗ, ಮಾಜಿ ಶಾಸಕ ಡಿಸಿ ತಮ್ಮಣ್ಣರ ನಡುವೆ ನಡೆಯುತ್ತಿರುವ ಕಾಳಗ ಸದ್ಯಕ್ಕೆ ನಿಲ್ಲುವಂತೆ ಕಾಣುತ್ತಿಲ್ಲ. ಇಷ್ಟು ದಿನ ಪತ್ರಿಕಾ ಹೇಳಿಕೆಗಳಿಗೆ, ಪತ್ರಿಕಾಗೋಷ್ಠಿಗೆ ಸೀಮಿತವಾಗಿದ್ದ ಜಗಳ ಈಗ ಹೊಸ ತಿರುವನ್ನು ಪಡೆದುಕೊಂಡಿದೆ. ತನ್ನ ಮೇಲಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಆರೋಪವನ್ನ ಮುಚ್ಚಿಕೊಳ್ಳಲು ತಮ್ಮಣ್ಣ ಗೆಟ್ ಯಡ್ಡಿಯಂತೆ ಪತ್ರಿಕೆಯೊಂದರಲ್ಲಿ 'ಶತಮಾನದ ಭೂ ಹಗರಣದ ಪಿತಾಮಹ' ಹಾಗೂ 'ಭ್ರಷ್ಟರು ನೀವು ಮತ್ತು ನಿಮ್ಮ ಮಗನೋ ಅಥವಾ ನಾನೋ' ಎಂದು ಮುಕ್ಕಾಲು ಪೇಜ್ ಜಾಹೀರಾತು ನೀಡುವಷ್ಟರ ಮಟ್ಟಕ್ಕೆ ಬೆಳೆದಿದೆ. ಇದು ಎರಡು ಮುದಿ ಮದಗಜಗಳ ಕಾಳಗದಂತೆ ಇದ್ದು ಜನರಿಗೆ ಸಾಕಷ್ಟು ರಂಜನೆಯನ್ನೂ ಒದಗಿಸುತ್ತಿದೆ.

ಮದ್ದೂರಿನ ಚಿಕ್ಕರಸಿನಕೆರೆ ಹೋಬಳಿಯ ವೈಶಿಷ್ಟ್ಯವೆಂದರೆ ಇದೇ ಹೋಬಳಿಗೆ ಸೇರಿದ ಮೂವರು 'ದೊಡ್ಡ ಹೆಸರು' ಮಾಡಿದ್ದಾರೆ. ಒಬ್ಬರು ಪುರಾತನ ರಾಜಕಾರಣಿ ಜಿ.ಮಾದೇಗೌಡ. ಕಾಂಗ್ರೆಸ್‌ನಿಂದ ಸರಾಗವಾಗಿ ವಿಧಾನಸಭೆಗೆ, ಸಂಸತ್ತಿಗೆ ಹೋಗುತ್ತಿದ್ದ ಜಿ.ಮಾದೇಗೌಡರ ಬಗ್ಗೆ ಜನರಲ್ಲಿ ಒಂದಷ್ಟು ಗೌರವ ಇತ್ತು. ಇಂತಹ ಮಾದೇಗೌಡರ ಸಾಧನೆ ಎಂದರೆ ತನ್ನ ಮಾಲೀಕತ್ವದ ಭಾರತೀ ಎಜುಕೇಶನ್ ಟ್ರಸ್ಟ್ ಎಂಬ ಶಿಕ್ಷಣ ಸಂಸ್ಥೆಯನ್ನು ಕಟ್ಟಿದ್ದು. ಯಾವ ಸ್ಥಾನದಲ್ಲಿದ್ದರೂ ಕಾವೇರಿಯ ವಿಚಾರ ಬಂದಾಗ ಬೀದಿಗಿಳಿದು ಹೂಂಕರಿಸುತ್ತಾ ಅದರ ನಾಯಕನಾಗಿದ್ದು. ಅಷ್ಟು ಹೆಸರು ಕೆಡಿಸಿಕೊಳ್ಳದ ಇವರೆಡೆಗೆ ಜನರು ಗೌರವವಿಟ್ಟುಕೊಂಡಿದ್ದರು. ಆದರೆ ಹಲವಾರು ರೈತರ ಭೂಮಿಯನ್ನ ಕಿತ್ತುಕೊಂಡು ಹನುಮಂತನಗರದಲ್ಲಿ ಆತ್ಮಲಿಂಗ ದೇವಸ್ಥಾನದ ಸುತ್ತ ಮುತ್ತೊಂದು ಸಾಮ್ರಾಜ್ಯ ಕಟ್ಟಿಸುವ ತೆವಲಿಗೆ ಬಿದ್ದ ಮೇಲೆ ಎಲ್ಲವೂ ಅದಲು ಬದಲಾದವು.


ಇನ್ನು ಎರಡನೆಯ ಕುಳ ಅಂಬರೀಷ್. ಮೂವತ್ತೋ ಈ ಊರಿನ ನಂಟು ಅಂಬರೀಷ್‌ಗೆ ಇಲ್ಲವಾಗಿದ್ದರೂ, ರಾಮನಗರದಲ್ಲಿ ಸಿ.ಎಂ.ಲಿಂಗಪ್ಪನೆದುರು ಎಂಎಲ್‌ಎ ಚುನಾವಣೆಯಲ್ಲಿ ಸೋತ ಮೇಲೆ ಮಂಡ್ಯಕ್ಕೆ ಬಂದು ನಿಂತು ಎಂಪಿಯಾಗಲು ಊರ ನಂಟನ್ನು ಹಿಂದಿಗಿಂತಲೂ ಹೆಚ್ಚು ಹೇಳಿಕೊಳ್ಳುವುದು ಅನಿವಾರ್ಯವಾಗಿತ್ತು. ಜೆಡಿಎಸ್‌ನಿಂದ ಕಾಂಗ್ರೆಸ್ಸಿಗೆ ಬಂದ ಅಂಬರೀಷ್‌ಗೆ ಇಲ್ಲಿ ಟಿಕೆಟ್ ಗಟ್ಟಿಯಾಯ್ತು. ಅಲ್ಲಿಂದ ಮುಂದಕ್ಕೆ ಜಿ.ಮಾದೇಗೌಡರು ಎಂಪಿಯಾಗುವ ಆಸೆಯನ್ನು ಬಿಡಬೇಕಾಯ್ತು.



ಮೂರನೆಯ ವ್ಯಕ್ತಿ ಡಿ.ಸಿ.ತಮ್ಮಣ್ಣ. ಕಿರುಗಾವಲು ಕ್ಷೇತ್ರದಲ್ಲಿ ಎಂಎಲ್‌ಎ ಆಗುವ ಮುಂಚೆ ತಮ್ಮಣ್ಣ ಕೆಎಎಸ್ ಅಧಿಕಾರಿಯಾಗಿ ಅತ್ಯಂತ ಭ್ರಷ್ಟ ಆಡಳಿತ ನಡೆಸಿ ನೂರಾರು ಕೋಟಿ ಸಂಪಾದಿಸಿದ್ದ. ದೇವೇಗೌಡರ ಮಗನಿಗೆ ಮಗಳು ಕೊಟ್ಟ ಬೀಗ ಎನ್ನುವುದು ಈತನ ರಾಜಕೀಯ ಪವರ್ ಆಗಿತ್ತು. ಈತ ನಿವೃತ್ತಿಯ ನಂತರ ಜಿ.ಮಾದೇಗೌಡರ ಸ್ವಕ್ಷೇತ್ರ ಕಿರುಗಾವಲಿಗೆ ಬಂದು ಚುನಾವಣೆಗೆ ನಿಂತರು. ಆಗ ಪ್ರದೇಶ ಕಾಂಗ್ರೆಸ್‌ನ ಲೀಡರ್ ಆಗಿದ್ದ ಎಸ್.ಎಂ.ಕೃಷ್ಣರಿಗೆ ತಮ್ಮ ಹಳೆಯ ವಿರೋಧಿ ಜಿ.ಮಾದೇಗೌಡರನ್ನು ಹಣಿಯಲು ಇಂತಹದೊಂದು ಕುಳವೂ ಬೇಕಿತ್ತು. ಹಣದ ಥೈಲಿ ಇಟ್ಟುಕೊಂಡು ಕಿರುಗಾವಲಿಗೆ ಬಂದು ಕೂತ ತಮ್ಮಣ್ಣ ಇಡೀ ಕ್ಷೇತ್ರವನ್ನು ಆವರಿಸಿಕೊಂಡರು.


ಮಧು


ತನ್ನ ಪಾಳೆಯಪಟ್ಟಿಯನ್ನ ಈ ರೀತಿ ಸ್ವಂತ ಹೋಬಳಿಯ ಇಬ್ಬರು ದಧೂತಿಗಳು ಬಂದು ಆವರಿಸಿಕೊಂಡಿದ್ದು ನೋಡಿ ಮಾದೇಗೌಡರು ಕನಲಿಹೋದರು. ತನ್ನ ಪುರಾತನ ಶೈಲಿಯ ರಾಜಕಾರಣಕ್ಕೆ ಈಗ ಕಿಮ್ಮತ್ತಿಲ್ಲ ಎಂಬುದನ್ನು ಅರಿತುಕೊಂಡು, ಮಗ ಮಧುವನ್ನು ರಾಜಕಾರಣಕ್ಕೆ ಬಿಟ್ಟು, ತಾನು ಯಥಾಪ್ರಕಾರ ಅವಕಾಶ ಸಿಕ್ಕಾಗಲೆಲ್ಲಾ ಕಾವೇರಿ ಹೋರಾಟಗಾರನ ಪಾರ್ಟ್ ಹಾಕುತ್ತಾ ಕೂತರು. ಅದಕ್ಕೆ ಸರಿಯಾಗಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಕಾವೇರಿ ಬಿಕ್ಕಟ್ಟು ಬಿಗಡಾಯಿಸಿತು. ಆದರೆ ಈ ಸತ್ವಪರೀಕ್ಷೆಯಲ್ಲಿ ಮಾದೇಗೌಡರು ಸೋತು ಹೋದರು. ಬೆಂಗಳೂರಿನಿಂದ ಪಾದಯಾತ್ರೆ ಹೊರಟ ಕೃಷ್ಣರನ್ನು ಮಂಡ್ಯದೊಳಕ್ಕೆ ಬಿಟ್ಟುಕೊಳ್ಳುವುದಿಲ್ಲ ಎಂದು ಅಬ್ಬರಿಸಿದ್ದ ಮಾದೇಗೌಡರು, ಬಿಡದಿಯಲ್ಲೇ ಬಿಕರಿಯಾಗಿ ಬಿಟ್ಟರು. ಮುಂದಿನ ಚುನಾವಣೆಯಲ್ಲಿ ಮಧುಗೆ ಕಿರುಗಾವಲು ಟಿಕೆಟ್ಟನ್ನು ಖಾತರಿಪಡಿಸಿಕೊಂಡು ಸುಮ್ಮನಾಗಿದ್ದರು.


ಜಾಹೀರಾತು ಸಮರ

ಆದರೆ ಕೃಷ್ಣ ತಮ್ಮಣ್ಣರ ಕೈಬಿಡಲಿಲ್ಲ, ತಾನೇ ಸ್ವಕ್ಷೇತ್ರ ಖಾಲಿ ಮಾಡಿಕೊಂಡು ಚಾಮರಾಜಪೇಟೆಗೆ ಹೋಗಿ, ಮದ್ದೂರನ್ನು ತಮ್ಮಣ್ಣನಿಗೂ, ಕಿರುಗಾವಲನ್ನು ಮಧುಗೂ ಕೊಟ್ಟರು. ಮಧು ಸೋತು, ತಮ್ಮಣ್ಣ ಗೆದ್ದರು. (ಬೀಗರನ್ನು ಗೆಲ್ಲಿಸಲು ದೇವೇಗೌಡರೂ ತಮ್ಮ ಪಕ್ಷದೊಳಗೇ ಬಿ.ಫಾರಂ ಗೊಂದಲ ಉಂಟಾಗುವಂತೆ ನೋಡಿಕೊಂಡಿದ್ದರು!) ಇದು ಮಾದೇಗೌಡರನ್ನು ಮತ್ತಷ್ಟು ಕೆರಳಿಸಿತು. ಅವರ ದುರಾದೃಷ್ಟಕ್ಕೆ ನಂತರದ ಚುನಾವಣೆಯಲ್ಲಿ ಕಿರುಗಾವಲು ಕ್ಷೇತ್ರವೇ ಇಲ್ಲದಂತಾಗಿ, ಅದು ಮದ್ದೂರಿನಲ್ಲಿ ವಿಲೀನವಾಯಿತು. ಸಿಟಿಂಗ್ ಎಂಎಲ್‌ಎಗಳೆಲ್ಲರಿಗೂ ಟಿಕೆಟ್ ಕೊಡಬೇಕೆಂಬ ಸೂತ್ರದನ್ವಯ ತಮ್ಮಣ್ಣರಿಗೇ ಮತ್ತೆ ಟಿಕೆಟ್ ಸಿಕ್ಕಿತು. ಇದುವರೆಗೆ ಗಾಂಧಿ ಭಜನೆ ಮಾಡುತ್ತಿದ್ದ ಮಾದೇಗೌಡರು, ಮಗ ಮಧುವನ್ನು ಬಿಜೆಪಿಗೆ ಕಳಿಸಿ ಟಿಕೆಟ್ ಪಡೆದುಕೊಂಡರು. ತಮ್ಮಣ್ಣ, ಮಧು ಇಬ್ಬರೂ ಸೋತು, ಜೆಡಿಎಸ್‌ನಿಂದ ಸಿದ್ದರಾಜು ಗೆದ್ದರು. ತನ್ನ ಮಗನಿಗೆ ಮೂರನೇ ಸ್ಥಾನವೇ ಗ್ಯಾರಂಟಿ ಎಂದು ಗೊತ್ತಿದ್ದರಿಂದ ಚುನಾವಣೆಯಲ್ಲಿ ಪರೋಕ್ಷವಾಗಿ ಸಿದ್ದರಾಜು ಪರ ಮಾದೇಗೌಡರು ಕೆಲಸ ಮಾಡಿದ್ದರು.

ಈ ಮಧ್ಯೆ ಸಿದ್ದರಾಜು ನಿಧನರಾಗಿ, ಮದ್ದೂರಿನಲ್ಲಿ ಉಪಚುನಾವಣೆ ಬಂದಿತು. ಮಾದೇಗೌಡರ ದುರಾದೃಷ್ಟಕ್ಕೆ, ಬಿಜೆಪಿಯವರು ತಮ್ಮಣ್ಣನಿಗೆ ಗಾಳ ಹಾಕಿ ತಮ್ಮ ಪಕ್ಷದ ಟಿಕೆಟ್ ಕೊಟ್ಟರು. ಕಾಂಗ್ರೆಸ್‌ನಲ್ಲಿ ಎಸ್.ಎಂ.ಕೃಷ್ಣರ ತಮ್ಮನ ಮಗ ತಮಗೆ ಹಿಂದಿನ ಚುನಾವಣೆಯಲ್ಲಿ ಬೆಂಬಲ ಕೊಡದೇ ಬಹಿರಂಗವಾಗಿ ವಿರೋಧಿಸಿದ್ದನ್ನು ನೋಡಿದ್ದ ತಮ್ಮಣ್ಣರಿಗೂ ಅದೇ ಬೇಕಿತ್ತು. ಮಧು ಮತ್ತು ಮಾದೇಗೌಡರಿಬ್ಬರೂ ಬೀದಿಯಲ್ಲಿ ನಿಂತು ಕೂಗಾಡಿದರು. ಮಂಡ್ಯದಲ್ಲಿ ಖಾತೆ ತೆರೆಯಲೇಬೇಕೆಂದು ನಿರ್ಧಾರ ಮಾಡಿಕೊಂಡಿದ್ದ ಆರ್.ಅಶೋಕ್ ಮತ್ತು ಯಡ್ಡಿ ಸಮಾಧಾನ ಮಾಡಿ ಅರೆಕಾಲಿಕ ಎಂಎಲ್‌ಸಿ ಪದವಿಯೊಂದನ್ನು ದಯಪಾಲಿಸಿದರು. ಇವರ ಅಸಹಕಾರ, ಸಿದ್ದರಾಜು ನಿಧನದ ಅನುಕಂಪ ಎಲ್ಲಾ ಸೇರಿ ತಮ್ಮಣ್ಣ ಸೋತರು.

ಇಷ್ಟೆಲ್ಲಾ ನಡೆದ ಮೇಲೆ ಇತ್ತೀಚೆಗೆ ಬಂದ ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳ ಸಂದರ್ಭದಲ್ಲಿ ಮಾದೇಗೌಡರು ಮತ್ತೊಮ್ಮೆ ಮಗ್ಗಲು ಬದಲಾಯಿಸಿದರು. ಅಷ್ಟು ಹೊತ್ತಿಗೆ ಮಧುವಿನ ಎಂಎಲ್‌ಸಿ ಅವಧಿ ಮುಗಿದಿದ್ದರಿಂದ ಬಿಜೆಪಿ ಸಹವಾಸದ ಅಗತ್ಯವಿರಲಿಲ್ಲ, ಮತ್ತೆ ಕಾಂಗ್ರೆಸ್‌ನ ಜೊತೆಗೆ ಸೇರಿಕೊಂಡರು. ತಮ್ಮಣ್ಣ ಅಷ್ಟು ಪಟ್ಟಾಗಿ ಈ ಸಾರಿ ಕೆಲಸ ಮಾಡದೇ ಇದ್ದದ್ದು, ಎಸ್‌ಎಂಕೆ, ಅಂಬರೀಷ್, ಮಾದೇಗೌಡರು ಒಟ್ಟಾದದ್ದು ಕಾಂಗ್ರೆಸ್‌ಗೆ ಲಾಭವಾಯಿತು. ಮದ್ದೂರು ತಾಲ್ಲೂಕು ಪಂಚಾಯ್ತಿ ಕಾಂಗ್ರೆಸ್ ಪಾಲಾಯಿತು.



ಈಗ ತಲೆಕೆಡಿಸಿಕೊಂಡಿದ್ದು ತಮ್ಮಣ್ಣ. ಬಿಜೆಪಿಯಲ್ಲೇ ಇದ್ದರೆ ಏನೂ ಪ್ರಯೋಜನವಿಲ್ಲ, ಲಿಂಗಾಯತರ ಪಾರ್ಟಿ ಎಂದು ಬ್ರಾಂಡ್ ಆಗಿರುವ ಬಿಜೆಪಿ ಕ್ಯಾಂಡಿಡೇಟ್ ಆಗಿ ಮಂಡ್ಯದಲ್ಲಿ ಎಂಎಲ್‌ಎ ಆಗುವುದು ಕಷ್ಟ. ಜಿ.ಪಂನಲ್ಲಿ ಬಿಜೆಪಿ ಒಂದು ಸೀಟೂ ಗೆಲ್ಲಲಾಗಿಲ್ಲ. ಹೀಗಾಗಿ ಮತ್ತೆ ಕಾಂಗ್ರೆಸ್ಸಿನ ಕಡೆಗೋ, ಇಲ್ಲಾ ಬೀಗರ ಕುಟುಂಬದ ಆಸ್ತಿಯಾಗಿರುವ ಜೆಡಿಎಸ್‌ಗೋ ವಲಸೆ ಹೋದರೆ ಹೇಗೆ ಎಂದು ತಮ್ಮಣ್ಣ ಯೋಚಿಸಿದಂತಿದೆ. ಎಸ್.ಎಂ.ಕೃಷ್ಣ ಮತ್ತು ಕುಮಾರಸ್ವಾಮಿ ಇಬ್ಬರ ಜೊತೆಗೂ ಈಗಾಗಲೇ ಮಾತಾಡಿದ್ದಾರೆ ಎಂಬ ಗುಲ್ಲೂ ಇದೆ. ಅದಕ್ಕೆ ತಕ್ಕನಾಗಿ ತಾನೇ ಹೇಳಿ, ಪತ್ರಿಕೆಯೊಂದರಲ್ಲಿ 'ಬಿಜೆಪಿಗೆ ತಮ್ಮಣ್ಣ ಗುಡ್‌ಬೈ' ಎಂದು ಲೇಖನವನ್ನೂ ಬರೆಸಿಕೊಂಡಿದ್ದಾರೆ. ಹೇಗೂ ಮುಂದಿನ ಚುನಾವಣೆಯಲ್ಲಿ ಕಲ್ಪನಾ ಸಿದ್ದರಾಜುಗೆ ಜೆಡಿಎಸ್ ಟಿಕೆಟ್ ಇಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಹೊನ್ನಲಗೆರೆ ರಾಮಕೃಷ್ಣ ಮತ್ತು ರಾಜೀಗೌಡರನ್ನು ನಿಭಾಯಿಸಿಕೊಂಡರೆ ಜೆಡಿಎಸ್‌ನಲ್ಲೇ ಟ್ರೈ ಮಾಡಬಹುದು, ಇಲ್ಲಾ ಎಸ್.ಎಂ.ಶಂಕರ್ ಮಗ ಗುರುಚರಣ್‌ಗೆ ಸ್ವಲ್ಪ ಕಾಯಲು ಹೇಳಿ ಕಾಂಗ್ರೆಸ್‌ನಲ್ಲೇ ಟ್ರೈ ಮಾಡಬಹುದು ಎಂತಲೂ ತಮ್ಮಣ್ಣ ಯೋಚಿಸುತ್ತಿದ್ದಾರೆ ಎಂಬುದು ಸದ್ಯದ ವದಂತಿ.

ಆದರೆ ಎಲ್ಲಕ್ಕೂ ಮೊದಲು ಜಿ.ಮಾದೇಗೌಡ ಮತ್ತು ಅವರ ಸುಪುತ್ರ ಮಧುವನ್ನು ಮೊದಲು ಸರಿಯಾಗಿ ಬಡಿದು ಕೂಡಿಸದಿದ್ದರೆ ಇದು ಕಷ್ಟ ಎಂದು ತಮ್ಮಣ್ಣ ಪ್ಲಾನ್ ಹಾಕಿದ್ದಾರೆ. ಹಿಂದೆ ಎಂಎಲ್‌ಎ ಉಪಚುನಾವಣೆಯ ಸಂದರ್ಭದಲ್ಲಿ ತಮ್ಮಣ್ಣರ ಬೆಂಬಲಿಗರು ಗಾಂಧಿ ಭವನಕ್ಕೇ ನುಗ್ಗಿ ಮಾದೇಗೌಡರನ್ನೇ ಎಳೆದಾಡಿದ್ದರು. ಅಷ್ಟು ಮಟ್ಟಕ್ಕೆ ಆಲೋಚಿಸಬಲ್ಲ ತಮ್ಮಣ್ಣ ಈಗ ಮತ್ತೊಮ್ಮೆ ಮಾದೇಗೌಡರಿಗೆ ಗುದ್ದಲು ರೆಡಿಯಾಗಿದ್ದಾರೆ.

ಇದನ್ನು ಮೊದಲೇ ಊಹಿಸಿದ ಮಾದೇಗೌಡರು ತಮ್ಮ ಶಿಷ್ಯರ ಮೂಲಕ ತಮ್ಮಣ್ಣರ ವಿರುದ್ಧ ಭೂಹಗರಣದ ಪಟಾಕಿ ಸಿಡಿಸಿದ್ದಾರೆ. ಇಂದು ರಾಜ್ಯದಲ್ಲಿ ಭೂಹಗರಣಗಳ ಸದ್ದು ಮಾಡುತ್ತಿರುವುದರಿಂದ, ಇಂತಹ ಭೂಹಗರಣಗಳನ್ನು ಎಐಎಡಿಬಿಯಲ್ಲಿದ್ದಾಗ ತಮ್ಮಣ್ಣ ಸಾಕಷ್ಟು ಮಾಡಿದ್ದುದನ್ನು ಇಟ್ಟುಕೊಂಡು ಪತ್ರಿಕಾಗೋಷ್ಠಿಗಳನ್ನು ನಡೆಸುತ್ತಿದ್ದಾರೆ. ಅದಕ್ಕೆ ಉತ್ತರವಾಗಿ ತಮ್ಮಣ್ಣ 'ಆಂದೋಲನ'ದಲ್ಲಿ ಮುಕ್ಕಾಲು ಪುಟ ಜಾಹೀರಾತನ್ನು ನೀಡಿ ಮಾದೇಗೌಡರ ವಿರುದ್ಧ ಕಿಡಿಕಾರಿಕೊಂಡಿದ್ದಾರೆ.


ನೋಟಿಫೈ, ಡೀನೋಟಿಫೈ ಮಾಡಿ ಹಣ ನುಂಗುವುದರಲ್ಲಿ ಬಿಜೆಪಿ ಸರ್ಕಾರ ಪೂರ್ತಿ ತಗುಲಿಕೊಂಡಿದೆ. ಇದರ ಕುರಿತು ವಿರೋಧ ಪಕ್ಷಗಳು ಪ್ರಶ್ನಿಸಿದರೆ, ಯಡ್ಡಿ ಬೇರೆಯವರ ವಿರುದ್ಧ ಕತ್ತಿ ಮಸೆಯುತ್ತಾರೆ. ಹಾಗೊಂದು ವೇಳೆ ಹಿಂದಿದ್ದ ಸರ್ಕಾರಗಳ ಭೂ ಹಗರಣಗಳ ತನಿಖೆಯಾದರೆ ತಮ್ಮಣ್ಣರೂ ಸಿಕ್ಕಿಹಾಕಿಕೊಳ್ಳುತ್ತಾರೆ. ಆದರೆ ಅದ್ಯಾವುದೂ ನಡೆಯದೆಂಬುದು ಅವರಿಗೆ ಚೆನ್ನಾಗಿ ಗೊತ್ತು. ಹಾಗಾಗಿ ಮಾದೇಗೌಡರ ಮೇಲೆ ಕೆಸರೆರಚಿ, ಮಧುವನ್ನೂ ಅದರಲ್ಲಿ ಸೇರಿಸಿದರೆ ಮುಂದಿನ ವಿಧಾನಸಭೆ ಚುನಾವಣೆಯ ಹೊತ್ತಿಗೆ ಅನುಕೂಲ ಎಂಬುದು ತಮ್ಮಣ್ಣರ ಲೆಕ್ಕಾಚಾರ. ಈ ತಂತ್ರಗಳಿಗೆ ಮಾದೇಗೌಡರು ಹೇಗೆ ಪ್ರತಿತಂತ್ರ ಮಾಡುತ್ತಾರೊ ಕಾದುನೋಡಬೇಕಿದೆ.

• ಲಕ್ಷ್ಮಣ್ ಚೀರನಹಳ್ಳಿ.

ಳಿಯಲ್ಲಿ ಆಲಿಯ ಪಾತ್ರವಿರಲಿಲ್ಲ ಎಂದು ಕೋರ್ಟಿಗೆ ಖಿತ ಅಫಿಡವಿಟ್ ಸಲ್ಲಿಸಿದಾಗಲೂ ಪೊಲೀಸರು ಆಲಿಯ ಸರನ್ನು ಸೇರಿಸಿಬಿಟ್ಟಿದ್ದರು.

ಶಾಸಕ ಜಮೀರ್ ಬೆಂಬಲಿಗನೆಂಬ ಒಂದೇ ಕಾರಣಕ್ಕೆ ನ್ನು ಬಿಜೆಪಿ ಸರ್ಕಾರ ಹಣಿಯುತ್ತಿದೆಯೆಂದು ಲಿಕ್ಕ ಕಿದ ಆಲಿ ಕಮೀಶನರ್ ಬಿದರಿಯವರನ್ನೇ ಕಂಡು ಗೆ ರಕ್ಷಣೆ ನೀಡುವಂತೆ ಅಂಗಲಾಚಿದ್ದ, ಮೇಯರ್ ರಾಜ್ ಕಾಲಿಗೆ ಬಿದ್ದು ತನ್ನ ಪ್ರಾಣ ಉಳಿಸುವಂತೆ ಕೇರಿಟ್ಟಿದ್ದ. ಈ ಎಲ್ಲದರ ಮಧ್ಯೆಯೇ ಮಾಹಿನ್ ತನ್ನ ರನ್ನು ಕಳಿಸಿ ಮುಚ್ಚಿ ಶೌಕತ್ ಕೊಲೆ ಕೇಸನ್ನು ರಾಜಿ ಮಾಡಿಸುವಂತೆ ಆಲಿಯನ್ನು ಪೀಡಿಸಲಾರಂಭಿಸಿದ್ದ.

ಇದಕ್ಕೂ ನನಗೂ ಏನೇನೂ ಸಂಬಂಧವಿಲ್ಲ, ಎಂದಮೇಲೆ ನಾನು ಎಲ್ಲಿಂದ ರಾಜಿ ಮಾಡಿಸಲಿ? ಎಂದು ಆಲಿ ಕೈಚೆಲ್ಲಿದ್ದ, ಶತಾಯಗತಾಯ ಮುಚ್ಚಿ ಶೌಕತ್ ಕೊಲೆಯನ್ನು ಮುಚ್ಚಿ ಹಾಕಲು ಹವಣಿಸುತ್ತಿದ್ದ ಮಾಹಿನ್ ತಲೆಯಲ್ಲಿ ಖತರ್‌ನಾಕ್ ಹುನ್ನಾರವೊಂದು ರೂಪುಗೊಂಡಿತ್ತು. ಶೌಕತ್ ಕೊಲೆ ಕೇಸಿನ ಸಾಕ್ಷಿಗಳಿಗೆಲ್ಲ ರಕ್ಷಣೆಯಂತಿರುವುದು ಆಲಿ ಮಾತ್ರ. ಆತನನ್ನೇ ಮುಗಿಸಿ ಬಿಟ್ಟರೆ ಸಾಕ್ಷಿ ಹೇಳಲು ಬೇರೆ ಯಾರೂ ಧೈರ್ಯ ಮಾಡಲಾರರು.




ಕೋರ್ಟ್ ಸ್ಕೆಚ್

ಒಂದೇ ಕಲ್ಲಿಗೆ ಎರಡು ಹಕ್ಕಿ ಎಂಬಂತೆ ಒಂದೆಡೆ ತನ್ನ ದುಷ್ಮನ್ ಆಲಿಯನ್ನೂ ಮುಗಿಸಿದಂತಾಯ್ತು, ಮತ್ತೊಂದೆಡೆ ಶೌಕತ್ ಕೊಲೆ ಪ್ರಕರಣವನ್ನೂ ಗತಿಕಾಣಿಸಿದಂತಾಯ್ತು, ತನ್ನ ದುಡ್ಡು ಮತ್ತು ಅಜಗರ್ ತಾಕತ್ತು ಸೇರಿ ಬಿಟ್ಟರೆ ಆಲಿಯನ್ನು ನಿಕಾಲಿ ಮಾಡುವುದು ಯಾವ ಮಹಾ ಎಂದೇ ಮಾಹಿನ್ ಲೆಕ್ಕ ಹಾಕಿದ್ದಾನೆ. ಶುರುವಿನಲ್ಲಿ ಕೋರ್ಟಿಗೆ ಬರುತ್ತಿದ್ದ ಆಲಿಯನ್ನು ಕೋರ್ಟ್ ಆವರಣದಲ್ಲೇ ಮುಗಿಸಲು ಸ್ಕೆಚ್ ಹಾಕಿದ್ದಾನೆ. ಮೊನ್ನೆ ಅಂದರೆ ೨೦೧೦ರ ನವೆಂಬರ್ 27ರಂದು ಸೆಷನ್ಸ್ ಕೋರ್ಟಿಗೆ ಬಂದಾಗಲೇ ಆಲಿಯನ್ನು ಮುಗಿಸಲು ಮಾಹಿನ್ ಸ್ಕೆಚ್ ಹಾಕಿದ್ದ. ಕಾವೇರಿ ಭವನದ ಹಿಂಭಾಗದ ಸೆಷನ್ಸ್ ಕೋರ್ಟಿನಲ್ಲಿ ತನ್ನ ತಮ್ಮ ಸಲೀಮ್, ಆಜಾದ್‌ನಗರದ ಸಲ್ಲು ತಮ್ಮ ಮೆಹಬೂಬ್, ಬಿಸ್ಮಿಲ್ಲಾನಗರದ ಬೈಲ್ ಜಿಯಾ, ನೀಲಸಂದ್ರದ ಹಾಸ ತಾಜ್ ಇತ್ಯಾದಿ ಐವತ್ತೂ ಹೆಚ್ಚು ಮಂದಿ ಹಂತಕರನ್ನು ಕಲೆ ಹಾಕಿದ್ದೇ ಹೊಂಚು ಹಾಕುತ್ತಿದ್ದ. ಕೋರ್ಟಿಗೆ ಬಂದಿದ್ದ ಆಲಿಗಿದು ಗೊತ್ತಾಗಿದೆ. ತಕ್ಷಣವೇ ಅಲ್ಲೇ ಇದ್ದ ಎಸಿಪಿ ಅಶೋಕ್ ಕುಮಾರ್‌ಗೆ ಅವರೆಲ್ಲರನ್ನೂ ತೋರಿಸಿ ರಕ್ಷಣೆಗೆ ಅಂಗಲಾಚಿದ್ದಾನೆ.

ಆವತ್ತು ಎಸಿಪಿ ಅಶೋಕ್ ಕುಮಾರ್ ಅಲಸೂರ್ ಗೇಟ್ ಪೊಲೀಸರನ್ನು ಕರೆಸಿದ್ದೇ ಆಲಿಯನ್ನು ಬಚಾವು ಮಾಡಿದ್ದಾರೆ. ದುರಂತವೆಂದರೆ ಅಲಸೂರು ಗೇಟ್ ಪೊಲೀಸರು ಆಲಿ ಕೊಟ್ಟ ದೂರನ್ನು ಪಡೆದೂ ಮಾಹಿನ್‌ನನ್ನು ಬಂಧಿಸಲಿಲ್ಲ!


ಇದಾದನಂತರ ತನಗೆ ರಕ್ಷಣೆ ನೀಡುವಂತೆ ಆಲಿ ನಡೆಸಿದ ಹೋರಾಟದ್ದೇ ಒಂದು ಪುಸ್ತಕವಾಗುವಷ್ಟು ಸಾಮಗ್ರಿಯಾಗುತ್ತದೆ (ಬಾಕ್ಸ್ ನೋಡಿ). ಸರ್ಕಾರಕ್ಕಿದು ತಿಳಿದಿಲ್ಲ. ಪೊಲೀಸ್ ಕುಮ್ಮಕ್ಕು, ಬಿಜೆಪಿ ಸರ್ಕಾರದ ನಿ... ಮತ್ತು ಜಮೀರ್ ವಿರುದ್ಧದ ಸರ್ಕಾರಿ ಷಡ್ಯಂತ್ರದ ಫಲವಾಗಿ ಆಲಿ ಬಲಿಯಾಗಿದ್ದಾನೆ.

ಕಾನೂನಿನ ಬಲೆಯಲ್ಲಿ ತಗಡು ಶಿವಣ್ಣ



ತುಮಕೂರಿನ ಮತದಾರರು ಅದ್ಯಾವ ನಂಬಿಕೆ ಇಟ್ಟು ಎಲೆಕ್ಷನ್‌ನಲ್ಲಿ ಶಿವಣ್ಣನನ್ನು ಗೆಲ್ಲಿಸಿದ್ದರೋ ಏನೋ? ಆದರೆ ಶಿವಣ್ಣ ಮಾತ್ರ ತನಗೆ ಸಿಕ್ಕ ರಾಜಕೀಯ ಅಧಿಕಾರವನ್ನು ತನ್ನ ಅಕ್ರಮ ಆಸ್ತಿ ಬೆಳೆಸಿಕೊಳ್ಳಲು ಬಳಸಿಕೊಂಡಿದ್ದಾನೆ. ಇಂಥ ಸೊಗಡು ಶಿವಣ್ಣ ಕಾನೂನಿನ ಬಲೆಯಲ್ಲಿ ಬೀಳುವ ಕಾಲ ಹತ್ತಿರ ಬಂದಂತೆ ಕಾಣುತ್ತಿದೆ


ತುಮಕೂರಿನ ಭ್ರಷ್ಟ ಬಿಜೆಪಿ ಶಾಸಕ ಸೊಗಡು ಶಿವಣ್ಣ ಕಾನೂನಿನ ಬಲೆಯಲ್ಲಿ ಬೀಳುವ ಕಾಲ ಹತ್ತಿರ ಬಂದಂತೆ ಕಾಣುತ್ತಿವೆ. ಒಂದು ಕಡೆ ಬಿಜೆಪಿ ಮುಖ್ಯಮಂತ್ರಿ ಯಡಿಯೂರಪ್ಪನ ಕುತ್ತಿಗೆ ಸುತ್ತ ಕಾನೂನಿನ ಬಲೆ ಬಿಗಿಯಾಗುತ್ತಿರುವಾಗಲೇ ಶಿವಣ್ಣನಿಗೂ ಅದೇ ಗತಿಯಾಗುವ ಸಂಭವ ಕಾಣುತ್ತಿದೆ.



ನಾಗಣ್ಣ

ಹೀಗೆ ಶಿವಣ್ಣನನ್ನು ಕೋರ್ಟ್‌ನ ಕಟಕಟೆಗೆ ಎಳೆತಂದು ನಿಲ್ಲಿಸಿರುವುದು ತುಮಕೂರಿನ ಯುವ ವಕೀಲ ಹಾಗೂ ಪತ್ರಕರ್ತ ಬ್ರಹ್ಮಾನಂದ ರೆಡ್ಡಿ.

ಈ ಬ್ರಹ್ಮಾನಂದ ರೆಡ್ಡಿ ಶಿವಣ್ಣನ ಲಂಚಗುಳಿತನ, ಅಕ್ರಮ ಆಸ್ತಿ ದಂಧೆ ಹಾಗೂ ಬ್ರಹ್ಮಾಂಡ ಭ್ರಷ್ಟಾಚಾರಗಳ ವಿರುದ್ಧ ಕಳೆದೆರಡು ವರ್ಷಗಳಿಂದ ಏಕಾಂಗಿವೀರನಂತೆ ಸೆಣಸುತ್ತಿದ್ದಾರೆ. ಯಾವಾಗ ತನ್ನ ಮುಖವಾಡ ಕಳಚಿ ಬೀಳಲು ಶುರುವಾಯಿತೋ ಆಗ ರೊಚ್ಚಿಗೆದ್ದ ಶಿವಣ್ಣ ಗೂಂಡಾಗಳ ಗ್ಯಾಂಗ್ ಒಂದನ್ನು ಛೂ ಬಿಟ್ಟಿದ್ದರು. 2010 ರ ಏಪ್ರಿಲ್ 26 ರಂದು ಬ್ರಹ್ಮಾನಂದ ರೆಡ್ಡಿಯನ್ನು ಕಿಡ್ನ್ಯಾಪ್ ಮಾಡಿದ ನಾಗೇಶ್, ದೊಡ್ಡಪ್ಪ, ಸಣ್ಣಮುದ್ದಯ್ಯ, ಅನಂತ, ಗಂಗಾ ಮತ್ತು ಮಹೇಂದ್ರ ಎಂಬುವರು ಕೊಲೆ ಯತ್ನ ಮಾಡಿದ್ದರು. ಆದರೆ ಅದೃಷ್ಟವಶಾತ್ ಆ ದಾಳಿಯಲ್ಲಿ ರೆಡ್ಡಿ ಬದುಕುಳಿದಿದ್ದರು.



ನಾಗರತ್ನ

ಈಗ ಅದೇ ಬ್ರಹ್ಮಾನಂದ ರೆಡ್ಡಿ ರಾಜ್ಯ ಹೈಕೋರ್ಟ್‌ನಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿ ಶಾಸಕ ಸೊಗಡು ಶಿವಣ್ಣನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಶಿವಣ್ಣನು ತನ್ನ ಆಸ್ತಿಪಾಸ್ತಿಗಳ ಬಗ್ಗೆ ನೀಡಿರುವ ಸುಳ್ಳು ಪ್ರಮಾಣಪತ್ರಗಳು, ಆದಾಯ ಮೂಲದ ಬಗ್ಗೆ ತಿಳಿಸಿರುವ ತಪ್ಪು ಮಾಹಿತಿಗಳು, ಚುನಾವಣಾಧಿಕಾರಿಗಳಿಗೆ. ಲೋಕಾಯುಕ್ತರಿಗೆ ಸಲ್ಲಿಸಿರುವ. ಆಸ್ತಿ ಘೋಷಣೆಯ ಪ್ರಮಾಣಪತ್ರಗಳಲ್ಲಿರುವ ವಿರೋಧಾ ಭಾಸದ ಹೇಳಿಕೆಗಳ ಒಂದು ರಾಶಿ ಡಾಕ್ಯುಮೆಂಟ್‌ಗಳು 'ಲಂಕೇಶ್'ಗೆ ದೊರಕಿವೆ.



ಬ್ರಹ್ಮಾನಂದ

ಇದರಲ್ಲಿ ಕೇವಲ ಶಿವಣ್ಣ ಮಾತ್ರವಲ್ಲದೆ ಆತನ ಪತ್ನಿ ನಾಗರತ್ನ, ಮಕ್ಕಳಾದ ಸಿದ್ದಲಿಂಗಸ್ವಾಮಿ ಹಾಗೂ ಕುಮಾರ ಸ್ವಾಮಿಯೂ ಶಾಮೀಲಾಗಿದ್ದಾರೆ.

ತುಮಕೂರು ತುಂಬಾ ಶಿವಣ್ಣನದೇ ಆಸ್ತಿ

1. ತುಮಕೂರು ಟೌನ್ ವ್ಯಾಪ್ತಿಯಲ್ಲೇ ಇರುವ ರಂಗಾಪುರ ಗ್ರಾಮದ ಸರ್ವೆ ನಂಬರ್ 9/1 ಎ ನಲ್ಲಿ 2 ಎಕರೆ 21 ಗುಂಟೆ ಜಮೀನನ್ನು 2007 ರ ಮಾರ್ಚ್ 9 ರಂದು 25 ಲಕ್ಷ ರೂಪಾಯಿ ನೀಡಿ, ಶಿವಣ್ಣ ಖರೀದಿಸಿದ್ದಾನೆ.

ಇಷ್ಟು ಹಣ ಶಿವಣ್ಣನಿಗೆ ಎಲ್ಲಿಂದ ಬಂತು ಎಂಬುದು ಒಂದು ಪ್ರಶ್ನೆ?

2008 ರಲ್ಲಿ ನಡೆದ ವಿಧಾನಸಭಾ ಚುನಾವಣೆಯ ಸಮಯದಲ್ಲಿ ಶಿವಣ್ಣ ಈ ಆಸ್ತಿಯ ಬಗ್ಗೆ ಪ್ರಸ್ತಾಪಿಸಿ ತಾನು 50 ಲಕ್ಷ ರೂಪಾಯಿ ನೀಡಿ ಜಮೀನು ಖರೀದಿಸಿದ್ದಾಗಿ ಅಫಿಡವಿಟ್ ನೀಡಿದ್ದಾನೆ. ಈ ಆಸ್ತಿ ಖರೀದಿಸುವಾಗ ಶಿವಣ್ಣ 25 ಲಕ್ಷ ರೂ ಬೆಲೆಗೆ ಛಾಪಾಕಾಗದ ಖರೀದಿಸಿರುವುದಕ್ಕೆ ದಾಖಲೆಗಳಿವೆ.

ಹಾಗಾದರೆ ಶಿವಣ್ಣ ಈ ಆಸ್ತಿಯ ಬೆಲೆಯನ್ನು 25 ರಿಂದ 50 ಲಕ್ಷಕ್ಕೆ ಯಾಕೆ ಹಿಗ್ಗಿಸಿ ತೋರಿಸಿದ?


ಬ್ಲಾಕ್‌ಮನಿಯನ್ನು ವೈಟ್‌ಮನಿ ಮಾಡಿಕೊಳ್ಳುವ ದುರುದ್ದೇಶದಿಂದಲಾ?

2. ಈ ಶಿವಣ್ಣನ ಕುಟುಂಬದವರೆಲ್ಲಾ ಎಂಥ ಸುಳ್ಳರೆಂದರೆ ವಾರ್ಷಿಕ ಇನ್‌ಕಂ ಟ್ಯಾಕ್ಸ್ ಸ್ಟೇಟ್‌ಮೆಂಟ್ ನೀಡುವಾಗ ತಮಗೆ ಕೃಷಿ ಆದಾಯ ಏನು ಇಲ್ಲ ಎಂದು ಹೇಳಿಕೊಂಡಿದ್ದಾರೆ. ಆದರೆ ಶಿವಣ್ಣನ ಸುಪುತ್ರ ಕುಮಾರಸ್ವಾಮಿ ಎಂಬ ಘಟವನು ದೇವರಾಯಪಟ್ಟಣ ಗ್ರಾಮದ ಸರ್ವೆ ನಂಬರ್ 4/11 ರಲ್ಲಿ ಮುಕ್ಕಾಲೆಕರೆ ಭೂಮಿಯನ್ನು 21.10.2002 ರಲ್ಲಿ ಹಾಗೂ 16.1.2006 ರಲ್ಲಿ ಖರೀದಿಸಿ ರಿಜಿಸ್ಟರ್ ಮಾಡಿಸಿಕೊಂಡಿದ್ದಾನೆ. ಒಟ್ಟು 2 ಲಕ್ಷ ರೂಪಾಯಿಗೂ ಹೆಚ್ಚಿನ ಮೌಲ್ಯದ ಈ ಭೂಖರೀದಿಗೆ ತಮಗೆ ಕೃಷಿ ಉತ್ಪನ್ನದಿಂದ ಬಂದ ಆದಾಯದ ಹಣ ಬಳಸಿರುವುದಾಗಿ ಇವರು ಹೇಳಿಕೊಂಡಿದ್ದಾರೆ.

3. ಈ ಶಿವಣ್ಣ ದುಡ್ಡು ನುಂಗುವುದರಲ್ಲಿ ಜಾಣನೇ ಹೊರತು ಲೆಕ್ಕಪತ್ರ ನಿರ್ವಹಣೆಯಲ್ಲಿ ಅಲ್ಲ. ಏಕೆಂದರೆ ರಂಗಾಪುರ ಗ್ರಾಮದ ಸರ್ವೆ ನಂಬರ್ 9/1ಎ ನಲ್ಲಿ ಖರೀದಿಸಿದ್ದ ಜಮೀನಿಗೆ ಸಂಬಂಧಪಟ್ಟ ಮಾಹಿತಿಯನ್ನು ಲೋಕಾಯುಕ್ತರಿಗೆ ಸಲ್ಲಿಸುವಾಗ ಅದರ ಬೆಲೆ ಕೇವಲ 45 ಸಾವಿರ ಎಂದು ಕಾಣಿಸಿದ್ದಾನೆ.

ಅಂದರೆ ಒಂದೇ ಜಮೀನಿನ ಬೆಲೆಯನ್ನು 2007 ರಲ್ಲಿ ಸಬ್ ರಿಜಿಸ್ಟ್ರಾರ್ ಬಳಿ 25 ಲಕ್ಷವೆಂತಲೂ, 2008 ರಲ್ಲಿ ಚುನಾವಣಾಧಿಕಾರಿ ಬಳಿ 50 ಲಕ್ಷವೆಂತಲೂ ಕೊನೆಗೆ

ಐಪಿಎಲ್ ಕ್ರಿಕೆಟ್ ಕಳೇಬರ ಮುಂದಿಟ್ಟುಕೊಂಡು...



ಇದು ಎಲ್ಲವೂ ವಾಣಿಜ್ಯೀಕರಣಗೊಳ್ಳುತ್ತಿರುವ ಕಾಲ. ಇದರಿಂದಾಗಿ ಬಹುತೇಕ ಕ್ಷೇತ್ರಗಳು ಕಾರ್ಪೋರೇಟ್ ಜಗತ್ತಿನ ಕಪಿಮುಷ್ಟಿಗೆ ಸಿಕ್ಕು ಜಖಂಗೊಂಡಿವೆ. ಅದೀಗ ಕ್ರೀಡಾ ಕ್ಷೇತ್ರವನ್ನು ಸಂಪೂರ್ಣವಾಗಿ ಆವರಿಸಿಕೊಂಡು ಕ್ರಿಕೆಟ್ ಆಟವನ್ನಂತೂ ಪೂರ್ತಿ ಉಸಿರುಗಟ್ಟಿಸಿದೆ. ನಿಜ, ಕ್ರಿಕೆಟ್ ಆಟ ಬದುಕಿದೆ. ಆದರೆ ಆಟವೊಂದಕ್ಕೆ ಇರಲೇಬೇಕಾದ ಮೌಲ್ಯ ಹಾಗೂ ನೈಜ ಮನೋಲ್ಲಾಸಗಳು ಸತ್ತು ಹೋಗಿವೆ. ಇದಕ್ಕೆ ಕಾರಣವಾಗಿರುವುದು ಐಪಿಎಲ್ ಹೆಸರಲ್ಲಿ ನಡೆಯುತ್ತಿರುವ ಕ್ರಿಕೆಟಿಗರ ಹರಾಜು ಪ್ರಕ್ರಿಯೆ.

'ಗಂಭೀರ್ ಹನ್ನೊಂದು ಕೋಟಿಗೆ ಹರಾಜಾದ್ನಂತೆ, ಪಠಾಣ್ ಒಂಬತ್ತು ಕೋಟಿಗೆ ಹರಾಜಾದ್ನಂತೆ' ಇದು ಕ್ರಿಕೆಟ್ ಪ್ರೇಮಿಗಳ ನಡುವೆ ನಡೆಯುತ್ತಿರುವ ಸಂಭಾಷಣೆಯ ಪ್ರಮುಖ ತಿರುಳು. ಆದರೆ ಪ್ರಯತ್ನಪಟ್ಟರೂ ಸಹ 'ಛೆ, ಕ್ರಿಕೆಟ್‌ಗೆ ಎಂಥಾ ಸ್ಥಿತಿ ಬಂತು. ಮನುಷ್ಯರನ್ನೇ ಹರಾಜಾ ಕೂಗೋದು ಎಷ್ಟು ಸರಿ' ಎಂಬಂಥ ವಿವೇಚನೆಯ ಮಾತುಗಳು ಆ ವಲಯದಲ್ಲಿ ಕೇಳಿಬರುವುದು ಅಪರೂಪ. ಇದು ಕ್ರಿಕೆಟ್ ಗರ್ಭಗುಡಿಯ ಸಂಸ್ಕೃತಿ ಕ್ರಿಕೆಟ್ ಗ್ಯಾಲರಿಗೂ ವ್ಯಾಪಿಸಿಕೊಂಡು ಅದನ್ನು ಹಾಗಾಗೇ ಒಪ್ಪಿಕೊಂಡಿರುವ ದುರಂತದಂತೆಯೇ ಕಾಣಿಸುತ್ತಿದೆ.

ಇದು ವಾಣಿಜ್ಯೀಕರಣದ ಭರಾಟೆಗೆ ಸಿಕ್ಕು, ಮನುಷ್ಯನೊಳಗಿನ ಸೂಕ್ಷ್ಮತೆ ಮುಕ್ಕಾಗಿರುವುದರ ಸಂಕೇತ. ಕ್ರಿಕೆಟ್ಟನ್ನೂ ಸೇರಿದಂತೆ ಈಗ ಅಸ್ತಿತ್ವದಲ್ಲಿರುವ ಎಲ್ಲಾ ಆಟಗಳ, ಹಿಂದೆಯೂ ಮಹತ್ತರವಾದ ಮೌಲ್ಯಗಳಿವೆ. ಬಹುಶಃ ಅಂಥವುಗಳನ್ನು ಗ್ರಾಮೀಣ ಮಟ್ಟದಲ್ಲಿ ನಡೆಯುವ ಕ್ರೀಡಾಕೂಟಗಳಲ್ಲಷ್ಟೇ ನೋಡಬೇಕಾದ ಪರಿಸ್ಥಿತಿ ಬಂದೊದಗಿದೆ. ಕ್ರೀಡೆಯ ಒಟ್ಟಾರೆ ಆಂತರ್ಯ ಮನೋಲ್ಲಾಸ. ಒಂದು ಪಡೆ ಅಥವಾ ವ್ಯಕ್ತಿ ಸೋಲಲೇಬೇಕಾದ ಅನಿವಾರ್ಯತೆಯಿರುವುದರಿಂದ ಸೋಲು-ಗೆಲುವೆರಡನ್ನೂ ಸಮನಾಗಿ ಸ್ವೀಕರಿಸುವ ಮನೋಭಾವ ಕ್ರೀಡೆಗಳಿಂದ ಮೈಗೂಡುತ್ತದೆ. ಅಲ್ಲಿ ಸೋತವನಿಗೂ ಗೆಲ್ಲುವ ಅವಕಾಶಗಳಿವೆ. ಗೆದ್ದವನೂ ಸೋಲು ಕಾಣುವ ಅಪಾಯಗಳಿವೆ. ಇದು ಬದುಕಿನ ಪ್ರತಿಬಿಂಬವಿದ್ದಂತೆ.

ಆದರಿಂದು ಯಾವ ಆಟಗಳಲ್ಲೂ ಅಂತಹುದೊಂದು ಸಹಜ ಸ್ಥಿತಿ ಇದ್ದಂತಿಲ್ಲ, ಕ್ರಿಕೆಟ್‌ನಲ್ಲಂತೂ ಅದನ್ನು ಹುಡುಕುವುದೇ ಮೂರ್ಖತನ. ಹಾಗಂತ ಎಲ್ಲಾ ಕ್ರೀಡಾಳುಗಳನ್ನು, ಅವರ ಪರಿಶ್ರಮವನ್ನು ಒಂದೇ ಮಾತಿನಲ್ಲಿ ತಿರಸ್ಕರಿಸುವಂತಿಲ್ಲ, ಆದರೆ ಹಣ ಬಲ ಕಣಕ್ಕಿಳಿದಿರುವ ಈ ಸಂದರ್ಭದಲ್ಲಿ ಕ್ರೀಡೆಯ ಕಲಾತ್ಮಕತೆ, ರೂಢಿಗಳೆಲ್ಲ ಬುಡಮೇಲಾಗಿವೆ. ಅವುಗಳಿಗೆ ಯಾವ ಬೆಲೆಯೂ ಇಲ್ಲದ ಸ್ಥಿತಿ ಬಂದಿದೆ. ಇದಕ್ಕೆ ಈ ಬಾರಿಯ ಐಪಿಎಲ್ ಹರಾಜು ಪ್ರಕ್ರಿಯೆಯಲ್ಲಿ ಬಿಕರಿಯಾಗದೆ ಅವಮಾನ ಅನುಭವಿಸಿದ, ಆದರೂ ಇತರರಿಗಿಂತ ಕಡಿಮೆ ಬೆಲೆಗೆ ಬಿಕರಿಯಾದ ಸಂಕಟದಲ್ಲಿರುವ ಸೌರವ್ ಗಂಗೂಲಿ ಹಾಗೂ ದ್ರಾವಿಡ್‌ಗಳೇ ಸ್ಪಷ್ಟ ಸಾಕ್ಷಿ.





ವಿಜಯ್ ಮಲ್ಯನಂಥ ಉದ್ಯಮಪತಿಗಳಿಗೆ ಆಟವೂ ಸೇರಿದಂತೆ ಯಾವುದೇ ಕ್ಷೇತ್ರದ ಕಲಾತ್ಮಕ ಸೊಗಡು, ರೀತಿರಿವಾಜುಗಳನ್ನು ಕಟ್ಟಿಕೊಂಡು ಏನೂ ಆಗಬೇಕಿಲ್ಲ, ಹಾಕಿದ ದುಡ್ಡು ದುಪ್ಪಟ್ಟಾಗಿ ವಾಪಸಾಗಬೇಕೆಂಬುದಷ್ಟೇ ಆತನಂಥವರ ಅಂತಿಮ ಧ್ಯೇಯ. ಇಂಥವರ ಕೈಗೆ ಸಿಕ್ಕ ಕ್ರಿಕೆಟ್ ಈಗಿನ ಸ್ಥಿತಿಯನ್ನಲ್ಲದೆ ಬೇರ್‍ಯಾವ ಸ್ಥಿತಿ ತಲುಪಲೂ ಸಾಧ್ಯವಿಲ್ಲ, ಇಂತಹುದೊಂದು ಹಣಬಲದ ಕಪಿಮುಷ್ಟಿಗೆ ಸಿಲುಕಿದ ಕ್ರಿಕೆಟ್ ಕಣದಲ್ಲಿ ಸಹಜತೆಯೆಂಬುದು ಕಾಣಸಿಗಲಾರದು. ನಿಜವಾದ ಕಲಿಗಳಂತೆ ಕಣದಲ್ಲಿ ಅಬ್ಬರಿಸಬೇಕಾದ ಕ್ರಿಕೆಟಿಗರು ಯಾರದೋ ಹೊಲದಲ್ಲಿ ಗೇಯ್ಮೆ ಮಾಡುವ ಜೀತದಾಳುಗಳಂತೆ, ಕಳಪೆಮಟ್ಟದ ಪ್ರದರ್ಶನ ನೀಡಿದರೆ ಹೊರದಬ್ಬಿಸಿಕೊಳ್ಳುವ ಭಯದಿಂದ ಆಡುವುದನ್ನು ನೋಡಿದರೆ ಎಂಥವರಿಗಾದರೂ ಅಸಹ್ಯ ಹುಟ್ಟುತ್ತವೆ.

ಮನುಷ್ಯರು ಹರಾಜಾಗುವಂಥ ಸ್ಥಿತಿ ನಾಗರಿಕ ಜಗತ್ತಿಗೆ ಅಪಮಾನವಿದ್ದಂತೆ. ಆದರೂ ಐಪಿಎಲ್ ಎಂಬ ಕ್ರಿಕೆಟ್ ಆಟದ ಪ್ರಾಕಾರ ಅದನ್ನೂ ಕೂಡಾ ನಾಗರಿಕತೆಯ ಪರಿಧಿಗೆ ತಂದುಕೊಂಡಿರುವುದರಿಂದ ಸದ್ಯ ಕೆಲ ಕ್ರಿಕೆಟಿಗಳ ವಿಚಾರದಲ್ಲಿ ಅದೇ ಪದವನ್ನು ಬಳಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ಈ ಬಾರಿ 'ಹರಾಜಾ'ದವರ ಪಟ್ಟಿಯನ್ನು ಗಮನಿಸಿದರೆ, ಭಾರತದ ಗೌತಮ್ ಗಂಭೀರ್ ನೈಟ್ ರೈಡರ್ಸ್ ತಂಡಕ್ಕೆ 11,40 ಕೋಟಿಗೆ ಬಿಕರಿಯಾಗಿದ್ದಾನೆ. ಇದು ಈ ಬಾರಿಯ ಬಹು ದೊಡ್ಡ ಮೊತ್ತ ಅಂತ ಬೀಗಲಾಗುತ್ತಿದೆ. ಇನ್ನುಳಿದಂತೆ ಯೂಸುಫ್ ಪಠಾಣ್ ನೈಟ್ ರೈಡರ್ಸ್ ತಂಡಕ್ಕೆ 9.66 ಕೋಟಿಗೆ ಹರಾಜಾಗಿದ್ದಾನೆ. ರಾಬಿನ್ ಉತ್ತಪ್ಪ, ರೋಹಿತ್ ಶರ್ಮಾ, ಇರ್ಫಾನ್ ಪಠಾಣ್, ಯುವರಾಜ್‌ಸಿಂಗ್, ಸೌರಭ್ ತಿವಾರಿಗಳು ಕ್ರಮವಾಗಿ ಪುಣೆ ವಾರಿಯರ್ಸ್, ಮುಂಬೈ ಇಂಡಿಯನ್ಸ್, ದೆಹಲಿ ಡೇರ್ ಡೆವಿಲ್ಸ್, ಪುಣೆ ವಾರಿಯರ್ಸ್ ರಾಯಲ್ ಚಾಲೆಂಜರ್ಸ್ ತಂಡಗಳಿಗೆ ಸೇಲಾಗಿದ್ದಾರೆ.

ಕೊಚ್ಚಿ ತಂಡ ಖರೀದಿಸಿದ ಶ್ರೀಲಂಕಾದ ಮಹೇಲ ಜಯವರ್ಧನೆ, ಕಿಂಗ್ ಇಲವೆನ್ ಕೊಂಡುಕೊಂಡ ಆಸ್ಟ್ರೇಲಿಯಾದ ಡೇವಿಡ್ ಹಸ್ಸಿ, ಡೆಕ್ಕನ್ ಚಾರ್ಜರ್ಸ್ ಪಾಲಾದ ದ.ಆಫ್ರಿಕಾದ ಡೇಲ್ ಸ್ಟೇನ್ ಮುಂತಾದವರು ಹೆಚ್ಚು ಬೆಲೆಗೆ ಬಿಕರಿಯಾದ ವಿದೇಶಿ ಆಟಗಾರರೆಂಬ 'ಗೌರವ'ಕ್ಕೆ ಪಾತ್ರರಾಗಿದ್ದಾರೆ!

ಇದರರ್ಥ ಕ್ರಿಕೆಟ್ ಇಂದು ಬರೀ ಆಟವಾಗುಳಿದಿಲ್ಲ. ಅಷ್ಟಕ್ಕೂ ಅದರೊಳಗೆ ಆಟದ ಸಹಜತೆಯಾಗಲೀ, ಮೌಲ್ಯಗಳಾಗಲಿ ಇಲ್ಲ. ಬದಲಾಗಿ ಅದೊಂದು ಉದ್ಯಮವಾಗಿಬಿಟ್ಟಿದೆ. ತೀರಾ ಭಾರತದ ನೆಲದಲ್ಲಿ ಅಸಂಖ್ಯಾತ ಕ್ರಿಕೆಟ್ ಕಲಿಗಳಿದ್ದರೂ ಅವರ್‍ಯಾರೂ ತಮಗೆ ಬದುಕು ನೀಡಿದ ಕ್ರೀಡೆ ಎಕ್ಕುಟ್ಟುತ್ತಿರುವುದರ ವಿರುದ್ಧ ಮಾತಾಡುತ್ತಿಲ್ಲ. ಇದು ಹಣದ ಪವರ್‌ಲ್ಲದೆ ಬೇರೇನೂ ಅಲ್ಲ. ಕ್ರಿಕೆಟ್ ಮ್ಯಾಚು ನಡೆದರೆ ಅನ್ನಾಹಾರ ಬಿಟ್ಟು ಟಿವಿ ಮುಂದೆ ಕುಕ್ಕರಿಸುವ ಕ್ರಿಕೆಟ್ ಪ್ರೇಮಿಗಳಿಗೂ ಸಹ ಕಣ್ಣೆದುರಲ್ಲೇ ತಮ್ಮ ನೆಚ್ಚಿನ ಆಟ ಮುಕ್ಕಾಗುತ್ತಿರುವ ವಿಚಾರ ಕಾಣದಿರುವುದು ದುರಂತ.

ಭಾರತದ ಮಟ್ಟಿಗೆ ಈ ಐಪಿಎಲ್ ಹರಾಜು ಪ್ರಕ್ರಿಯೆ ದೇಸಿ ಆಟಗಾರರ ಖೊಟ್ಟಿ ದೇಶಪ್ರೇಮವನ್ನು ಬೆತ್ತಲಾಗಿಸಿದೆ. ಈ ಮಂದಿ ಲಾಗಾಯ್ತಿನಿಂದಲೂ 'ದೇಶಕ್ಕಾಗಿ ಆಡುತ್ತೇವೆ' ಅಂತ ಘೋಷಿಸಿಯೇ ಪಿಚ್ಚಿಗಿಳಿಯುವ ಪರಿಪಾಠ

07 ರಲ್ಲಿ ಲೋಕಾಯುಕ್ತರ ಬಳಿ ಕೇವಲ 45 ...ದರವೆಂದು ತೋರಿಸಿದ್ದಾನೆ.

ಈ ಘಟ್ಟಕ್ಕೆ ಏನೆನ್ನಬೇಕು? ಇವನೆಂಥ ತಿಕ್ಕಲನೆಂದರೆ ...ೕ ಲೋಕಾಯುಕ್ತರ ಮುಂದೆ 2008 ನೇ ಸಾಲಿನ ... ವಿವರದ ಪ್ರಮಾಣಪತ್ರ ನೀಡಿ ಆದೇ ಜಮೀನನ್ನು ...50 ಲಕ್ಷಕ್ಕೆ ಖರೀದಿಸಿದ್ದೇನೆ ಎಂದು ತೋರಿಸಿದ್ದಾನೆ. ಆದರೆ ಈ ಆಸ್ತಿ ಖರೀದಿಸಲು ಯಾವ ಆದಾಯ ...ಲದಿಂದ ಹಣ ಬಂತು ಎಂಬುದನ್ನು ಹೇಳಿಲ್ಲ, ಇದನ್ನು ...ನಿಸಿದ ಲೋಕಾಯುಕ್ತರು ಶಿವಣ್ಣನ ಆದಾಯ ಮೂಲದ ... ವಿವರ ನೀಡುವಂತೆ ಈಗ ನೋಟಿಸ್ ನೀಡಿದ್ದಾರೆ.

4. 2000 ನೇ ಇಸವಿಯಿಂದ ಆರಂಭಿಸಿ 2007 ರ ...ಲಿನವರೆಗೂ ಶಿವಣ್ಣ ನೀಡಿರುವ ಇನ್‌ಕಂ ಟ್ಯಾಕ್ಸ್ ...ಹಿಂತಿಯಲ್ಲಿ ಕೃಷಿ ಆದಾಯ ಏನೂ ಇಲ್ಲ ಎಂದು ...ಳಿಕೊಂಡಿರುವುದು ಪತ್ತೆಯಾಗಿದೆ. ಆದರೆ ಅದೇ ...ಳೆಯಲ್ಲಿ ಚುನಾವಣಾಧಿಕಾರಿಗೆ ಹಾಗೂ ...ೋಕಾಯುಕ್ತರಿಗೆ ನೀಡಿರುವ ಪ್ರಮಾಣ ಪತ್ರಗಳಲ್ಲಿ ...ೕಟ್ಯಂತರ ರೂಪಾಯಿ ಬೆಲೆಯ ಆಸ್ತಿ ಖರೀದಿಯನ್ನು ...ನು ಕೃಷಿ ಮೂಲಕ ಪಡೆದ ಆದಾಯದಿಂದ ...ೕದಿಸಿದ್ದಾಗಿ ತೋರಿಸಿದ್ದಾನೆ.

ಒಂದು ಕಡೆ ಕೃಷಿ ಆದಾಯ ಇಲ್ಲ ಎನ್ನುವುದು ...ತ್ತೊಂದೆಡೆ ಕೃಷಿ ಆದಾಯ ಇದೆ ಎಂದು ಹೇಳಿ ತನ್ನ ...ಮ ಆಸ್ತಿ ಬೆಳೆಸಿಕೊಳ್ಳುವ ಶಿವಣ್ಣನ ಕಣ್ಣಾಮುಚ್ಚಾಲೆ ...ವೇ ಅವನಿಗೀಗ ಮುಳುವಾಗುತ್ತಿದೆ.

ಇವನೆಂಥಾ ಖದೀಮನೆಂದರೆ ದೇವರಾಯಪಟ್ಟಣದಲ್ಲೇ ...ರ್ವೆ ನಂಬರ್ 42/2 ರಲ್ಲಿ ಒಂದೂ ಮುಕ್ಕಾಲೆಕರೆ, ...ತರಸನಹಳ್ಳಿ ಸರ್ವೆ ನಂಬರ್ 41/2 ಒಂದು ಎಕರೆ ... ಗುಂಟೆ ಭೂಮಿ ಖರೀದಿಸಿದ್ದಾನೆ. ಇದು ನಡೆದಿರುವುದು ...02 ಹಾಗೂ 2006 ರ ಅಕ್ಟೋಬರ್ 7 ರಂದು. ಈ ...ಮೀನಿಗೆ ಶಿವಣ್ಣ ಕೊಟ್ಟೆನೆಂದು ತೋರಿಸಿರುವ ಮೊತ್ತ ...ಪ್ಪು ಆರು ಲಕ್ಷ 10 ಸಾವಿರ ರೂಪಾಯಿಗಳು. ಇದೂ ...ಡ ಶಿವಣ್ಣನಿಗೆ ಕೃಷಿ ಆದಾಯದಿಂದಲೇ ಬಂತು ಎಂಬಂತೆ ...ಬಿಸಲಾಗಿದೆ. ಇವನ ಆಸ್ತಿದಾಹ ಇಲ್ಲಿಗೂ ...ಂಗಿಯುವುದಿಲ್ಲ.

ಶಿವಣ್ಣನ ಹೆಂಡತಿ ನಾಗರತ್ನ ಹಾಗೂ ಲೋಕಕಂಟಕ ...ಡುಮಕ್ಕಳಾದ ಕುಮಾರಸ್ವಾಮಿ ಹಾಗೂ ಸಿದ್ಧಲಿಂಗ ...ಮಿಯೂ ದಂಡೆತ್ತಿ ಹೋಗುವಂತೆ ತುಮಕೂರು ಟೌನಿನ ...ತ್ತಮುತ್ತ ಕಣ್ಣಿಗೆ ಬಿದ್ದ ಆಸ್ತಿಗಳನ್ನೆಲ್ಲಾ ಖರೀದಿಸಿದ್ದಾರೆ.

ನಾಗರತ್ನಮ್ಮ ಎಂಥ ಕಡುಜಾಣೆಯೆಂದರೆ ಗಂಡ ಶಿವಣ್ಣ ವರ್ಗಾದಂಥ, ಕಂಟ್ರಾಕ್ಟ್ ಪರ್ಸೆಂಟೇಜ್ ಆ ದೀಲು. ಈ ದೀಲುಗಳೆಂದು ಬೇಟೆಯಾಡಿ ಕಮಾಯಿಸುವ ಕಾಸನ್ನೆಲ್ಲಾ ಅರ್ಜೆಂಟಾಗಿ ಆಸ್ತಿ ಖರೀದಿಗಳ ಮೇಲೆ ಖರ್ಚು ಮಾಡಿದ್ದಾಳೆ. ಇವಳ ಹೆಸರಿನಲ್ಲಿರುವ ಅಕ್ರಮ ಆಸ್ತಿಗಳ ತನಿಖೆಗೇ ಒಂದು ವಿಶೇಷ ತನಿಖಾ ಆಯೋಗ ನೇಮಿಸಬೇಕೆಂಬಷ್ಟು ಈಕೆಯ ವಹಿವಾಟುಗಳಿವೆ.

ತುಮಕೂರು ತಾಲ್ಲೂಕು ಕಸಬಾ ಹೋಬಳಿಯ ಕುಪ್ಪೂರ್ ಗ್ರಾಮದಲ್ಲಿ ಸರ್ವೆ ನಂಬರ್ 12/4 ರಲ್ಲಿ ನಾಗರತ್ನಮ್ಮ ಒಂದೂ ಮುಕ್ಕಾಲೆಕರೆ ಭೂಮಿ ಖರೀದಿಸಿದ್ದಾಳೆ. ಶೆಟ್ಟಿಹಳ್ಳಿಯ ಸರ್ವೆ ನಂಬರ್ 35/3 ರಲ್ಲಿ ಅರ್ಧ ಎಕರೆ ಗುಳುಂ ಮಾಡಿದ್ದಾಳೆ. ಈ ಜಮೀನುಗಳೆಲ್ಲಾ ತುಮಕೂರು ಟೌನಿನ ಒಳಗೇ ಇದೇ ಎಂಬುದನ್ನು ಓದುಗರು ಗಮನಿಸಬೇಕು. ಈ ಭೂಖರೀದಿಗಳಿಗೆ ನಾಗರತ್ನಮ್ಮ ಲಕ್ಷಾಂತರ ರೂಪಾಯಿ ಸುರಿದಿದ್ದಾಳೆ.

ಈಕೆಗೆ ಇಷ್ಟೊಂದು ಹಣ ಎಲ್ಲಿಂದ ಬಂತು?

ಇನ್ನು ಶಿವಣ್ಣನ ಸುಪುತ್ರರಾದ ಕುಮಾರಸ್ವಾಮಿ ಹಾಗೂ ಸಿದ್ಧಲಿಂಗಸ್ವಾಮಿಯ ಭೂಖರೀದಿ ಪವಾಡಗಳನ್ನೊಮ್ಮೆ ನೋಡಬೇಕು. ದೇವರಾಯಪಟ್ನ ಗ್ರಾಮದ ಸರ್ವೆ ನಂ. 41/4 ರಲ್ಲಿ ಅರ್ಧ ಎಕರೆ, ಅದೇ ಗ್ರಾಮದ ಸರ್ವೆ ನಂಬರ್ 42/4 ರಲ್ಲಿ 1 ಎಕರೆ 14 ಗುಂಟೆ ಜಮೀನನ್ನು ಈ ಪುತ್ರರತ್ನರು ಖರೀದಿಸಿದ್ದಾರೆ.

ಹುಟ್ಟಾ ಸುಳ್ಳ ಶಿವಣ್ಣ

ದಿನ ಬೆಳಗಾದರೆ ಸುಳ್ಳು ಹೇಳುವುದನ್ನೇ ಕಾಯಕ ಮಾಡಿಕೊಂಡಿರುವ ಶಿವಣ್ಣ ಇನ್‌ಕಂಟ್ಯಾಕ್ಸ್‌ನವರಿಗೆ ಚುನಾವಣಾಧಿಕಾರಿಗಳಿಗೆ ಹಾಗೂ ಲೋಕಾಯುಕ್ತರಿಗೆ ಅನೇಕ ಸುಳ್ಳು ಅಫಿಡವಿಟ್‌ಗಳನ್ನು ಕೊಟ್ಟೂ ಈಗ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ.

ತುಮಕೂರಿನ ಮತದಾರರು ಅದ್ಯಾವ ನಂಬಿಕೆ ಇಟ್ಟು ಎಲೆಕ್ಷನ್‌ನಲ್ಲಿ ಶಿವಣ್ಣನನ್ನು ಗೆಲ್ಲಿಸಿದ್ದರೋ ಏನೋ? ಆದರೆ ಶಿವಣ್ಣ ಮಾತ್ರ ತನಗೆ ಸಿಕ್ಕ ರಾಜಕೀಯ ಅಧಿಕಾರವನ್ನು ತನ್ನ ಅಕ್ರಮ ಆಸ್ತಿ ಬೆಳೆಸಿಕೊಳ್ಳಲು ಬಳಸಿಕೊಂಡಿದ್ದಾನೆ.

ತುಮಕೂರಿನ ಜನರಿಗೂ ಶಿವಣ್ಣನ ಅಯೋಗ್ಯತೆ ಈಗ ಅರ್ಥವಾಗಿದೆ. ಹಾಗಾಗಿ ಶಿವಣ್ಣನನ್ನು ಯಾರು ಈಗ ಸೊಗಡು ಶಿವಣ್ಣ ಎನ್ನುತ್ತಿಲ್ಲ.

ತಗಡು ಶಿವಣ್ಣ ಎನ್ನುತ್ತಿದ್ದಾರೆ.

• ಪಾರ್ವತೀಶ

...ಷಿಸಿಕೊಂಡಿದ್ದಾರೆ. ಇಂಥ ಅನೇಕರ ಪಾಲಿಗೆ ...ೕಶ್' ಅಂದರೆ ದಂಡಿ ದಂಡಿ ಹಣ ಚೆಲ್ಲಿ ...ರೀದಿಸುವ ಕಾರ್ಪೊರೇಟ್ ಜಗತ್ತೆಂಬುದೀಗ ...ಯುಲಾಗಿದೆ.

ಯೋಚಿಸಿ ನೋಡಿ, ಆಟ ನೋಡುವ ...ನ್ಮಾದದಲ್ಲಿ ದೇಶಕ್ಕಾಗಿ ಇಂಥವರಿಂದ ...ನುಪಯೋಗವಾಗಿದೆ ಎಂಬ ಪ್ರಶ್ನೆಯನ್ನು ...ಷ್ಟನವರು ಕೇಳಿಕೊಳ್ಳುವುದಿಲ್ಲ. ಕ್ರಿಕೆಟ್ ಜಗತ್ತು ...ರೀ ಮನೋಲ್ಲಾಸಕ್ಕಾಗಿ ಸಹಜ ಮೌಲ್ಯಗಳನ್ನು ...ಳ್ಳಗೂಡಿಸಿಕೊಂಡು ಆಡುವ ಸಂದರ್ಭದಲ್ಲಿ ...ೕಲ್ಕಂಡ ಪ್ರಶ್ನೆ ಅಷ್ಟು ಮಹತ್ವದ್ದಾಗಿರಲಿಲ್ಲ. ...ದರೆ ಅದೂ ದಂಧೆಯಾಗಿರುವ ಈ ...ಂದರ್ಭದಲ್ಲಿ ಕೇಳಲೇಬೇಕಾಗಿದೆ. ಅಷ್ಟಕ್ಕೂ ...ಣಕ್ಕಾಗಿ ಹರಾಜಾಗುವುದು ಮಾನಗೆಟ್ಟ ...ರಿಸ್ಥಿತಿಯೆಂಬುದರಲ್ಲಿ ಎರಡು ಮಾತಿಲ್ಲ.

ನಿಮಗೆ ನೀವೇ ಕೇಳಿಕೊಳ್ಳಿ, ನಿಸ್ವಾರ್ಥತೆ ...ಂದ ದೇಶ ಕಾಯೋ ಸೈನಿಕನಿಗೂ, ...ದ್ಯಾವುದೋ ಪಿಚ್ಚಿನಲ್ಲಿ ನಿಂತು ಬ್ಯಾಟು ...ೕಸುವ ಕ್ರಿಕೆಟಿಗನಿಗೂ ವ್ಯತ್ಯಾಸವಿಲ್ಲವೇ? ...ದಿದೆ ಅಂತಾದರೆ ವರ್ಷವಿಡೀ ಯುದ್ಧ ...ೂಮಿಯಲ್ಲಿ ಕಳೆದು ಊರ ಕಡೆ ಬರುವ ...ೋಧರಿಗೆ ನಾವ್ಯಾಕೆ ಮಾಲೆ ಹಾಕಿ ಸ್ವಾಗತ ...ೕರುವುದಿಲ್ಲ? ಅತೀ ವೈಯಕ್ತಿಕ ಅನ್ನುವಂಥ ...ಟದಲ್ಲಿ ಗೋತಾ ಹೊಡೆದು ಬಂದ ...ಕೆಟಿಗರಿಗೂ ಯಾಕೆ ಅದ್ದೂರಿ ಸ್ವಾಗತ ...ೕರಲಾಗುತ್ತದೆ? ಎದುರಾಳಿಯ ಚೆಂಡನ್ನು ...ಂಡರಿಗೆ ಚಿಮ್ಮಿಸುವಾತ ಹೀರೋನಂತೆ ...ಣುವ ಕಣ್ಣುಗಳಿಗೆ, ಶತ್ರುಗಳ ಪಾಳೆಯ ...ೕಶದ ಗಡಿಯ ಗೆರೆ ದಾಟದಂತೆ ತಡೆಯುವ ...ೋಧನ್ಯಾಕೆ ಹೀರೋನಂತೆ ಕಾಣಿಸುವುದಿಲ್ಲ?







ಮೇಲ್ಕಂಡ ಪ್ರಶ್ನೆಗಳಲ್ಲಿ ಅಪ್ರಸ್ತುತ ಅಂತನ್ನಿಸಬಹುದು. ...ದರೆ ಆ ರೀತಿಯ ಪ್ರಶ್ನೆಗಳನ್ನು ನಾವೆಲ್ಲ ...ದುರುಗೊಳ್ಳದಿರುವುದರಿಂದಲೇ ಕ್ರಿಕೆಟ್ ಸೇರಿದಂತೆ ಎಲ್ಲಾ ...ಟಗಳೂ ದಂಧೆಯಾಗಿವೆ. ಆಡುವುದರಿಂದ ಹಿಡಿದು ...ೋಡುವವರೆಗೆ ಎಲ್ಲವೂ ಆರ್ಥಿಕ ವಹಿವಾಟಾಗಿ ಹೋಗಿದೆ.

ಇನ್ನೂ ಪ್ರಮುಖ ಅಂಶವೆಂದರೆ, ಐಪಿಎಲ್‌ನಲ್ಲಿ ಕಾಸು ...ೂರೆಯೊ ಉತ್ಸಾಹದಲ್ಲಿರುವ ಕ್ರಿಕೆಟ್ ನಿಯಂತ್ರಣಾ ಮಂಡಳಿ ... ನೆಲದ ಕಾನೂನು ಕಟ್ಟಳೆಗಳನ್ನೇ ಗಾಳಿಗೆ ತೂರುತ್ತಿದೆ. ...ಯೋಜನೆಗಳನ್ನು ತುಳಿತುಳಿದೇ ಕೊಬ್ಬಿರುವ ಕಾರ್ಪೊರೇಟ್ ಜಗತ್ತೂ ಸಹ ಅದಕ್ಕೆ ಸಹಕರಿಸುತ್ತಿದೆ. ಐಪಿಎಲ್‌ಗೆ ವಿದೇಶ ಆಟಗಾರರನ್ನೂ ಖರೀದಿಸಿದ್ದಾರಲ್ಲಾ? ನಿಜವಾಗಿ ಈ ಬಗ್ಗೆ ವಿದೇಶಾಂಗ ನಿಯಮಗಳಡಿಯಲ್ಲಿ ಒಪ್ಪಿಗೆ ಪಡೆಯಬೇಕು. ಆದರೆ ಅಂತಹುದ್ಯಾವುದೂ ನಡೆದಿಲ್ಲ, ಇದರಡಿಯಲ್ಲಿ ನಡೆಯುವ ಅಗಾಧ ಆರ್ಥಿಕ ವಹಿವಾಟಿನ ಮಾಹಿತಿಯಂತೂ ರಿಸರ್ವ್ ಬ್ಯಾಂಕಿಗಿರಲಿ, ಆಡಳಿತಾಂಗದ ಯಾವ ವಿಭಾಗಕ್ಕೂ ಗೊತ್ತಾಗುವಂತಿಲ್ಲ. ಇಂಥದ್ದನ್ನೆಲ್ಲ ಗಮನಿಸಿದ ಕೇಂದ್ರ ಸರ್ಕಾರ ಪಾರ್ಲಿಮೆಂಟರಿ ಕಮಿಟಿಯೊಂದನ್ನು ರಚಿಸಿ ಕ್ರಿಕೆಟ್ ನಿಯಂತ್ರಣಾ ಮಂಡಳಿ ಸದಸ್ಯರನ್ನು ಇತ್ತೀಚೆಗೆ ವಿಚಾರಣೆಗೊಳಪಡಿಸಿದೆ. ಹರಾಜಿನ ಅವಶ್ಯಕತೆಯ ಕುರಿತಾಗಿಯೂ ವಿವರಣೆ ಕೇಳಿದೆ. ಅರೆಬರೆ ಬಟ್ಟೆ ತೊಡಿಸಿ ಚಿಯರ್‌ಗರ್ಲ್ಸ್‌ಗಳನ್ನು ಕುಣಿಸುವ ತುರ್ತಿನ ಕುರಿತಾಗಿಯೂ ಪ್ರಶ್ನಿಸಿದೆ. ಹಣಕಾಸಿನ ವಿಚಾರದಲ್ಲೂ ವಿಸ್ತೃತವಾಗಿ ವಿಚಾರಿಸಿದೆ. ಆದರೆ ಪದಾಧಿಕಾರಿಗಳು ಒಂದೇ ಒಂದು ಪ್ರಶ್ನೆಗೂ ಉತ್ತರಿಸಿಲ್ಲ. ಇದು ಐಪಿಎಲ್ ಹೆಸರಲ್ಲಿ ನಡೆಯುವ ಭಾರೀ ದರೋಡೆಗೆ ಸ್ಪಷ್ಟ ಸಾಕ್ಷಿ.

ಕೊನೆಯದಾಗಿ, ಕ್ರಿಕೆಟ್ ಪ್ರೇಮಿಗಳೊಂದಷ್ಟು ಮಂದಿ 'ದ್ರಾವಿಡ್ ಹಾಗೂ ಗಂಗೂಲಿ ಬುಕ್ಕಿಗಳ ತಾಳಕ್ಕೆ ಕುಣಿಯೋದಿಲ್ಲ, ಆದ್ದರಿಂದಲೇ ಅವರಿಗೆ ತಕ್ಕ ಬೆಲೆ ಸಿಕ್ಕಿಲ್ಲ' ಅಂತೆಲ್ಲ ಚರ್ಚಿಸುತ್ತಿದ್ದಾರೆ. ಹರಾಜಿನಂಥ ದರಿದ್ರತನದ ವಿರುದ್ಧ ಕ್ರಿಕೆಟ್ ಪ್ರೇಮಿಗಳಲ್ಲಿರುವ ಕನಿಷ್ಠ ತಕರಾರು ಬಹುಶಃ ಇದೇ ಇರಬೇಕು! ಒಂದು ವೇಳೆ ದ್ರಾವಿಡ್-ಗಂಗೂಲಿ ಹಾಗೂ ಅರ್ಹರೆನಿಸಿರುವವರಿಗೆಲ್ಲಾ ತಕ್ಕ ಬೆಲೆ ಸಿಕ್ಕಿದ್ದರೆ ಯಾರಿಗೂ ಏನೂ ಅನಿಸುತ್ತಿರಲಿಲ್ಲ.

ಇಂಥ ಮನಸ್ಥಿತಿಯಿಂದಲೇ ಕ್ರಿಕೆಟ್‌ನ ಮೌಲ್ಯಗಳು ಸತ್ತು ಮಲಗಿವೆ. ಆಟಗಾರರು ಹರಾಜಾಗುವ ಹಂತ ತಲುಪಿದ್ದಾರೆ. ಇದೆಲ್ಲದರ ನಡುವೆಯೂ ಸಂವೇದನೆಯಿಲ್ಲದವರಿಗೆ ಮಾತ್ರ ಕ್ರಿಕೆಟ್ ಬದುಕಿರುವಂತೆ ಕಾಣಬಹುದಷ್ಟೇ. ಈಗ ನಮ್ಮೆಲ್ಲರ ಕಣ್ಣೆದುರಿಗಿರುವುದು ಕ್ರಿಕೆಟ್‌ನ ಮೌಲ್ಯಗಳ ಕಳೇಬರವಷ್ಟೇ!


• ಸಂತೋಷ್ ಬಾಗಿಲಗದ್ದೆ

ಅನಕ್ಷರಸ್ಥರಿಗೇ ಅವಮಾನ ಈ ಅಕ್ಷರ!

ಹೆಗ್ಗೋಡು ಎಂಬ ಅಗ್ರಹಾರದಲ್ಲಿ ಅಕ್ಷರ ಎಂಬ ಗಿಂಡಿ ಮಾಣಿಯೊಂದು "ಇಲ್ಲಿ ಬ್ರಾಹ್ಮಣರು ಉಂಡು ಬೀಸಿ ಒಗೆದ ಬಾಳೆಯೆಲೆಯ ಮೇಲೆ ಕೆಳಜಾತಿಗಳು ಬಂದು, ಉರುಳು ಸೇವೆ ಮಾಡಿದರೆ ಬ್ರಾಹ್ಮಣರ ಎಂಜಲುಗಳು ಅವರ ಮೈಗಂಟಿಕೊಂಡು, ಯಾವುದೇ ರೀತಿಯ ಕಜ್ಜಿ, ಕುರ, ತುರಿಕೆ, ಹುಳುಕಡ್ಡಿ, ಇಸುಬು ಮುಂತಾದ ಚರ್ಮರೋಗ ಬರುವುದಿಲ್ಲ, ಬಂದು ಉರುಳಿ. ಹಾಗೆ ಉರುಳುವ ಕ್ರಿಯೆಯಲ್ಲಿ ಭಕ್ತಿಯಿರಬೇಕೆ ಹೊರತು ಅವಮಾನದ ಲವಲೇಶವೂ ಇರಬಾರದು" ಎಂದು ಊಳಿಡುತ್ತಿದ್ದಾನಂತಲ್ಲಾ, ಇದನ್ನು ಕೇಳಿಸಿಕೊಂಡ ನಾಡಿನ ಬುದ್ಧಿಜೀವಿಗಳು, ಮನುಷ್ಯರ ಲದ್ದಿ ನೋಡಿದಷ್ಟು ಅಸಹ್ಯಪಟ್ಟುಕೊಂಡು "ಛೀ, ಕೆ.ವಿ. ಸುಬ್ಬಣ್ಣನಂತಹ ಮೇಧಾವಿಯ ಹೊಟ್ಟೆಯಲ್ಲಿ ಇಂತಹ ಲದ್ದಿ ಬೀಳುವುದೆ? ಇತ್ತೀಚೆಗೆ ಹೆಗ್ಗೋಡು ಮನೆಯ ಬ್ರಾಹ್ಮಣರ ಸ್ಮಶಾನವಾಗುತ್ತದೆಯೆಂಬುದಕ್ಕೆ ಸರಿಯಾದ ಸಾಕ್ಷಿ ಸಿಕ್ಕಿತು" ಎಂದು ಕುಣಿದಾಡುತ್ತಿದ್ದಾರಂತಲ್ಲಾ, ಥೂತ್ತೇರಿ!

* * * *

"ಈ ದೇಶದ ಕ್ರಿಕೆಟ್ ಆಟಗಾರರ ಹರಾಜು ಅಸ್ಪೃಶ್ಯತೆಗಿಂತಲೂ ಭೀಕರವಾದದ್ದು, ಅದನ್ನು ಪ್ರತಿಭಟಿಸುವುದು ಬಿಟ್ಟು, ಸುಬ್ರಹ್ಮಣ್ಯ ದೇವಾಲಯದ ಹರಕೆ ಕುರಿಗಳು ಎಂಜಲೆಲೆ ಮೇಲೆ ಉರುಳಾಡಿ ಎದ್ದಿರುವುದನ್ನೇ ಭೀಕರವಾಗಿ ಸುದ್ದಿ ಮಾಡಿಕೊಂಡು ಚರ್ಚಿಸುತ್ತಿದ್ದೀರಲ್ಲಾ, ನಿಮ್ಮ ಮನಸ್ಸಿಗೆ ಏನಾಗಿದೆ? ಯಾವುದು ಅವಮಾನ? ಯಾವುದು ಭಕ್ತಿಮಾರ್ಗ ಎಂಬುದೇ ತಿಳಿಯುವುದಿಲ್ಲವೇ?" ಎಂದು ಕೆ.ವಿ. ಅಕ್ಷರ ಹೋತ ಸೊಪ್ಪು ಮೇದಂತೆ ಮೇಯುತ್ತ, ಉಗುಳುತ್ತ ಕೇಳುತ್ತಿದ್ದಾನಂತಲ್ಲಾ, ಅಕ್ಷರನ ಅವಿವೇಕವನ್ನು ನೋಡಿದ ಅನಕ್ಷರಸ್ಥರ ಹುಡುಗರು "ಈತನಿಗೆ ಕಾವಳದ ಪಿತ್ಥ ನೆತ್ತಿಗೇರಿ ಏನೇನೊ ಮಾತನಾಡುತ್ತಿದ್ದಾನೆ. ಪುರೋಹಿತಶಾಹಿಗಳನ್ನು ಕ್ಷಮಿಸಿದಂತೆ ಈತನನ್ನು ಕ್ಷಮಿಸುವುದು ಒಳ್ಳೆಯದು" ಎಂದರಂತಲ್ಲಾ, ಥೂತ್ತೇರಿ!!



* * * *

ಸದರಿ ಅಕ್ಷರ ಸುಮ್ಮಸುಮ್ಮನೆ ಇಂತಹ ಮಾತನಾಡಲಾರ. ಹೆಗ್ಗೊಡಿನಲ್ಲಿ ಇಲ್ಲಿಯವರೆಗೆ ನಡೆದಿರಬಹುದಾದ ಚರ್ಚೆಯನ್ನೇ ಈತ ಬಹಿರಂಗವಾಗಿ ಹೇಳುತ್ತಿದ್ದಾನೆ. ಈತನ ಚರ್ಚೆಯ ಮೂಲದ ವಾಸನೆ ಹಿಡಿದರೆ ಅದು ಬೆಲ್ಜಿಯಂ ಬಾಲವೊಂದರಿಂದ ಸ್ಫೂರ್ತಿ ಪಡೆದಿರುವಂತೆ ಕಾಣುತ್ತದೆ. ಹೇಳುವುದನ್ನೆಲ್ಲಾ ಹೇಳಿ, ಅಸ್ಪೃಶ್ಯತೆ ಆಚರಣೆ ಸಮರ್ಥಿಸುವಂತಹ ವಾದವನ್ನೇ ಮಾಡಿ "ನಾನು ಯಾವುದರ ಪರವಾಗಿಯೂ ವಾದಿಸುತ್ತಿಲ್ಲ" ಎಂದು ಜಾರಿಕೊಳ್ಳುವ ಈತ ಎಷ್ಟು ದಡ್ಡನೆಂದರೆ, ಚುಂಚನಕಟ್ಟೆ ದನಗಳ ಜಾತ್ರೆಯಲ್ಲಿ ಎರಡು ಲಕ್ಷ ರೂಗಳಿಗೆ ಮಾರಾಟವಾದ ಜೋಡೆತ್ತುಗಳ ವ್ಯಾಪಾರಕ್ಕೂ, ಮಾರಿದ ಗೌಡನ ಮನೆ ಕೊಟ್ಟಿಗೆಯಲ್ಲಿ ಕುಳಿತು ಉಣ್ಣುವ ಆಳಿನ ಅವಮಾನಕ್ಕೂ ವ್ಯತ್ಯಾಸವೇ ಈತನಿಗೆ ಗೊತ್ತಿಲ್ಲ, ಗೊತ್ತಿದ್ದರೂ "ಇಂತಹ ದನಗಳನ್ನು ಹೀಗೆ ಹರಾಜು ಹಾಕಬಾರದಿತ್ತು, ಬ್ರಾಹ್ಮಣರಿಗೆ ಗೋದಾನ ಕೊಡಬಹುದಿತ್ತು, ಅಥವಾ ರಾಮಚಂದ್ರಾಪುರ ಮಠಕ್ಕೆ ಕೊಡಬಹುದಿತ್ತು" ಎಂಬ ಆಕ್ಷೇಪಣೆಯಂತಿದೆಯೆಂದು ಡಿಎಸ್‌ಎಸ್ ಹುಡುಗರು ಆಡಿಕೊಂಡು ಬಿದ್ದುಬಿದ್ದು ನಕ್ಕವಂತಲ್ಲಾ, ಥೂತ್ತೇರಿ!!

* * * *



ಆಗ್ರಹಾರದ ಮಾರುತಿ ದೇವಸ್ಥಾನದ ಗೋಪುರದ ಮೇಲೆ ಪ್ರಸಾದ ಮೆಲ್ಲುತ್ತ ಮಾತನಾಡುವಂತೆ ಕಾಣುವ ಅಕ್ಷರನ ಅಭಿಪ್ರಾಯಗಳನ್ನು ಮತ್ತೂ ಸರಳಗೊಳಿಸಿ ನೋಡಿದರೆ "ಇದು ರಾಜ ಬೀದಿ. ಪಕ್ಕದಲ್ಲೇ ಮಾರುತಿಗೆ ವಾದ್ಯ ಮಾಡುವ ಕ್ಷೌರಿಕರ ಕೇರಿಯಿದೆ. ಅದರ ಪಕ್ಕದಲ್ಲೇ ಮಾರುತಿ ಮೆರವಣಿಗೆಗೆ ಮಡಿ ಹಾಸುವ ಮಡಿ ವಾಳರ ಕೇರಿಯಿದೆ. ಅದಕ್ಕಿಂತ ತುಸು ದೂರದಲ್ಲಿ ತಮಟೆ ಬಡಿಯುವ ಮಾದಣ್ಣನ ಮನೆಯಿದೆ. ಇವರೆಲ್ಲಾ ಅವರವರ ಸ್ಥಾನದಲ್ಲಿ ಶ್ರೇಣೀಕೃತ ಸಮಾಜದ ಶ್ರೇಷ್ಠ ಆಚರಣೆಯಲ್ಲಿ ತೊಡಗಿರುವಾಗ ಮತ್ತು ಅವರಿಗೇ ಇಲ್ಲದ ಅವಮಾನವನ್ನು ನೀವು ಹೇಗೆ ಗುರುತಿಸುತ್ತೀರಿ? ಶತಮಾನಗಳಿಂದ ಆಚರಿಸಿಕೊಂಡು ಬಂದ ಫಲವಾಗಿ, ಅದಕ್ಕೆ ಒಗ್ಗಿಹೋಗಿರುವ ಜನಕ್ಕೆ ಈ ಕಸುಬೇ ಅವಮಾನ, ನೀವು ಕೂಡ ಗುಡಿಯೊಳಕ್ಕೆ ಪ್ರವೇಶ ಕೇಳಿ, ಪ್ರಸಾದ ಭುಂಜನೆಯ ಸಮಯದಲ್ಲಿ ಸಹಪಂಕ್ತಿ ಕೇಳಿ ಎಂದು ಇಕ್ಕಟ್ಟಿನ ಸನ್ನಿವೇಶ ನಿರ್ಮಿಸುವುದು ಎಷ್ಟು ಸರಿ?" ಎಂಬಂತೆ ಅಕ್ಷರ ವಾದ ಮಾಡಿ, ಹೆಗ್ಗೋಡಿನ ವಿಮರ್ಶಕ ಟಿ.ಪಿ. ಅಶೋಕನೊಡನೆ ಮರುಚಿಂತನೆಗೆ ಕುಳಿತಿರುವಂತೆ ಕಾಣಿಸುತ್ತಾನಲ್ಲ, ಇದನ್ನು ನೋಡಿ ಹೆಗ್ಗೋಡಿನ ಪೀಠಾಧಿಪತಿಗಳಾದ ಅನಂತಮೂರ್ತಿ ಯವರಿಂದ ಅಕ್ಷರ ಏನನ್ನು ಕಲಿತಂತೆ ಕಾಣುತ್ತಿಲ್ಲವಂತಲ್ಲಾ, ಥೂತ್ತೇರಿ!

* * * *

ಅತ್ತ ಹೆಗ್ಗೋಡಿನ ಮಠದ ಕತೆ ಇದಾದರೆ ಇತ್ತ ಚುಂಚನಗಿರಿ ಮಠದ ಅಯ್ಯನವರು ಅವತರಿಸಿದ ದಿನವನ್ನು ವಿಜೃಂಭಣೆಯಾಗಿ ಆಚರಿಸುವ ಸಮಾರಂಭಕ್ಕೆ ಬಂದಿದ್ದ ಕೆಲ ಭಕ್ತ ಸಮೂಹ "ನಮ್ಮ ಕುಯೆಂಪುರವರು ಬಸವಣ್ಣನಂತೆ ಧರ್ಮದ ಪುನರುತ್ಥಾನ ಪ್ರವರ್ತಕನಾಗಿದ್ದರೆ ಎಷ್ಟು ಚೆನ್ನಾಗಿತ್ತು, ನಾವು ಸ್ಥಾವರ ಪ್ರತಿಷ್ಠಾಪಿಸಿಕೊಂಡು, ದಾಸೋಹದ ಹೆಸರಿನಲ್ಲಿ ಬವುನಾಸಿ ಬಾನಕಿಯೊಡನೆ ಬೇಕಾದಷ್ಟು ಸಂಪಾದಿಸಿಕೊಂಡು ಮಜಾ ಮಾಡಬಹುದಿತ್ತು" ಎಂದು ಪೇಚಾಡಿಕೊಂಡರಂತಲ್ಲಾ, ಆಗ ಅಲ್ಲೇ ಇದ್ದ ಸರಕಾರಿ ಜನ "ಇತ್ತೀಚೆಗೆ ಒಂದು ಅನಾಹುತ ಜರುಗ್ತಾಯಿದೆಯಂತೆ. ನಾವೆಲ್ಲಾ ಎಚ್ಚೆತ್ತುಕೊಳ್ಳದಿದ್ದರೆ ಸದ್ಯದಲ್ಲೆ ಕುಯೆಂಪುರವರನ್ನು ಕಳೆದುಕೊಳ್ಳುತ್ತೇವೆ. ಮುಖ್ಯ ವಿಷಯ ಏನಪ್ಪಾ ಅಂದ್ರೇ ಕೆಲ ವಿಪ್ರೋತ್ತಮರು ಕಾರಂತರು ಕುವೆಂಪುಗಿಂತ ದೊಡ್ಡವರು. ಜಾಸ್ತಿ ಬರೆದವರು ಅಂತ ವಾದ ಮಾಡಕ್ಕೆ ಹೊಂಟವರಂತೆ. ಹೆಗ್ಗೋಡಲ್ಲಿರೊ ಹೆಬ್ಬಳ್ಳಿ ಚಿಕ್ಕನಂತ ವ್ಯಕ್ತಿ ಇದರ ಲೀಡರಂತೆ. ಅದ್ಕೆ ನಾವು ಅಂಥೋನೊಬ್ಬನ್ನ ತಂದು ಮಡಿಕಬೇಕು" ಅಂದರಂತಲ್ಲಾ, ಇದನ್ನು ಕೇಳಿಸಿಕೊಂಡ ದೇಜಗೌ "ನನ್ನ ಜೀವಿತಾವಧಿಯಲ್ಲಿ ಅಂತಹದ್ದಕ್ಕೆಲ್ಲಾ ಅವಕಾಶ ಕೊಡಲ್ಲ, ಆಮರಣ ಕೂರ್‍ತಿನಿ" ಎಂದರಂತಲ್ಲಾ, ಥೂ ಥೂ ಥೂತ್ತೇರಿ. ●







ಚೆಡ್ಡಿಗಳ ಟೆರರಿಸಂ ಜಾಲ!

ಹಿಂದುತ್ವವಾದಿ ಭಯೋತ್ಪಾದಕ ನೆಟ್‌ವರ್ಕ್ ಅನ್ನು ಜಾಲಾಡಿದ ಸಿಬಿಐ ತಂಡ ಇದನ್ನು ಹೇಗೆ ಪತ್ತೆ ಮಾಡಿತು ಹಾಗೂ ಯಾವ ಯಾವ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿತು ಎಂಬ ರೋಚಕ ವಿವರಗಳು ಇಲ್ಲಿವೆ....

● ಗೌರಿ ಲಂಕೇಶ್



ಸ್ವಾಮಿ ಅಸೀಮಾನಂದ ನೀಡಿರುವ ತಪ್ಪೊಪ್ಪಿಗೆಯು ಆರೆಸ್ಸೆಸ್ಸಿನ ಭಯೋತ್ಪಾದಕ ಮುಖವನ್ನು ಹೊರಗೆಡವಿದೆ. ಆದರೆ ಅದರಿಂದಲೇ ನ್ಯಾಯಾಲಯದ ಮುಂದೆ ಇದು ಸಾಬೀತಾಗುತ್ತದೆಯೇ? ಆಗುವುದಿಲ್ಲ. ಆದರೆ ಈ ತಪ್ಪೊಪ್ಪಿಗೆಯೊಂದಿಗೆ ಹಲವಾರು ಬಾಂಬ್ ಸ್ಫೋಟಗಳಲ್ಲಿ ಸಿಕ್ಕಿದ ಸಾಕ್ಷ್ಯಾಧಾರಗಳೂ ಇವೆಯಲ್ಲ, ಅವುಗಳನ್ನು ಸರಿಯಾದ ತನಿಖೆಗೆ ಒಳಪಡಿಸಿದರೆ ಹಿಂದುತ್ವ ಭಯೋತ್ಪಾದನೆ ಬಗ್ಗೆ ಸ್ಪಷ್ಟ ಚಿತ್ರಣವಂತೂ ಖಂಡಿತವಾಗಿ ಸಿಗುತ್ತದೆ.

ತನಿಖಾ ತಜ್ಞರ ಪ್ರಕಾರ 2005ರಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ದೆಹಲಿಯಲ್ಲಿ ಸಂಭವಿಸಿದ ಬಾಂಬ್ ಬ್ಲಾಸ್ಟ್‌ಗಳು, 2006ರಲ್ಲಿ ಸಂಕಟ್‌ಮೋಚನ್ ಮಂದಿರದಲ್ಲಿ ಸ್ಫೋಟಗೊಂಡ ಬಾಂಬ್‌ಗಳು ಮತ್ತು 2007ರಲ್ಲಿ ಹೈದರಾಬಾದಿನಲ್ಲಿ ಸಿಡಿದ ಎರಡು ಬಾಂಬ್‌ಗಳು ತಮ್ಮ ಆಕಾರ ಮತ್ತು ಪದಾರ್ಥದಲ್ಲಿ ಬೇರೆ ಬೇರೆ ಇದ್ದವು. ಅವುಗಳನ್ನೆಲ್ಲ ಸ್ಫೋಟಿಸಿದ್ದು ಮುಸಲ್ಮಾನ್ ಭಯೋತ್ಪಾದಕ ಸಂಘಟನೆಗಳು ಎಂಬ ಶಂಕೆ ಇದೆಯಲ್ಲದೆ, ಅವೆಲ್ಲವನ್ನು ಒಂದೇ ಸಂಘಟನೆ ನಡೆಸದೇ ಬೇರೆ ಬೇರೆ ಸಂಘಟನೆಗಳು ನಡೆಸಿದ್ದಿರಬಹುದು ಎಂಬ ಗುಮಾನಿಯೂ ಇದೆ.

ಆದರೆ ಮಾಲೆಗಾಂವ್, ಮೆಕ್ಕಾ ಮಸೀದಿ, ಸಂಜೋತಾ ಎಕ್ಸ್‌ಪ್ರೆಸ್, ಅಜ್ಮೆರ್ ದರ್ಗಾ ಮತ್ತು ಇತರೆಡೆ ಸ್ಫೋಟಗೊಂಡ ಬಾಂಬ್‌ಗಳ ನಡುವೆ ಸಾಮ್ಯತೆ ಇದ್ದು ಈ ಎಲ್ಲಾ ಬಾಂಬ್ ಬ್ಲಾಸ್ಟ್‌ಗಳ ಹಿಂದೆ ಒಂದೇ ಹಿಂದುತ್ವವಾದಿ ತಂಡ ಕೆಲಸ ಮಾಡಿರುವ ಸಾಧ್ಯತೆಗಳು ಈಗ ದೃಢವಾಗುತ್ತಿವೆ. ಅದಕ್ಕೆ ಅಸೀಮಾನಂದ ನೀಡಿರುವ ಮಾಹಿತಿಗಳೂ ಪೂರಕವಾಗಿವೆ.

ಅಸೀಮಾನಂದನೇ ಹೇಳಿರುವ ಪ್ರಕಾರ ಆರೆಸ್ಸೆಸ್ ತನ್ನ ಭಯೋತ್ಪಾದಕ ಕೃತ್ಯಗಳಿಗೆ ಚಾಲನೆ ನೀಡಿದ್ದು ಸುಮಾರು 2000ರಲ್ಲಿ. ಈ ಹೇಳಿಕೆ ಎಷ್ಟು ನಿಜವಿರಬಹುದು? ಈ ಪ್ರಶ್ನೆಗೆ ಇಲ್ಲಿದೆ ಉತ್ತರ.

ಭೋಪಾಲ್ ರೈಲು ನಿಲ್ದಾಣದ ಹತ್ತಿರ 2002ರಲ್ಲಿ ಮುಸಲ್ಮಾನರು ಒಂದು ಧಾರ್ಮಿಕ ಕಾರ್ಯಕ್ರಮಕ್ಕೆ ಸೇರಿದ್ದಾಗ ಸ್ವಲ್ಪದರಲ್ಲೇ ಒಂದು ಅನಾಹುತ ತಪ್ಪಿತ್ತು. ಅಂದು ಅಲ್ಲಿಂದ ಪೊಲೀಸರು ಸ್ಫೋಟಗೊಳ್ಳದೆ ಇದ್ದ ಅರ್ಧ ಡಜನ್‌ಗಿಂತಲೂ ಹೆಚ್ಚಿನ ಸಂಖ್ಯೆಯ ಪೈಪ್ ಬಾಂಬ್ (ಅವನ್ನು ಶೆಲ್ ಬಾಂಬ್‌ಗಳೆಂದೂ ಕರೆಯುತ್ತಾರೆ) ಗಳನ್ನು ವಶಪಡಿಸಿಕೊಂಡಿದ್ದರು.

ಈ ಪೈಪ್ ಬಾಂಬ್‌ಗಳು ಎಲ್ಲಿಂದ ಬಂದವು, ಅದನ್ನು ತಯಾರಿಸಿದ್ದು ಯಾರು ಎಂಬ ಸುಳಿವು ಪೊಲೀಸರಿಗೆ ಸಿಕ್ಕಿರಲೇ ಇಲ್ಲ.

ಆರೆಸ್ಸೆಸ್ ಭಯೋತ್ಪಾದನೆ

ಆದರೆ 2003 ಮತ್ತು 2004 ರಲ್ಲಿ ಮಹಾರಾಷ್ಟ್ರದ ಜಲ್ನಾ ಮತ್ತು ಪರ್ಭನಿ ಎಂಬ ಜಿಲ್ಲೆಗಳಲ್ಲಿರುವ ಹಲವು ಮಸೀದಿಗಳ ಮುಂದೆ ಕೆಲ ಬಾಂಬ್‌ಗಳು ಸ್ಫೋಟಗೊಂಡಿದ್ದವು. ಆಗ ಅಲ್ಲೂ ಭೋಪಾಲ್‌ನಲ್ಲಿ ಸಿಕ್ಕಿದ್ದಂತಹ ಪೈಪ್ ಬಾಂಬ್‌ಗಳನ್ನೇ ಬಳಸಲಾಗಿತ್ತು. ಆದರೆ ಭೋಪಾಲ್- ಜಲ್ನಾ-ಪರ್ಭನಿ ನಡುವಿನ ಸಂಬಂಧವನ್ನು ಪೊಲೀಸರು ಕಲ್ಪಿಸಿಕೊಳ್ಳುವಲ್ಲಿ ವಿಫಲರಾಗಿದ್ದರು.

ಇದಾದ ನಂತರ 2006ರಲ್ಲಿ ಒಂದು ಪ್ರಕರಣ ನಡೆಯಿತು. ಮಹಾರಾಷ್ಟ್ರದ ನಾಂಡೆಡ್ ಎಂಬಲ್ಲಿ ಆರೆಸ್ಸೆಸ್ ನಾಯಕನ ಮನೆಯಲ್ಲಿ ಬಾಂಬ್ ಬ್ಲಾಸ್ಟ್ ಸಂಭವಿಸಿ ಅದರಲ್ಲಿ ಒಬ್ಬ ಆರೆಸ್ಸೆಸ್ ಸದಸ್ಯ ಮತ್ತು ಒಬ್ಬ ಭಜರಂಗದ ಸದಸ್ಯ ಸಾವಿಗೀಡಾಗಿದ್ದರು. ತನಿಖೆ ನಡೆಸಿದ ಪೊಲೀಸರಿಗೆ ಅವರಿಬ್ಬರು ಅಲ್ಲಿ ಪೈಪ್ ಬಾಂಬ್‌ಗಳನ್ನು ತಯಾರಿಸುತ್ತಿದ್ದಾಗ, ಅನಾಹುತ ಸಂಭವಿಸಿ ಸತ್ತಿದ್ದಾರೆಂದು ಗೊತ್ತಾಯಿತು. ಆಗಲೂ, ಈ ಪೈಪ್ ಬಾಂಬ್‌ಗಳ ಹಿಂದೆ ಆರೆಸ್ಸೆಸ್ ಭಯೋತ್ಪಾದನೆ ಇರಬಹುದೇ ಎಂಬುದರ ಬಗ್ಗೆ ಪೊಲೀಸರು ತಲೆ ಕೆಡಿಸಿಕೊಂಡಿರಲಿಲ್ಲ.

ಆರೆಸ್ಸೆಸ್ಸಿನ ಭಯೋತ್ಪಾದಕರು ದೊಡ್ಡ ಮಟ್ಟದ ಸ್ಟ್ರೈಕ್‌ಗೆ ಕೈ ಹಾಕಿದ್ದು 2007ರಲ್ಲಿ. ಅದಕ್ಕೆ ಅವರು ಆಯ್ಕೆ ಮಾಡಿಕೊಂಡಿದ್ದು ಹೈದರಾಬಾದಿನ ಮೆಕ್ಕಾ ಮಸೀದಿಯನ್ನು. 2007ರ ಮೇ 17ರಂದು ಮೆಕ್ಕಾ ಮಸೀದಿಯಲ್ಲಿ ಮೊಬೈಲ್ ಫೋನ್ ಮೂಲಕ ಒಂದು ಐಇಡಿ ಬಾಂಬ್ ಅನ್ನು ಸ್ಫೋಟಿಸಲಾಗಿತ್ತು. ಆದರೆ ಒಂದು ಬಾಂಬ್ ಸ್ಫೋಟಗೊಳ್ಳದೆ ಪೊಲೀಸರಿಗೆ ಸಿಕ್ಕಿತ್ತು. ಅದರ ಜೊತೆಗೆ ಒಂದು ನೋಕಿಯಾ ಹ್ಯಾಂಡ್‌ಸೆಟ್ ಮತ್ತು ಅದರೊಳಗಿದ್ದ ವೋಡಾಫೋನ್ ಸಿಮ್ ಕಾರ್ಡ್ ಕೂಡ ಸಿಕ್ಕಿತ್ತು.

ಅಂದೇ ಹೈದರಾಬಾದಿನ ಪೊಲೀಸರು ಸರಿಯಾದ ತನಿಖೆ ನಡೆಸಿ ಆ ಹ್ಯಾಂಡ್‌ಸೆಟ್ ಮತ್ತು ಸಿಮ್ ಯಾರಿಗೆ ಸೇರಿದ್ದು ಎಂದು ನೋಡಿದ್ದರೆ ಆನಂತರ ಸಂಭವಿಸಿದ ಹಲವು ಸ್ಫೋಟಗಳನ್ನು ತಡೆದು ನೂರಾರು ಜನರ ಬದುಕನ್ನು ಉಳಿಸಬಹುದಿತ್ತು. ಆದರೆ ಅದನ್ನು ಮಾಡದೆ ಹೈದರಾಬಾದಿನ ಪೊಲೀಸರು ಹತ್ತಾರು ಅಮಾಯಕ ಮುಸಲ್ಮಾನರನ್ನು ಅರೆಸ್ಟ್ ಮಾಡಿ ಅವರೆಲ್ಲ ವಿವಿಧ ಭಯೋತ್ಪಾದಕ ಸಂಘಟನೆಗಳಿಗೆ ಸೇರಿದ್ದವರೆಂದೂ ಸುಳ್ಳುಸುಳ್ಳಾಗಿ ಆರೋಪಿಸಿದ್ದರು.

ಮೆಕ್ಕಾ ಮಸೀದಿಯಲ್ಲಿ ಕಂಡ 'ಯಶಸ್ಸಿ'ನಿಂದ ಮತ್ತಷ್ಟು ಉತ್ಸಾಹಭರಿತರಾದ ಆರೆಸ್ಸೆಸ್‌ನ ಭಯೋತ್ಪಾದಕರು ಆನಂತರ ತಮ್ಮ ದುಷ್ಕೃತ್ಯಕ್ಕೆ ಆಯ್ಕೆ ಮಾಡಿಕೊಂಡಿದ್ದು ಸಂಜೋತಾ ಎಕ್ಸ್‌ಪ್ರೆಸ್ ಅನ್ನು. ಆ ಟ್ರೈನಿನಲ್ಲಿ ಅವರು ಸ್ಫೋಟಿಸಿದ ಮೂರು ಬಲಿಷ್ಠ ಬಾಂಬ್‌ಗಳಿಂದಾಗಿ ಎರಡು ಭೋಗಿಗಳು ಬೆಂಕಿ ಹತ್ತಿಕೊಂಡು 68 ಜನ ಸಾವಿಗೀಡಾಗಿದ್ದರು. ಆದರೆ ಈ ಪ್ರಕರಣದಲ್ಲೂ ಅದೃಷ್ಟವಶಾತ್ ಸ್ಫೋಟಗೊಳ್ಳದೆ ಇದ್ದ ಇನ್ನೂ ಮೂರು ಬಾಂಬ್‌ಗಳು ಪೊಲೀಸರಿಗೆ ಸಿಕ್ಕಿದ್ದವು.



ಮೆಕ್ಕಾ ಮಸೀದಿ ಮತ್ತು ಸಂಜೋತಾ ಎಕ್ಸ್‌ಪ್ರೆಸ್ ದುರಂತಗಳ ತನಿಖೆಯನ್ನು ಸಿಬಿಐ ಎತ್ತಿಕೊಂಡಾಗ ಇವೆರಡು ಪ್ರಕರಣಗಳಲ್ಲಿ ಬಳಸಲಾಗಿದ್ದ ಬಾಂಬ್‌ಗಳ ನಡುವಿನ ಸಾಮ್ಯತೆಯನ್ನು ಪ್ರಥಮ ಬಾರಿಗೆ ಗುರುತಿಸಿದರು. ಇವೆರಡರಲ್ಲಿ ಒಂದೇ ತರಹದ 6.53 ವೋಲ್ಟ್ ಬ್ಯಾಟರಿಗಳನ್ನು ಬಳಸಲಾಗಿತ್ತು ಮತ್ತು ಎರಡೂ ಕಡೆ ಉಪಯೋಗಿಸಿದ್ದ ಬಾಂಬ್‌ಗಳ ಮೇಲಿನ ಲೋಹದ ಶೆಲ್ ಒಂದೇ ರೀತಿ ಇದ್ದವು. ಜೊತೆಗೆ ಮೆಕ್ಕಾ ಮಸೀದಿ ಮತ್ತು ಸಂಜೌತಾ ರೈಲಿನಲ್ಲಿ ಬಳಸಲಾಗಿದ್ದ ಆರ್‌ಡಿಎಕ್ಸ್ ಎಂಬ ಬಲಿಷ್ಠ ಸ್ಫೋಟಕವು ಭಾರತದ ಸೈನ್ಯದಿಂದ ಕದಿಯಲಾಗಿದೆ ಎಂಬುದೂ ಗೋಚರವಾಯಿತು.

ಇದೆಲ್ಲದರಷ್ಟೇ ಮುಖ್ಯವಾಗಿ ನಾಂಡೆಡ್, ಜಲ್ನಾ, ಪರ್ಭನಿ, ಭೋಪಾಲ್, ಸಂಜೋತಾ ಎಕ್ಸ್‌ಪ್ರೆಸ್ ಮತ್ತು ಮೆಕ್ಕಾ ಮಸೀದಿ... ಹೀಗೆ ಹಲವಾರು ಕಡೆ ಸಿಕ್ಕಿದ್ದ ಬಾಂಬ್‌ಗಳ ಶೆಲ್‌ಗಳು ಒಂದೇ ತರಹದ್ದಾಗಿದ್ದು ಇವೆಲ್ಲವುಗಳ ಹಿಂದೆ ಒಂದೇ ಗುಂಪಿನ ಕೈವಾಡವಿದೆ ಎಂಬುದು ಸ್ಪಷ್ಟವಾಯಿತು.

ಆಗ ಸಿಬಿಐ ಪೊಲೀಸರು ಮೆಕ್ಕಾ ಮಸೀದಿಯಲ್ಲಿ ಸಿಕ್ಕಿದ್ದ ನೋಕಿಯಾ ಫೋನಿನ ಜಾಡನ್ನು ಹಿಡಿದುಕೊಂಡು ತಮ್ಮ ವಿಚಾರಣೆಯನ್ನು ಪ್ರಾರಂಭಿಸಿದರು. ಪ್ರತಿ ಮೊಬೈಲ್ ಹ್ಯಾಂಡ್‌ಸೆಟ್ಟಿಗೆ ಅದರ ತಯಾರಕ ಕಂಪನಿ ಇಂಟರ್‌ನ್ಯಾಷನಲ್ ಮೊಬೈಲ್ ಎಕ್ವಿಪ್‌ಮೆಂಟ್ ಐಡೆಂಟಿಫೈಯರ್ ಎಂಬ 15 ಸಂಖ್ಯೆಗಳನ್ನುಳ್ಳ ನಂಬರ್ ಅನ್ನು ನೀಡಿರುತ್ತಾರೆ. ಅದನ್ನು ಆಧರಿಸಿ ವಿಚಾರಣೆ ನಡೆಸಿದಾಗ ಫರೀದಾಬಾದಿನ ಒಂದು ಅಂಗಡಿಯಿಂದ ಯಾರೋ ಒಬ್ಬರು ಎರಡು ನೋಕಿಯಾ 6030 ಹ್ಯಾಂಡ್‌ಸೆಟ್‌ಗಳನ್ನು ಖರೀದಿಸಿದ್ದರೆಂದು ಗೊತ್ತಾಯಿತು.

ಹಾಗೆಯೇ ಅದರೊಳಗಿದ್ದ ವೋಡಾಫೋನ್ ಕಂಪನಿಯ ಸಿಮ್ ಕಾರ್ಡಿನ ಬಗೆಗಿನ ವಿಚಾರಣೆಯಲ್ಲಿ ಪಶ್ಚಿಮ ಬಂಗಾಲದ ಚಿತ್ತರಂಜನ್ ನಗರದಲ್ಲಿ ಬಾಬು ಲಾಲ್ ಯಾದವ್ ಎಂಬಾತ ಅದನ್ನು 2006ರಲ್ಲಿ ಕೊಂಡಿದ್ದನೆಂದು ಗೊತ್ತಾಯಿತು. ಆದರೆ ಈ ಬಾಬುಲಾಲ್ ಯಾದವ್ ಎಂಬಾತ ಖೊಟ್ಟಿ ಗುರುತಿನ ಚೀಟಿ ತೋರಿಸಿ ಅದನ್ನು ಕೊಂಡಿದ್ದರಿಂದ ಆತನನ್ನು ಪತ್ತೆ ಮಾಡಲಾಗಲಿಲ್ಲ. ಜೊತೆಗೆ ಈ ಸಿಮ್ ನಂಬರ್‌ನಿಂದ ಯಾವುದೇ ಕರೆ ಹೊರಹೋಗಿರಲಿಲ್ಲ ಮತ್ತು ಯಾವುದೇ ಕರೆ ಒಳಬಂದಿರಲಿಲ್ಲ. ಇದು ಪೊಲೀಸರಿಗೆ ಒಂದು ಸಮಸ್ಯೆಯಾಗಿ ತನಿಖೆ ಅಲ್ಲಿಗೇ ನಿಲ್ಲುವ ಅಪಾಯವಿತ್ತು.

ಆದರೆ ಸಿಬಿಐ ಪೊಲೀಸರು ಸುಮ್ಮನಾಗಲಿಲ್ಲ. ಇದೇ 'ಬಾಬುಲಾಲ್ ಯಾದವ್' ಹೆಸರಿನಲ್ಲಿ ಯಾರಾದರೂ ಸಿಮ್ ಕಾರ್ಡ್‌ಗಳನ್ನು ಖರೀದಿಸಿದ್ದಾರೆಯೇ ಎಂದು ಎಲ್ಲಾ ಕಂಪನಿಗಳಿಗೂ ಪತ್ರ ಬರೆದರು. ಆಗ ಗೊತ್ತಾಗಿದ್ದೇನೆಂದರೆ ಅದೇ ಹೆಸರಿನಲ್ಲಿ ಅಥವಾ ಅದೇ ಖೊಟ್ಟಿ ಅಡ್ರೆಸ್ ನೀಡಿ


ಯಾವ ಅಟಲ್? ಯಾವ ಅಧ್ವಾನಿ?

ಸ್ವಾಮಿ ಅಸೀಮಾನಂದನನ್ನು ಕಳೆದ ಡಿಸೆಂಬರ್ 16 ರಂದು ಸಿಬಿಐ ಪೊಲೀಸರು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ಅಸೀಮಾನಂದನು ತಾನೋರ್ವ ಭಯೋತ್ಪಾದಕನೆಂದೂ, ತಪ್ಪೊಪ್ಪಿಗೆಯನ್ನು ನೀಡುವೆನೆಂದೂ ಹೇಳಿದಾಗ ಸಹಜವಾಗಿಯೇ ನ್ಯಾಯಾಧೀಶರಿಗೆ ಅಚ್ಚರಿಯಾಯಿತು. "ನೀವು ಇಂತಹ ಹೇಳಿಕೆ ನೀಡಬೇಕೆಂದು ನಿಮ್ಮ ಮೇಲೆ ಸಿಬಿಐ ಪೊಲೀಸರು ಒತ್ತಾಯ ಹೇರಿದ್ದಾರಾ?" ಎಂದು ನ್ಯಾಯಾಧೀಶರು ಕೇಳಿದರು.

ಆಗ ಅಸೀಮಾನಂದ ನಕ್ಕು "ಈ ಪೊಲೀಸರು ನನ್ನ ಮೇಲೆ ಒತ್ತಡ ಹೇರುವಷ್ಟು ಅಸಹಾಯಕನಾಗಿ ನಾನು ಕಾಣಿಸುತ್ತೇನೆಯೇ? ಅಂತಹ ಅಟಲ್ ಮತ್ತು ಅಧ್ವಾನಿಗೇ ನನ್ನ ಮೇಲೆ ಒತ್ತಡ ಹಾಕಲಾಗದಿರುವಾಗ ಈ ಪಾಪದ ಸಿಬಿಐ ಪೊಲೀಸರು ಯಾವ ಲೆಕ್ಕಕ್ಕೆ?" ಎಂದು ಉತ್ತರಿಸಿದ.

ಇದನ್ನು ಕೇಳಿ ನ್ಯಾಯಾಧೀಶರು ವಿಚಲಿತರಾದರು. ವಯಸ್ಸಾಗಿರುವ, ಹರಕಲು ಬಟ್ಟೆ ಧರಿಸಿರುವ, ತಾನೋರ್ವ ಭಯೋತ್ಪಾದಕ ಎನ್ನುತ್ತಿರುವ ಈ ವ್ಯಕ್ತಿ ಯಾರ ಬಗ್ಗೆ ಮಾತನಾಡುತ್ತಿರಬಹುದು ಎಂದು ಅಚ್ಚರಿಗೊಂಡ ಅವರು "ಈ ಅಟಲ್ ಮತ್ತು ಅಧ್ವಾನಿ ಯಾರು?" ಎಂದು ಕೇಳಿದರು.

"ಮತ್ತಿನ್ಯಾರು, ನಮ್ಮ ದೇಶದ ಮಾಜಿ ಪ್ರಧಾನಿ ಮತ್ತು ಮಾಜಿ ಉಪಪ್ರಧಾನಿ" ಎಂದು ಅಸೀಮಾನಂದ ಅಷ್ಟೇ ಕ್ಯಾಷುಯಲ್ ಆಗಿ ಉತ್ತರಿಸಿದ.



ಅಸೀಮಾನಂದನ ಈ ಉಢಾಫೆ ಪ್ರವೃತ್ತಿಗೆ ಕಾರಣವೂ ಇದೆ. ಈತ ಗುಜರಾತಿನ ಡಾಂಗ್ಸ್ ಪ್ರದೇಶದಲ್ಲಿ ಶಬರಿಧಾಮ ಎಂಬ ಆಶ್ರಮವನ್ನು ಸ್ಥಾಪಿಸಿದ್ದ. ಈ ಹಿಂದೆ ಆ ಪ್ರದೇಶದಲ್ಲಿ ವಾಸಿಸುತ್ತಿರುವ ಆದಿವಾಸಿಗಳನ್ನು ಕ್ರಿಶ್ಚಿಯನ್ನರು ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಿದ್ದರು. ಅವರನ್ನೆಲ್ಲ ಈ ಅಸೀಮಾನಂದ ಮತ್ತೆ ಹಿಂದೂ 'ಧರ್ಮ'ಕ್ಕೆ ಮರು ಮತಾಂತರ ಮಾಡುವ ಆರೆಸ್ಸೆಸ್ ಯೋಜನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ. ಆಗ ಈತ ಅದೆಷ್ಟು ಆಕ್ರಮಣಕಾರಿಯಾಗಿ ತನ್ನ ಮರುಮತಾಂತರ ಕೆಲಸದಲ್ಲಿ ತೊಡಗಿದ್ದನೆಂದರೆ ಗೂಂಡಾ ಪಡೆಗಳನ್ನು ಕಟ್ಟಿಕೊಂಡು ಕ್ರಿಶ್ಚಿಯನ್ ಪಾದ್ರಿಗಳ ಮೇಲೆ ದಾಳಿಗಳನ್ನು ನಡೆಸುತ್ತಿದ್ದ, ಚರ್ಚ್‌ಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಅಲ್ಲಿನ ಜನರನ್ನು ಬೆದರಿಸುತ್ತಿದ್ದ. ಒಂದು ಅಂದಾಜಿನ ಪ್ರಕಾರ ಈ ಅಸೀಮಾನಂದ ಹೀಗೆ ಆಕ್ರಮವಾಗಿ ಎರಡು ಡಜನ್ ಚರ್ಚ್‌ಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದ.

ಅಸೀಮಾನಂದನ ಈ ದಮನಕಾರಿ ಧೋರಣೆಯನ್ನು ಕಂಡು ಮಾಜಿ ಪ್ರಧಾನಿ ಮತ್ತು ಆರೆಸ್ಸೆಸ್ಸಿನ ಗೋಮುಖ ವ್ಯಾಘ್ರ ಅಟಲ್ ಬಿಹಾರಿ ವಾಜಪೇಯಿಯೇ ಆತಂಕಗೊಂಡಿದ್ದರಂತೆ. ಮಾತ್ರವಲ್ಲ ಒಮ್ಮೆ ವಾಜಪೇಯಿ ಅಸೀಮಾನಂದನಿಗೆ 'ಸಾವಧಾನ'ದಿಂದ ವರ್ತಿಸು ಎಂದು ಸೂಚಿಸಿದ್ದರಂತೆ. ಆದರೆ ವಾಜಪೇಯಿ ಸೇರಿದಂತೆ ಯಾರ ಮಾತನ್ನೂ ಕೇಳುವ ಆಸಾಮಿ ಆಗಿರಲಿಲ್ಲ ಈ ಅಸೀಮಾನಂದ. ಬದಲಾಗಿ ಕ್ರಿಶ್ಚಿಯನ್ನರ ವಿರುದ್ಧ ಕೆಂಡಕಾರುತ್ತಾ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಸದಾ ಹವಣಿಸುತ್ತಿದ್ದ.

ಆದರೆ ವಿಪರ್ಯಾಸ ನೋಡಿ. ಚಿಕ್ಕವನಿದ್ದಾಗಿನಿಂದಲೂ ಆರೆಸ್ಸೆಸ್ ಜೊತೆ ಇದ್ದು ಅದರ ಕೋಮುವಾದಿ ಸಿದ್ಧಾಂತವನ್ನೇ ತನ್ನ ಪ್ರತಿ ಕಣದಲ್ಲಿ ತುಂಬಿಕೊಂಡಿದ್ದ ಅಸೀಮಾನಂದ ಎಂಬ ಈ ರಕ್ತ ಪಿಪಾಸುವಿನಲ್ಲಿ ಕೊನೆಗೂ ಬದಲಾವಣೆ ತಂದದ್ದು ಓರ್ವ ಅಮಾಯಕ ಮುಸ್ಲಿಮ್ ಯುವಕ.

ಬದುಕಿನ ಹಾದಿಯಲ್ಲಿ ಎಂತೆಂತಹ ಕುತೂಹಲಕಾರಿ ಸಂಗತಿಗಳು ತುಂಬಿರುತ್ತವಲ್ಲವೇ?!

ಬಿಡುಗಡೆಗೊಂಡ ಅಬ್ದುಲ್ ಕಲೀಂ

ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ ಸಂಭವಿಸಿದ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಒಂದೂವರೆ ವರ್ಷಗಳ ಕಾಲ ಬಂಧನಕ್ಕೊಳಗಾಗಿ ಪೊಲೀಸರಿಂದ ಹಿಂಸೆಯನ್ನು ಎದುರಿಸಿದ್ದ ಅಮಾಯಕ ಮುಸ್ಲಿಂ ಯುವಕ ಅಬ್ದುಲ್ ಕಲೀಂ ಮೊನ್ನೆ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾನೆ.



ಆರೆಸ್ಸೆಸ್‌ನ ಭಯೋತ್ಪಾದಕ ಕೃತ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ, ಮೆಕ್ಕಾ ಮಸೀದಿಯೂ ಸೇರಿದಂತೆ ಹಲವೆಡೆ ಬಾಂಬ್‌ಗಳನ್ನು ಸ್ಫೋಟಿಸಿ ನೂರಾರು ಅಮಾಯಕರನ್ನು ಬಲಿ ತಗೆದುಕೊಂಡಿದ್ದ ಸ್ವಾಮಿ ಅಸೀಮಾನಂದ ಎಂಬಾತ ಈ ಎಲ್ಲ ಕೃತ್ಯಗಳ ಜವಾಬ್ದಾರಿಯನ್ನು ಹೊತ್ತಿಕೊಂಡು ನ್ಯಾಯಾಲಯದ ಮುಂದೆ ತಪ್ಪೊಪ್ಪಿಗೆಯ ಹೇಳಿಕೆಯನ್ನು ನೀಡಿದ್ದರ ಪರಿಣಾಮವಾಗಿ ಕಲೀಂನ ಬಿಡುಗಡೆ ಆಗಿದೆ.

ಆದರೆ ಕಲೀಂಗೆ ನ್ಯಾಯ ಸಿಗುವುದೇ?.

ಮೆಕ್ಕಾ ಮಸೀದಿಯಲ್ಲಿ ಮೊಬೈಲ್ ಫೋನ್ ಮೂಲಕ ಬಾಂಬ್‌ಗಳನ್ನು ಸ್ಫೋಟಿಸಿ 24 ಜನರನ್ನು ಬಲಿತೆಗೆದುಕೊಂಡಾಗ, ಅಲ್ಲಿ ಒಂದು ಬಾಂಬ್ ಸ್ಫೋಟಗೊಳ್ಳದೆ ಉಳಿದಿತ್ತು. ಆಗ ಈ ಕಲೀಂ ಕೂಡ ಮೊಬೈಲ್ ಫೋನ್ ಗಳನ್ನು ಮತ್ತು ಸಿಮ್ ಕಾರ್ಡ್‌ಗಳನ್ನು ಮಾರುತ್ತಾ, ಕಾನೂನು ಪದವಿಗಾಗಿ ಓದುತ್ತ ತನ್ನ ಜೀವನ ಸಾಗಿಸುತ್ತಿದ್ದ. ಸ್ಫೋಟಗೊಳ್ಳದೆ ಉಳಿದಿದ್ದ ಬಾಂಬ್‌ನಲ್ಲಿದ್ದ ಸಿಮ್ ಕಾರ್ಡನ್ನು ಯಾರು, ಎಲ್ಲಿ, ಯಾವಾಗ ಖರೀದಿಸಿದ್ದರು ಎಂದು ಪೊಲೀಸರು ಸರಿಯಾದ ತನಿಖೆ ನಡೆಸಿದ್ದರೆ ಅಂದೇ ಸ್ವಾಮಿ ಅಸೀಮಾನಂದ ಮತ್ತಾತನ ಹಿಂದುತ್ವವಾದಿ ಗ್ಯಾಂಗಿನ ಅಸಲೀ ಮುಖ ಅನಾವರಣಗೊಳ್ಳುತ್ತಿತ್ತು. ಆದರೆ ಪೊಲೀಸರು ಹಾಗೆ ಮಾಡದೆ, ಕಲೀಂ ಸೇರಿದಂತೆ ಹತ್ತಾರು ಅಮಾಯಕ ಮುಸಲ್ಮಾನ ಯುವಕರನ್ನು ಬಂಧಿಸಿದ್ದರು.

2007ರಲ್ಲಿ ತಾನು ಮಾಡದ ಪಾಪಕ್ಕೆ ಕಲೀಂ ಬಂಧನಕ್ಕೊಳಗಾದಾಗಿನಿಂದಲೂ ಆತನ ಬದುಕೇ ನುಚ್ಚುನೂರಾಗಿದೆ. ವಿದ್ಯಾಭ್ಯಾಸ ಅರ್ಧಕ್ಕೆ ನಿಂತಿದೆ. ಚಿಕ್ಕ ಪ್ರಮಾಣದಲ್ಲಿ ನಡೆಸುತ್ತಿದ್ದ ಮೊಬೈಲ್ ಮತ್ತು ಸಿಮ್ ವ್ಯಾಪಾರ ಬಂದ್ ಆಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಆತ ಭಯೋತ್ಪಾದಕ ಕೃತ್ಯದಲ್ಲಿ ಭಾಗಿಯಾಗಿದ್ದ ಎಂಬ ಕಳಂಕ ಅಂಟಿಕೊಂಡಿದೆ.

ಇದನ್ನೆಲ್ಲ ನಿವಾರಿಸಿ ಆತ ಮತ್ತೆ ನೆಮ್ಮದಿಯ, ಸ್ವಾಭಿಮಾನದ ಬದುಕನ್ನು ನಡೆಸುವಂತೆ ಆತನಿಗೆ ನ್ಯಾಯ ನೀಡುವವರ್‍ಯಾರು?

ಅಥವಾ ಅದೇ ನಕಲಿ ಫೋಟೋ ತೋರಿಸಿ- ಒಟ್ಟು 11 ಸಿಮ್ ಕಾರ್ಡ್‌ಗಳನ್ನು ಯಾರೋ 2006 ರ ಜೂನ್ ತಿಂಗಳಿನಿಂದ ಡಿಸೆಂಬರ್ ತಿಂಗಳತನಕ ಪಶ್ಚಿಮ ಬಂಗಾಲದ ಬರ್ಧಮಾನ್ ಜಿಲ್ಲೆಯ ಮೂರು ಅಂಗಡಿಗಳಿಂದ ಮತ್ತು ಜಾರ್ಖಂಡ್ ರಾಜ್ಯದ ಜಂತಾರ ನಗರದ ನಾಲ್ಕು ಅಂಗಡಿಗಳಿಂದ ಖರೀದಿಸಿದ್ದು ಗೊತ್ತಾಯಿತು.

ತನಿಖೆಯನ್ನು ಮುಂದುವರೆಸಿದಾಗ, ಈ ಎಲ್ಲಾ ಹನ್ನೊಂದು ಸಿಮ್ ಕಾರ್ಡ್‌ಗಳನ್ನು ಒಂಭತ್ತು ವಿವಿಧ ಹ್ಯಾಂಡ್‌ಸೆಟ್‌ಗಳಲ್ಲಿ ಬಳಸಿದ್ದು ಕಂಡುಬಂತು. ಜೊತೆಗೆ ಆ ಹ್ಯಾಂಡ್ ಸೆಟ್‌ಗಳಲ್ಲಿ ಎರಡನ್ನು ಫರೀದಾಬಾದಿನಲ್ಲೂ, ಮೂರನ್ನು ಬರ್ಧಮಾನ್‌ನಲ್ಲೂ, ಮೂರನ್ನು ಜಂತಾರದಲ್ಲೂ ಮತ್ತು ಒಂದನ್ನು ದೆಹಲಿಯಲ್ಲೂ ಖರೀದಿಸಲಾಗಿತ್ತು ಎಂದು ಪತ್ತೆಹಚ್ಚಲಾಯಿತು. ಆದರೆ ಈ ಸಿಮ್ ಕಾರ್ಡ್ ಮತ್ತು ಹ್ಯಾಂಡ್‌ಸೆಟ್‌ಗಳನ್ನು ಖರೀದಿಸಿದ್ದು ಯಾರು ಎಂಬುದನ್ನು ಪತ್ತೆ ಮಾಡಲಾಗಲಿಲ್ಲ.

ಅಲ್ಲಿಂದ ತನಿಖೆ ಮುಂದಕ್ಕೆ ಹೋಗಲೇ ಇಲ್ಲ...

ಆದರೆ 2007ರ ಅಕ್ಟೋಬರ್ 11ರಂದು ರಾಜಸ್ಥಾನದ ಅಜ್ಮೇರ್ ದರ್ಗಾದಲ್ಲಿ ಮತ್ತೊಂದು ಬಾಂಬ್ ಸ್ಫೋಟಗೊಂಡಿತು. ಆ ಪ್ರಕರಣದಲ್ಲಿ ಮೂವರು ಅಸುನೀಗಿ ಹಲವಾರು ಜನ ಗಾಯಗೊಂಡರು. ಆದರೆ ಅದೃಷ್ಟವಶಾತ್ ಅಲ್ಲೂ ಕೂಡ ಒಂದು ಬಾಂಬ್ ಸ್ಫೋಟಗೊಳ್ಳದೆ ಹಾಗೆ ಉಳಿದಿತ್ತು. ಅದಕ್ಕಿಂತ ಮುಖ್ಯವಾಗಿ ಅಜ್ಮೇರ್ ದರ್ಗಾದಲ್ಲಿ ಬಳಸಲಾಗಿದ್ದ ಬಾಂಬ್ ಮೆಕ್ಕಾ ಮಸೀದಿಯಲ್ಲಿ ಬಳಸಿದ್ದ ಬಾಂಬ್‌ನ ತದ್ರೂಪಿ ಆಗಿತ್ತು. ಅಷ್ಟೇ ಅಲ್ಲ, ಅಲ್ಲಿಯತನಕ ಸಿಬಿಐ ಪೊಲೀಸರು ಸಂಗ್ರಹಿಸಿದ್ದ ಸಿಮ್ ಮತ್ತು ಮೊಬೈಲ್ ಸಂಖ್ಯೆಗಳ ಪಟ್ಟಿಯನ್ನು ರಾಜಸ್ಥಾನದ ವಿಶೇಷ ತನಿಖಾ ದಳದ ಪೊಲೀಸರು ಪರಿಶೀಲಿಸಿದಾಗ, ಅಜ್ಮೇರ್ ದರ್ಗಾದ ಸ್ಫೋಟದಲ್ಲಿ ಆ ಪಟ್ಟಿಯಲ್ಲಿದ್ದ ಫೋನ್ ಒಂದನ್ನು ಬಳಸಿದ್ದೂ ದೃಢಪಟ್ಟಿತು.

ಅಂದರೆ ಮೆಕ್ಕಾ ಮಸೀದಿ ಬ್ಲಾಸ್ಟ್ ನ ಹಿಂದಿದ್ದ ತಂಡವೇ ಅಜ್ಮೇರ್ ಬ್ಲಾಸ್ಟ್‌ನ ಹಿಂದಿದ್ದದ್ದು ರಾಜಸ್ಥಾನ ಮತ್ತು ಸಿಬಿಐ ಪೊಲೀಸರಿಗೆ ಗೊತ್ತಾಯಿತು. ಆ ಎರಡೂ ತಂಡಗಳು ಜೊತೆಗೂಡಿ ತನಿಖೆಯನ್ನು ಮುಂದುವರೆಸಿದವು. ಅಷ್ಟು ಹೊತ್ತಿಗಾಗಲೇ ಆ ಒಂಭತ್ತು ಹ್ಯಾಂಡ್ ಸೆಟ್‌ಗಳಲ್ಲಿ ನಾಲ್ಕನ್ನು ಮೆಕ್ಕಾ ಮಸೀದಿ ಮತ್ತು ಅಜ್ಮೇರ್ ಬ್ಲಾಸ್ಟ್‌ಗಳಲ್ಲಿ ಭಯೋತ್ಪಾದಕರು ಉಪಯೋಗಿಸಿದ್ದರಿಂದ ಉಳಿದ ಐದು ಹ್ಯಾಂಡ್ ಸೆಟ್‌ಗಳಿಗೆ ಪೊಲೀಸರು ಹುಡುಕಲಾರಂಭಿಸಿದರು.

2008ರ ಸೆಪ್ಟೆಂಬರ್ 29ರಂದು ಬೇರೆ ಬೇರೆ ಕಡೆ ಎರಡು ಬಾಂಬ್‌ಗಳು ಬ್ಲಾಸ್ಟ್ ಆದವು. ಮಹಾರಾಷ್ಟ್ರದ ಮಾಲೆಗಾಂವ್ ಎಂಬ ನಗರದ ಬಿಕ್ಕು ಚೌಕ್ ಎಂಬ ಮುಸಲ್ಮಾನರೇ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಏರಿಯಾದಲ್ಲಿ ಮೋಟಾರ್ ಸೈಕಲ್ ಒಂದರಲ್ಲಿ ಇಟ್ಟಿದ್ದ ಬಾಂಬ್ ಸ್ಫೋಟಗೊಂಡು ಹಲವಾರು ಮುಸಲ್ಮಾನರನ್ನು ಬಲಿ ತೆಗೆದುಕೊಂಡಿತ್ತು. ಸುಮಾರು ಅದೇ ಹೊತ್ತಿಗೆ ದೂರದ ಗುಜರಾತಿನ ಮೊಡಾಸ ಎಂಬ ನಗರದಲ್ಲಿ ಇನ್ನೊಂದು ಬಾಂಬ್ ಸ್ಫೋಟಗೊಂಡಿತು. ಮಾಲೆಗಾಂವ್‌ನಂತೆ ಮೊಡಾಸದಲ್ಲೂ ಬಾಂಬ್ ಅನ್ನು ಒಂದು ಮೋಟಾರ್ ಸೈಕಲ್‌ನಲ್ಲಿ ಇಡಲಾಗಿತ್ತು ಮತ್ತು ಅದು ಕೂಡ ಮುಸಲ್ಮಾನರು ರಂಜಾನ್ ಹಬ್ಬ ಆಚರಿಸುತ್ತಿದ್ದ ಪ್ರದೇಶದಲ್ಲೇ ಸ್ಫೋಟಗೊಂಡಿತ್ತು.

ಆಗ ಮಹಾರಾಷ್ಟ್ರದ ಆ್ಯಂಟಿ ಟೆರರಿಸ್ಟ್ ಸ್ಕ್ವಾಡ್‌ನ ಮುಖ್ಯಸ್ಥರಾಗಿದ್ದ ಹೇಮಂತ್ ಕರ್ಕರೆ ಅವರು ಸರಿಯಾದ ತನಿಖೆ ನಡೆಸಿ ಮಾಲೆಗಾಂವ್‌ನಲ್ಲಿ ಸ್ಫೋಟಗೊಂಡಿದ್ದ ಮೋಟಾರ್ ಸೈಕಲ್‌ನ ಚಾಸ್ಸೀಸ್ ನಂಬರ್ ಅನ್ನು ಪತ್ತೆ ಹಚ್ಚಿದರು. ಅದರಿಂದ ಆ ಮೋಟಾರ್ ಸೈಕಲ್‌ನ ಮಾಜಿ ಮಾಲೀಕಿ ಸಾಧ್ವಿ ಪ್ರಜ್ಞಾ ಸಿಂಗ್ ಥಾಕುರ್ ಎಂಬ ನಕಲಿ ಸನ್ಯಾಸಿನಿ ಮತ್ತು ಹಿಂದುತ್ವವಾದಿ ಎಂಬುದು ಗೊತ್ತಾಯಿತಲ್ಲದೆ ಈ ಭಯೋತ್ಪಾದಕ ಕೃತ್ಯಗಳ ಹಿಂದೆ ಆಕೆಯೂ ಸೇರಿದಂತೆ ಇತರೆ ಹಿಂದುತ್ವವಾದಿ ಸಂಘಟನೆಗಳ ಸದಸ್ಯರು ಇದ್ದದ್ದು ಬಯಲಾಯಿತು.

ಆಗ ಕರ್ಕರೆ ಅವರು ಪ್ರಜ್ಞಾ ಸೇರಿದಂತೆ, ಕರ್ನಲ್ ಪುರೋಹಿತ್ ಎಂಬ ದೇಶದ್ರೋಹಿ ಸೈನ್ಯಾಧಿಕಾರಿ, ದಯಾನಂದ ಪಾಂಡೆ ಎಂಬ ಮತ್ತೋರ್ವ ನಕಲಿ ಧಾರ್ಮಿಕ ನಾಯಕನನ್ನೂ ಬಂಧಿಸಿದ್ದರು. ಜೈಲು ಸೇರಿದ ಪಾಂಡೆಯ ಲ್ಯಾಪ್ ಟ್ಯಾಪ್‌ನಲ್ಲಿ 37 ಆಡಿಯೋ ಮತ್ತು ಮೂರು ವಿಡೀಯೋ ರೆಕಾರ್ಡಿಂಗ್‌ಗಳೂ ಸಿಕ್ಕಿದ್ದವು. ಈ ಆರೆಸ್ಸೆಸ್ ಭಯೋತ್ಪಾದಕರು ಜೊತೆಗೂಡಿ ಭಯೋತ್ಪಾದಕ ದಾಳಿಗಳ ಸಂಚನ್ನು ರೂಪಿಸಿದಾಗ ಅವುಗಳನ್ನು ಈ ಪಾಂಡೆ ಗುಟ್ಟಾಗಿ ರೆಕಾರ್ಡ್ ಮಾಡಿಕೊಂಡಿದ್ದ ರೆಕಾರ್ಡಿಂಗ್‌ಗಳಾಗಿದವು. ಅದೇ ರೆಕಾರ್ಡಿಂಗ್‌ನಲ್ಲಿ ಇವರಲ್ಲಿ ಒಬ್ಬ ಸ್ವಾಮಿ ಅಸೀಮಾನಂದನನ್ನು ಹೋಗಿ ಮಾತನಾಡಿದ್ದೂ ಇತ್ತು. ಆಗ ಪೊಲೀಸರು ಅಸೀಮಾನಂದನಿಗಾಗಿ ಹುಡುಕಲಾರಂಭಿಸಿದರು. ಇತ್ತ ಪ್ರಜ್ಞಾ ಜೈಲುಪಾಲಾಗುತ್ತಿದ್ದಂತೆ ಅತ್ತ ಅಸೀಮಾನಂದ ತನ್ನ ಶಬರಿಧಾಮದಿಂದ ನಾಪತ್ತೆಯಾಗಿ ಹರಿದ್ವಾರದಲ್ಲಿ ಕದ್ದುಮುಚ್ಚಿ ಬದುಕಲಾರಂಭಿಸಿದ.

ಪ್ರಜ್ಞಾಳ ವಿಚಾರಣೆ ಸಮಯದಲ್ಲಿ ಆರೆಸ್ಸೆಸ್‌ನ ಪ್ರಚಾರಕರಾಗಿದ್ದ ಸುನೀಲ್ ಜೋಷಿ, ರಾಮಚಂದ್ರ ಕಲ್‌ಸಂಗ್ರ ಮತ್ತು ಸಂದೀಪ್ ಡಾಂಗೆ ಎಂಬುವವರೂ ಭಯೋತ್ಪಾದಕ ಕೃತ್ಯಗಳಲ್ಲಿ ಪ್ರಮುಖ ಪಾತ್ರವಹಿಸಿದ್ದರು ಎಂಬುದು ಹೊರಬಿತ್ತು. ಆದರೆ ಆ ಮೂವರಲ್ಲಿ ಸುನೀಲ್ ಜೋಷಿ 2007ರ ಡಿಸೆಂಬರ್ ತಿಂಗಳಲ್ಲೇ ಸಂಶಯಾಸ್ಪದವಾಗಿ ಕೊಲೆಗೀಡಾಗಿದ್ದರೆ, ಕಲ್‌ಸಂಗ್ರ ಮತ್ತು ಡಾಂಗೆ ತಲೆತಪ್ಪಿಸಿಕೊಂಡರು.

2009ರ ಜುಲೈನಲ್ಲಿ ತಾವು ಹುಡುಕಾಡುತ್ತಿದ್ದ ಐದು ಮೊಬೈಲ್ ಹ್ಯಾಂಡ್ ಸೆಟ್‌ಗಳಲ್ಲಿ ನಾಲ್ಕನ್ನು ರಾಜಸ್ಥಾನದ ಪೊಲೀಸರು ಪತ್ತೆಹಚ್ಚಿದರು. ಅವುಗಳನ್ನು ಮಧ್ಯ ಪ್ರದೇಶದ ಹಳ್ಳಿಗಳಲ್ಲಿ ಕೆಲಸ ಮಾಡುತ್ತಿದ್ದ ನಾಲ್ವರು ಆರೆಸ್ಸೆಸ್ ಸದಸ್ಯರು ಉಪಯೋಗಿಸುತ್ತಿದ್ದರು. ಅವರುಗಳ ಹೆಸರು ಚಂದ್ರಶೇಖರ್ ಲೆವೆ, ವಿಷ್ಣು ಪಟಿದಾರ್, ರವೀಂದ್ರ ಪಟಿದಾರ್ ಮತ್ತು ಸಂತೋಷ್ ಪಟಿದಾರ್. ಮಾತ್ರವಲ್ಲ ಈಗ ತಲೆತಪ್ಪಿಸಿಕೊಂಡಿರುವ ಡಾಂಗೆ ಮತ್ತು ಚಂದ್ರಶೇಖರ್ ಲೆವೆ ಆಪ್ತ ಸ್ನೇಹಿತರಾಗಿದ್ದು ಗೊತ್ತಾಯಿತು. 2000ದಿಂದ 2005ರ ತನಕ ಶಹಜಾಪುರ್ ಜಿಲ್ಲೆಯಲ್ಲಿ ಡಾಂಗೆ ಆರೆಸ್ಸೆಸ್ಸಿನ ಜಿಲ್ಲಾ ಪ್ರಚಾರಕನಾಗಿದ್ದಾಗ ಈ ಲೆವೆ ಆರೆಸ್ಸೆಸ್ಸಿನ ಜಿಲ್ಲಾ ಸಂಪರ್ಕ ಪ್ರಮುಖನಾಗಿದ್ದ.

ರಾಜಸ್ಥಾನದ ಪೊಲೀಸರ ಮುಂದೆ ಹೇಳಿಕೆ ನೀಡಿದ ಆರೆಸ್ಸೆಸ್ಸಿನ ಅರ್ಧ ಡಜನ್ ಸದಸ್ಯರು ಡಾಂಗೆ ತಲೆತಪ್ಪಿಸಿಕೊಳ್ಳುವ ಮುನ್ನ ಲೆವೆಗೆ ಆತ ಈ ಹ್ಯಾಂಡ್ ಸೆಟ್‌ಗಳನ್ನು ನೀಡಿದ್ದ ಮತ್ತು ಒಂದು ಸೆಟ್ ಕೆಟ್ಟಾಗ ಅದನ್ನು ಎಸೆದ ಲೆವೆ ಮಿಕ್ಕವನ್ನು ತಮಗೆ ಹಂಚಿದ್ದ ಎಂದರು. ಲೆವೆ ಮತ್ತು ಪಟಿದಾರ್ ವಿಚಾರಣೆಯ ನಂತರ ಪೊಲೀಸರು ದೇವೇಂದ್ರ ಗುಪ್ತ ಎಂಬಾತನನ್ನು 2010ರ ಏಪ್ರಿಲ್‌ನಲ್ಲಿ ಬಂಧಿಸಿದರು. ಮೂಲತಃ ಅಜ್ಮೇರ್‌ದವನಾದ ಗುಪ್ತ ಕೂಡ ಆರೆಸ್ಸೆಸ್ಸಿನ ಸದಸ್ಯನಾಗಿದ್ದು ಮಧ್ಯಪ್ರದೇಶ ಮತ್ತು ಜಾರ್ಖಂಡ ರಾಜ್ಯಗಳಲ್ಲಿ ಕೆಲಸ ಮಾಡಿದ್ದ. ಈತ ಜಂತಾರಾದಲ್ಲಿ ಆರೆಸ್ಸೆಸ್ಸಿನ ಜಿಲ್ಲಾ ಪ್ರಚಾರಕನಾಗಿದ್ದಾಗ ಜೋಷಿ, ಕಲ್‌ಸಂಗ್ರ ಮತ್ತು ಡಾಂಗೆ ಇವನಿದ್ದಲ್ಲಿಗೆ ಭೇಟಿ ನೀಡಿದ್ದರು. ಆಗ ಈತನೇ ಅವರಿಗೆ ಈ ಸಿಮ್ ಕಾರ್ಡ್‌ಗಳನ್ನು ನಕಲಿ ಹೆಸರಿನಡಿ ಕೊಡಿಸಿದ್ದಾಗಿ ಒಪ್ಪಿಕೊಂಡ.

ಗುಪ್ತಾನ ವಿಚಾರಣೆ ಮುಂದುವರೆದು ಮತ್ತೊಬ್ಬ ಆರೆಸ್ಸೆಸ್ ಸದಸ್ಯನ ಪಾತ್ರವೂ ಪತ್ತೆಯಾಗಿತು. ಆತನ ಹೆಸರು ಭರತ್ ರಿತೇಶ್ವರ್, ಗುಜರಾತಿನ ವಲ್ಸಾಡ್ ನಿವಾಸಿಯಾದ ರಿತೇಶ್ವರ್ ಜೋಷಿಯ ಆಪ್ತನಾಗಿದ್ದ. ರಿತೇಶ್ವರ್ ನ್ಯಾಯಾಧೀಶರೊಬ್ಬರ ಮುಂದೆ ವಿವರವಾದ ಹೇಳಿಕೆಯನ್ನು ನೀಡಿ ಪೊಲೀಸರು ಶಂಕಿಸಿದ್ದೆಲ್ಲ ಸರಿ ಎಂದು ಸಾಬೀತುಪಡಿಸಿದ. ರಿತೇಶ್ವರನಲ್ಲದೆ ಪೊಲೀಸರು ಲೋಕೇಶ್ ಶರ್ಮ ಎಂಬ ಮತ್ತೊಬ್ಬ ಆರೆಸ್ಸೆಸ್ ಸದಸ್ಯನನ್ನು ವಿಚಾರಣೆಗೆ ಗುರಿಪಡಿಸಿದರು. ಶರ್ಮನೂ ಭಯೋತ್ಪಾದಕ ಸಂಚಿನಲ್ಲಿ ತಾನು ಭಾಗಿಯಾಗಿದ್ದಾಗಿ ಒಪ್ಪಿಕೊಂಡ.

ಇದಕ್ಕಿಂತ ಮುಖ್ಯವಾಗಿ, ಈ ಭಯೋತ್ಪಾದಕ ಸಂಚಿನಲ್ಲಿ ಆರೆಸ್ಸೆಸ್ಸಿನ ಕೇಂದ್ರ ಸಮಿತಿಯ ಸದಸ್ಯನಾಗಿರುವ ಇಂದ್ರೇಶ್ ಕುಮಾರನ ಪಾತ್ರವನ್ನು ಮೊದಲ ಬಾರಿಗೆ ಪೊಲೀಸರ ಮುಂದೆ ಬಹಿರಂಗಪಡಿಸಿದ್ದು ಇದೇ ರಿತೇಶ್ವರ ಮತ್ತು ಗುಪ್ತ. ಇಂದ್ರೇಶ್ ಕುಮಾರ್ ಸುನೀಲ್ ಜೋಷಿಗೆ ಗುರು ಮಾತ್ರವಲ್ಲ, ಎಲ್ಲಾ ಭಯೋತ್ಪಾದಕ ದಾಳಿಗಳಿಗೆ ಹಣಕಾಸನ್ನು ಒದಗಿಸಿದ್ದೇ ಕುಮಾರ್ ಎಂದೂ ಅವರಿಬ್ಬರು ಹೇಳಿದರು.

2010ರ ಸೆಪ್ಟೆಂಬರ್‌ನಲ್ಲಿ ಮಧ್ಯ ಪ್ರದೇಶದ ಪೊಲೀಸರು ಶಿವಂ ಧಡ್‌ಕಡ್ ಎಂಬ ಮತ್ತೊಬ್ಬ ಆರೆಸ್ಸೆಸ್ ಸದಸ್ಯನನ್ನು ಬಂಧಿಸಿದರು. ಕೊಲೆ ಕೇಸೊಂದರಲ್ಲಿ ಬೇಕಿದ್ದ ಧಡ್‌ಕಡ್ ಕೂಡ ತಾನೂ ಸುನೀಲ್ ಜೋಷಿಯ ಭಯೋತ್ಪಾದಕ ತಂಡದಲ್ಲಿ ಇದ್ದೆ ಎಂದ. ಅದಕ್ಕಿಂತ ಮುಖ್ಯವಾಗಿ 2005ರ ಅಕ್ಟೋಬರ್ 26ರಂದು ಜೈಪುರದಲ್ಲಿರುವ ಗುಜರಾತಿ ಸಮಾಜ್ ಅತಿಥಿ ಗೃಹದಲ್ಲಿ ಒಂದು ಸಭೆ ನಡೆದು, ಅದರಲ್ಲಿ ಇಂದ್ರೇಶ್ ಕುಮಾರ್ ಅಲ್ಲದೆ, ಪ್ರಜ್ಞಾ, ಕಲ್‌ಸಂಗ್ರ, ಡಾಂಗೆ ಮತ್ತು ಜೋಷಿ ಕೂಡ ಭಾಗವಹಿಸಿದರು; ಅಂದಿನ ಸಭೆಯಲ್ಲಿ ಇಂದ್ರೇಶ್ ಕುಮಾರ್ "ಆರೆಸ್ಸೆಸ್ ಎಂದೂ ನಿಮ್ಮ ಈ ಕೃತ್ಯಗಳನ್ನು ಬಹಿರಂಗವಾಗಿ ಸಮರ್ಥಿಸಿಕೊಳ್ಳುವುದಿಲ್ಲ. ಆದ್ದರಿಂದ ನೀವೆಲ್ಲ ಬೇರೆ ಬೇರೆ ಧಾರ್ಮಿಕ ಸಂಘಟನೆಗಳೊಂದಿಗೆ ಗುರುತಿಸಿಕೊಳ್ಳಿ" ಎಂದು ಆದೇಶಿದ್ದ ಎಂದು ಧಡ್‌ಕಡ್ ಹೇಳಿದ.

ಅದೇ ಸೆಪ್ಟೆಂಬರ್ ತಿಂಗಳಲ್ಲಿ ಸಿಬಿಐ ರಾಜೇಶ್ ಮಿಶ್ರಾ ಎಂಬ ಆರೆಸ್ಸೆಸ್ ಸದಸ್ಯನ ಹೇಳಿಕೆಯನ್ನೂ ದಾಖಲಿಸಿ ಕೊಂಡಿತು. ಮಧ್ಯ ಪ್ರದೇಶದವನಾದ ಮಿಶ್ರಾ ಜೋಷಿಯ ಮಿತ್ರನಲ್ಲದೆ ಪಿತಾಂಪುರದಲ್ಲಿ ಒಂದು ಎರಕಾಗಾರವನ್ನು ಹೊಂದಿದ್ದಾನೆ. ಒಳಗೆ ಕೊರೆದಿದ್ದ 15 ಕಬ್ಬಿಣದ ಪೈಪ್‌ಗಳನ್ನು ತನ್ನ ಎರಕಾಗಾರದಲ್ಲಿ ತಯಾರಿಸಿ ಅವುಗಳನ್ನು ಜೋಷಿಗೆ ಕೊಟ್ಟಿದ್ದಾಗಿ ಪೊಲೀಸರ ಮುಂದೆ ಈ ಮಿಶ್ರ ಒಪ್ಪಿಕೊಂಡ. ಈ ಪೈಪುಗಳಲ್ಲಿ ಹಲವನ್ನು ಭೋಪಾಲದಲ್ಲಿ ಉಪ ಯೋಗಿಸಲು ಜೋಷಿ ತಂಡ ಪ್ರಯತ್ನಿಸಿತ್ತು. ಅಷ್ಟೇ ಅಲ್ಲ, ಅವುಗಳನ್ನೇ ಮೆಕ್ಕಾ ಮಸೀದಿ ಮತ್ತು ಅಜ್ಮೇರ್‌ನಲ್ಲೂ ಸ್ಫೋಟಿಸಿತ್ತು.


ಎಲ್ಲರ ನಂತರ ಕಳೆದ ಡಿಸೆಂಬರ್‌ನಲ್ಲಿ ಪೊಲೀಸರ ಕೈಗೆ ಸಿಕ್ಕವನೇ ಸ್ವಾಮಿ ಅಸೀಮಾನಂದ. ಈತ ಈಗ ತಾನು ಆರೆಸ್ಸೆಸ್ಸಿನ ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿ ಆಗಿದ್ದನ್ನು ಮತ್ತು ಅದರಲ್ಲಿ ಇತರರ ಪಾತ್ರವನ್ನೂ ನ್ಯಾಯಾಧೀಶರ ಮುಂದೆ ನೀಡಿರುವ ತಪ್ಪೊಪ್ಪಿಗೆಯಲ್ಲಿ ಬಟಾ ಬಯಲುಗೊಳಿಸಿದ್ದಾನೆ.

ಬರುವ ದಿನಗಳಲ್ಲಿ ಅಸೀಮಾನಂದನ ಹೇಳಿಕೆ ಮತ್ತು ಸಿಬಿಐ ಪೊಲೀಸರು ಕಲೆ ಹಾಕಿರುವ ಮಾಹಿತಿಗಳ ಬಗ್ಗೆ ನ್ಯಾಯಾಲಯ ಯಾವ ತೀರ್ಪು ನೀಡಲಿದೆ ಎಂಬುದನ್ನು ಕಾದುನೋಡಬೇಕಿದೆ.

ಆದರೆ ಈಗಾಗಲೇ ಒಂದಂತೂ ಎಲ್ಲರಿಗೆ ಸ್ಪಷ್ಟವಾಗಿದೆ.

ಅದೇನೆಂದರೆ

ಆರೆಸ್ಸೆಸ್ ಈ ದೇಶದಲ್ಲಿ ಇರುವ ಭಯೋತ್ಪಾದಕ ಸಂಘಟನೆಗಳಲ್ಲಿ ಅತಿ ಬೃಹತ್ ಆದದ್ದು ಮತ್ತು ಆ ಕಾರಣಕ್ಕೇ ಅತಿ ಅನಾಹುತಕಾರಿಯಾದದ್ದು ಎಂಬುದು..... ●



ಆರೆಸ್ಸೆಸ್ ಭಯೋತ್ಪಾದಕರು ಬಳಸಿದ ಸಿಮ್‌ಕಾರ್ಡ್, ಫೋನ್, ಲೋಹದ ಶೆಲ್, ಪವರ್ ಸರ್ಕ್ಯೂಟ್, ಶೆಲ್ ಬಾಕ್ಸ್ ಮತ್ತು ಬಾಂಬ್

ಮಾನಗೆಟ್ಟ ಸಂಪುಟ ಜನವರಿ 27 ಕ್ಕೆ ಉರುಳು!

ಯಡ್ಡಿಯ ಮುಖ್ಯಮಂತ್ರಿಗಿರಿಯ ಪತನದ ಕ್ಷಣಗಣನೆ ಶುರುವಾಗುವುದು ಗಣರಾಜ್ಯೋತ್ಸವದ ಮರುದಿನಕ್ಕೆ ಅಂದರೆ ಜನವರಿ 27ಕ್ಕೆ!

ಈ ಬಾರಿ ಯಡ್ಡಿಯ ಪದಚ್ಯುತಿಯಾಗುತ್ತಾ? ಅಥವಾ ಸರ್ಕಾರವೇ ಉರುಳುತ್ತಾ? ಹೈಕಮಾಂಡ್ ಅಂತಿಮವಾಗಿ ತಲೆದಂಡ ವಿಧಿಸುತ್ತಾ? ಖುದ್ದು ಯಡ್ಡಿಗೂ ಗೊತ್ತಿಲ್ಲ ಬಿಜೆಪಿಯ ಅಧಿಪತಿಗಳಿಗೂ ದಿಕ್ಕು ತೋಚುತ್ತಿಲ್ಲ. ಜಸ್ಟೀಸ್ ಲಾಯೆರ್ಸ್ ಫೋರಮ್‌ನ ವಕೀಲರಾದ ಬಾಲರಾಜ್ ಮತ್ತು ಸಿರಾಜಿನ್ ಭಾಷಾ ಕೊಟ್ಟ 1800 ಪುಟಗಳ ದಾಖಲೆಗಳೆಲ್ಲ ರಾಜ್ಯಪಾಲ ಹಂಸರಾಜ್ ಭಾರದ್ವಾಜರ ಸುಪರ್ದಿಯಲ್ಲಿ ಭದ್ರವಾಗಿದೆ. ರಾಜ್ಯಪಾಲರ ಅಂಕಿತಕ್ಕಿನ್ನು ಐದೇ ದಿನ ಬಾಕಿಯಿದೆ. ಅಂಕಿತ ಬಿತ್ತೆಂದರೆ ಮುಖ್ಯಮಂತ್ರಿಯ ಪಾಡು ನಿಜಕ್ಕೂ ನಾಯಿಪಾಡೇ


ದಿವಾಕರ್


ಜಗದೀಶ್


ಸಿರ್ಜನಿ ಬಾಷಾ

ಮುಖ್ಯಮಂತ್ರಿ ಯಡ್ಡಿ ಮತ್ತು ಗೃಹ ಸಚಿವ ಅಶೋಕ ನಡೆಸಿದ ಭೂಹಗರಣಗಳ ವಿರುದ್ಧ ನ್ಯಾಯಾಲಯದಲ್ಲಿ ದೂರು ದಾಖಲಿಸಲು ರಾಜ್ಯಪಾಲರ ಅನುಮತಿಯೊಂದೇ ಬಾಕಿಯಿದೆ, ಆದರೆ ಸಮಸ್ಯೆಯಿರುವುದು ರಾಜ್ಯಪಾಲರು ಕೊಡುವ ಅನುಮತಿಯಲ್ಲಾಗಲಿ, ಕೋರ್ಟ್ ಹೊರಡಿಸುವ ಸಮನ್ಸ್‌ನಲ್ಲಾಗಲಿ ಅಲ್ಲ, ಬಿಜೆಪಿಯಲ್ಲೇ ಇರುವ ಯಡ್ಡಿ ವಿರೋಧಿಗಳು ನಡೆಸಲಿರುವ ಕಾರ್ಯಾಚರಣೆಯ ಆಳ ಮತ್ತು ವಿಸ್ತಾರ ಎಂಥಾದ್ದೆಂಬುದರಲ್ಲಿ!

ಯಡ್ಡಿಗೆ ತಲೆನೋವಾಗಿರುವುದೇ ಇದು. ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಈ ಹಿಂದೆ ಅನೇಕ ಮುಖ್ಯಮಂತ್ರಿಗಳ ವಿರುದ್ಧ ದೂರು ದಾಖಲಿಸಲು ರಾಜ್ಯಪಾಲರು ಅನುಮತಿ ಕೊಟ್ಟಿದೆ. ರಾಮಾಜೋಯಿಸ್ ಬಿಹಾರದ ರಾಜ್ಯಪಾಲರಾಗಿದ್ದಾಗ ಮುಖ್ಯಮಂತ್ರಿ ಲಾಲೂ ಯಾದವ್ ವಿರುದ್ಧ ಕೇಸು ದಾಖಲಿಸಲು ಅನುಮತಿಸಿದ್ದುಂಟು. ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾ ಕೂಡ ಅಧಿಕಾರದಲ್ಲಿದ್ದೂ ಕೇಸನ್ನು ಎದುರಿಸಿದ್ದಾರೆ. ಉತ್ತರಪ್ರದೇಶದ ಮುಖ್ಯಮಂತ್ರಿ ಮಾಯಾವತಿ, ಪಂಜಾಬ್‌ನ ಸಿಎಂ ಪ್ರಕಾಶ್‌ಸಿಂಗ್ ಬಾದಲ್; ಇತ್ಯಾದಿ ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳ ವಿರುದ್ಧ ಅಲ್ಲಿನ ರಾಜ್ಯಪಾಲರು ಮೊಕದ್ದಮೆಗೆ ಅನುಮತಿಸಿದ ನಿದರ್ಶನಗಳಿವೆ ನಿಜ.

ಮುಖ್ಯಮಂತ್ರಿಯ ವಿರುದ್ಧ ಕೋರ್ಟಿನಲ್ಲಿ ಕೇಸು ಹಾಕುವುದು ಕಷ್ಟದ್ದಾಗಲಿ, ಹೊಸತಾಗಲಿ ಅಲ್ಲ. ಯಾರು ಬೇಕಾದರು ಮುಖ್ಯಮಂತ್ರಿಯ ವಿರುದ್ಧ ಕೇಸು ದಾಖಲಿಸಬಹುದು. ಆದರೆ ಚಾರ್ಜ್‌ಶೀಟ್‌ನಲ್ಲಿ ಮುಖ್ಯಮಂತ್ರಿಯ ಹೆಸರು ಬರಬೇಕೆಂದರೆ ಅದಕ್ಕೆ ರಾಜ್ಯಪಾಲರ ಅಂಕಿತ ಬೇಕು. ಈಗ ಜಸ್ಟೀಸ್ ಲಾಯರ್ಸ್ ಫೋರಮ್ ಇನ್ನು ಒಂದು ಹೆಜ್ಜೆ ಮುಂದಿಟ್ಟು ಕೇಸು ದಾಖಲಿಸುವುದಕ್ಕೆ ಅನುಮತಿ ಕೋರಿದೆ. ಒಮ್ಮೆ ಕೇಸು ದಾಖಲಿಸಲು ರಾಜ್ಯಪಾಲರು ಅಂಕಿತ ಕೊಟ್ಟರೆಂದರೆ ಸಹಜವಾಗೇ ಚಾರ್ಜ್‌ಶೀಟ್ ಸಲ್ಲಿಸಲು ಅನುಮತಿ ಬೇಕಾಗುವುದಿಲ್ಲ.

ಇಂಥದೊಂದು ಮುಂಜಾಗ್ರತೆ ವಹಿಸಿಯೇ ಶಿವಮೊಗ್ಗದ ವಕೀಲರಾದ ಬಾಲರಾಜ್ ಮತ್ತು ಸಿರಾಜಿನ್ ಭಾಷಾ ರಾಜ್ಯಪಾಲರ ಅಂಗಳಕ್ಕೆ ಚೆಂಡೆಸೆದಿದ್ದಾರೆ. ಈ ರೀತಿ ಮನವಿ ಸಲ್ಲಿಸುವುದಕ್ಕೂ ಮುನ್ನ ವಕೀಲರಿಬ್ಬರೂ ಎಷ್ಟು ಉಪಾಯವಾಗಿ ಸಾಕ್ಷ್ಯಾಧಾರಗಳನ್ನು ಕಲೆಹಾಕಿದ್ದಾರೆಂದರೆ ಮಾಹಿತಿ ಹಕ್ಕು ಕಾಯ್ದೆ ಬಳಸಿ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಸ್ವತಃ ಮುಖ್ಯಮಂತ್ರಿಯೇ ಸಹಿ ಹಾಕಿದ ಮೂವತ್ತಕ್ಕೂ ಅಧಿಕ ಭೂಹಗರಣದ ದಾಖಲೆಗಳನ್ನು ವಕೀಲದ್ವಯರು ರಾಜ್ಯಪಾಲರ ಕೈಗಿಟ್ಟ ನಂತರವೇ ಭಾರದ್ವಾಜ್‌ಗೆ ಪ್ರಕರಣದ ಗಂಭೀರತೆ ಅರ್ಥವಾಗಿದ್ದು. 1800 ಪುಟಗಳ ಅಷ್ಟೂ ದಾಖಲೆಯನ್ನು ಪರಿಶೀಲಿಸಿದ ನಂತರವೇ ರಾಜ್ಯಪಾಲರು ಮುಖ್ಯ ಕಾರ್ಯದರ್ಶಿಯನ್ನು ಕರೆದು ಪ್ರಕರಣದ ಅಷ್ಟೂ ಮೂಲ ಫೈಲುಗಳನ್ನು ತಂದೊಪ್ಪಿಸುವಂತೆ ಆದೇಶಿಸಿದ್ದು.

ಇದು ಗೊತ್ತಾಗಿದ್ದೇ ತಡ ಯಡ್ಡಿ ಮೊರೆ ಹೋಗಿದ್ದು ಬಿಜೆಪಿ ವರಿಷ್ಠ ಅರುಣ್ ಜೈಟ್ಲಿಗೆ. ಹೇಗೆ ಭಾರದ್ವಾಜ್ ಕೇಂದ್ರದ ಕಾನೂನು ಮಂತ್ರಿಯಾಗಿದ್ದರೋ ಅದೇ ರೀತಿ ಜೈಟ್ಲಿ ಕೂಡ ಬಿಜೆಪಿ ಆಳ್ವಿಕೆಯಲ್ಲಿ ಕಾನೂನು ಮಂತ್ರಿಯಾಗಿದ್ದವರು. ಜನವರಿ 5ರಂದು ಬೆಂಗಳೂರಿಗೆ ಬಂದು ನೇರವಾಗಿ ರಾಜ್ಯಪಾಲರನ್ನು ಕಂಡು ಮರಮ್ಮತ್ತು ಮಾಡಲು ಏನೆಲ್ಲಾ ವರಸೆ ಬಳಸಿದರೂ ಪ್ರಯೋಜನವಾಗಿಲ್ಲ ವಕೀಲರು ಕೊಟ್ಟಿದ್ದ ಅಷ್ಟೂ ದಾಖಲೆಗಳನ್ನು ಜೈಟ್ಲಿಯ ಮುಂದಿಟ್ಟ ಭಾರದ್ವಾಜ್ ಇಷ್ಟೆಲ್ಲಾ ಸಾಕ್ಷ್ಯಾಧಾರಗಳನ್ನು ಕಣ್ಣಾರೆ ನೋಡಿದ ಮೇಲೂ ಬಾಯಿ ಮುಚ್ಚಿಕೊಂಡು ಇರಬೇಕಾ? ಎಂದು ಮುಖ ಕಿವುಚಿಬಿಟ್ಟರು.


ಅಲ್ಲಿಗೆ ಜೈಟ್ಲಿಯ ಬಾಯಿಯೇ ಬಂದಾಗಿತ್ತು. ಹಾಗೇ ಗವರ್ನರ್ ಮನೆಯಿಂದ ಹೊರಬಿದ್ದು ಬಿಜೆಪಿ ಶಾಸಕಾಂಗ ಪಕ್ಷದ ಸಭೆಗೆ ಬಂದ ಜೈಟ್ಲಿಗೆ ಯಡ್ಡಿ ವಿರುದ್ಧ ಗಣಿರೆಡ್ಡಿ ಗ್ಯಾಂಗ್ ನಿಂದ ಬೈಗುಳದ ಸುರಿಮಳೆಯೇ ಎದುರಾಯ್ತು, ನಮ್ಮ ವಿರುದ್ಧ ಕಾಂಗ್ರೆಸ್ ನವರಿಗೆ ದಾಖಲೆಗಳನ್ನು ತೆಗೆದುಕೊಟ್ಟಿದ್ದೇ ಸೀಯೆಮ್ಮು ಈಗ ಅವರ ವಿರುದ್ಧಾನೇ ಕೇಸು ಬೀಳ್ತಾ ಇದೆ. ನಾವ್ಯಾಕೆ ಸುಮ್ಮನಿರಬೇಕು? ಮುಖ್ಯಮಂತ್ರಿಯ ಮೇಲೇ ಕೇಸು ಬಿತ್ತೆಂದರೆ ಸಿಎಂ ರಾಜೀನಾಮೆ ಕೊಡಲೇಬೇಕಲ್ಲವೆ?

ಇದು ಬಿಜೆಪಿ ಶಾಸಕಾಂಗದ ಸಭೆಯಲ್ಲಿ ಗಣಿರೆಡ್ಡಿ ಗ್ಯಾಂಗಿನ ಪೌರುಷವಾಗಿತ್ತು, ಮತ್ತೊಂದೆಡೆ ರಾಜ್ಯಪಾಲರು ಕೇಳಿದ ಮೂಲ ಫೈಲುಗಳನ್ನೆಲ್ಲ ತಂದೊಪ್ಪಿಸುವಂತೆ ಮುಖ್ಯ ಕಾರ್ಯದರ್ಶಿಯವರು ಆದೇಶ ಹೊರಬಿದ್ದಿತ್ತು, ಬಿಡಿಎ, ಕೆಐಎಡಿಬಿ, ನಗರಾಭಿವೃದ್ಧಿ ಇಲಾಖೆ ಸೇರಿದಂತೆ ಬಹುತೇಕ ಫೈಲುಗಳನ್ನೆಲ್ಲ ರಾಜಭವನಕ್ಕೆ ಸಾಗಿಸಿದ್ದರೂ ಕೂಡ ಶೇ.30ರಷ್ಟು ದಾಖಲೆಗಳನ್ನು ಯಡ್ಡಿ ತಮ್ಮ ಬಳಿಯೇ ಜೋಪಾನವಾಗಿಟ್ಟು ಕೊಂಡಿದ್ದರು. ಅವೆಲ್ಲವೂ ಕದ್ದ ತಪ್ಪನ್ನು ಸಾರಿ ಹೇಳುವ ದಾಖಲೆಗಳೆ.

ಜನವರಿ 30ರ ಡೆಡ್‌ಲೈನನ್ನು ಬೇರೆ ರಾಜ್ಯಪಾಲರು ವಿಧಿಸಿದ್ದದರಲ್ಲ, ಶೇ 70ರಷ್ಟು ದಾಖಲೆಗಳನ್ನಷ್ಟೇ ಕೊಟ್ಟು ಉಳಿಕೆ ಫೈಲುಗಳನ್ನೆಲ್ಲ ರಾಜಭವನಕ್ಕೊಪ್ಪಿಸದೇ ಅಡಗಿಸಿಟ್ಟಿದ್ದ ಯಡ್ಡಿಗೆ ಉಳಿದ ಏಕೈಕ ದಾರಿಯೆಂದರೆ ರಾಜ್ಯಪಾಲರ ವಿರುದ್ಧವೇ ಹೈಕಮಾಂಡನ್ನು ಛೂ ಬಿಡುವುದು. ಹಾಗಂತ ಹೈಕಮಾಂಡಾದರೂ ಏನಂಥ ರಾಜ್ಯಪಾಲರನ್ನು ದೂಷಿಸಲು ಸಾಧ್ಯ?

ಕೇಳಿದ ದಾಖಲೆಗಳನ್ನು ಒಪ್ಪಿಸದ ಯಡ್ಡಿಯನ್ನು ಯಾರು ತಾನೇ ಯಾವ ಕಾರಣಕೊಟ್ಟು ಸಮರ್ಥಿಸಲು ಸಾಧ್ಯ? ಈ ಮಧ್ಯೆ ಕೇಂದ್ರ ಕಾನೂನು ಸಚಿವ ಮೊಯ್ಲಿ ಒಂದಲ್ಲ ಎರಡು ಬಾರಿ ಬೆಂಗಳೂರಿಗೆ ಬಂದು ರಾಜ್ಯಪಾಲರ ಜೊತೆ ಮಾತಾಡಿ ಹೋದರು. ಹಿಂದೆ ಅತೃಪ್ತ ಶಾಸಕರು ಬಂಡೆದ್ದಾಗ ಕೇಂದ್ರ ಸರ್ಕಾರ ಹಿಂಜರಿದಂತೆ ಈಗ ಮಾಡುವುದಿಲ್ಲ ಎಂದೇ ಮೊಯ್ಲಿ ರಾಜ್ಯಪಾಲರಿಗೆ ಭರವಸೆ ನೀಡಿದ್ದರು. ಯಡ್ಡಿ ವಿರುದ್ಧ ಕೇಸು ಹಾಕಲು ನಿರ್ದಾಕ್ಷಿಣ್ಯ ಕ್ರಮ ಜರುಗಿಸುವಂತೆ ಕೇಂದ್ರದಿಂದ ಗ್ರೀನ್‌ಸಿಗ್ನಲ್ ಕೂಡ ಸಿಕ್ಕಿತ್ತು, ಇದೆಲ್ಲದರ ವಾಸನೆ ಹಿಡಿದೇ ಜನವರಿ 18ರಂದು ದೆಹಲಿಗೆ ದೌಡಾಯಿಸಿದ ಯಡ್ಡಿ ಖ್ಯಾತ ವಕೀಲ ರಾಂಜೇಠ್ಮಲಾನಿಯ ಜೊತೆ ಒಂದೂವರೆ ಗಂಟೆ ಕಾಲ ಚರ್ಚಿಸಿದ್ದಾರೆ. ಜೇಠ್ಮಲಾನಿ ಅದೇನೆಂದು ಸಲಹೆ ಕೊಟ್ಟರೋ ಗೊತ್ತಿಲ್ಲ.


ಅರುಣ್ ಜೇಟ್ಲಿ



ಭಾರದ್ವಾಜ್

ಆನಂತರ ಸೀದಾ ಅರುಣ್ ಜೈಟ್ಲಿಯ ಮನೆ ಹೊಕ್ಕು ಹೇಗಾದರೂ ಮಾಡಿ ತನ್ನ ತಲೆ ಕಾಯುವಂತೆ ಯಡ್ಡಿ ಅಂಗಲಾಚಿದ್ದಾರೆ. ದಾಖಲೆ ಸಮೇತ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದಿರುವಾಗ 'ವಾಟ್ ಕೆನ್ ಐ ಡೂ ಮಿಸ್ಟರ್ ಯಡ್ಯೂರಪ್ಪಾ....?' 'ಎಂದೇ ಜೈಟ್ಲಿ ಕೈಚೆಲ್ಲಿದರಂತೆ ಜೈಟ್ಲಿಯ ಇಂಥ ಅನಿರೀಕ್ಷಿತ ವರ್ತನೆಯಿಂದ ಇನ್ನಷ್ಟು ಹತಾಶರಾದ ಯಡ್ಡಿ 'ಓಕೆ ನನ್ನ ರಾಜೀನಾಮೆಯೇ ಎಲ್ಲಕ್ಕೂ ಪರಿಹಾರ ಅನ್ನೋದಾದ್ರೆ ಒಂದು ಷರತ್ತಿನ ಮೇಲೆ ನಾನು ರಾಜೀನಾಮೆ ಕೊಡ್ತೀನಿ. ನನ್ನ ಮಗ ರಾಘವೇಂದ್ರನ್ನ ಮುಖ್ಯಮಂತ್ರಿ ಮಾಡೋದಾದ್ರೆ ಮಾತ್ರ ನಾನು ರಿಜೈನ್ ಮಾಡಲು ಸಿದ್ಧ....! ಎಂದುಬಿಟ್ಟರು ಯಡ್ಡಿ.

ಅದು ಎಷ್ಟೊಂದು ಬಾಲಿಶ ಮತ್ತು ಮೂರ್ಖತನದ ಪರಮಾವಧಿಯಾಗಿತ್ತೆಂದರೆ, ಕೇಳಿದ್ದೇ ತಡ, ಜೈಟ್ಲಿ 'ಮಿಸ್ಟರ್ ಯಡ್ಯೂರಪ್ಪ ಡೋಂಟ್ ಟಾಕ್ ಲೈಕ್ ಎ ಚೈಲ್ಡ್' ಎಂದರಂತೆ. ಅಲ್ಲಿಗೆ ಯಡ್ಡಿಯ ಜಂಘಾಬಲವೇ ಉಡುಗಿಹೋಗಿತ್ತು,

'ಬರುವ ಮುನ್ನ ಜೈಟ್ಲಿಗೆ 'ಹಾಗಾದ್ರೆ ನಾನೂ ಒಂದು ಕೈ ನೋಡೇಬಿಡ್ತೀನಿ. ಅಸೆಂಬ್ಲಿಯನ್ನೇ ಡಿಸಾಲ್ವ್ ಮಾಡ್ತೀನಿ...' ಎಂದೆಲ್ಲಾ ಗೊಣಗುತ್ತಾ ಹೊರಬಂದ ಯಡ್ಡಿಗೆ ಸ್ಪಷ್ಟವಾಗೇ ಜೈಟ್ಲಿ ಹೇಳಿದ್ದು **How to save our Government!**

ತನ್ನ ಪಾಲಿಗೆ ಹೈಕಮಾಂಡ್‌ನ ಬಾಗಿಲುಗಳು ಮುಚ್ಚಿವೆಯೆಂಬದು ಯಡ್ಡಿಗಾಗಲೇ ಸ್ಪಷ್ಟವಾಗಿತ್ತು, ಉಳಿದ ದಾರಿಯೆಂದರೆ ಇಡೀ ಸರ್ಕಾರವನ್ನೇ ರಾಜ್ಯಪಾಲರ ವಿರುದ್ಧ ಎತ್ತಿಕಟ್ಟುವುದು ಮತ್ತು ರಾಜಭವನದ ವಿರುದ್ಧವೇ



ಬ್ಲ್ಯಾಕ್‌ಮೇಲ್ ನಡೆಸುವುದು. ಜನವರಿ 30ರ ರಾಜ್ಯಪಾಲರ ಗಡುವು ಮುಗಿಯುತ್ತಿದ್ದಂತೆ ಯಡ್ಡಿಗೆ ಒಂದು ಸಂಗತಿ ಸ್ಪಷ್ಟವಾಗಿತ್ತು, ಅದು ಜನವರಿ 27ರ ಮರಣ ಶಾಸನ. ಕೇಸು ದಾಖಲಿಸಲು 'ಜಸ್ಟೀಸ್ ಲಾಯರ್ಸ್ ಫೋರಮ್'ಗೆ ರಾಜ್ಯಪಾಲರೇನಾದರೂ ಜನವರಿ 27ಕ್ಕೆ ಅಂಕಿತ ನೀಡಿದರೆಂದರೆ ಬಿಜೆಪಿಯಲ್ಲಿರುವ ಯಡ್ಡಿ ವಿರೋಧಿಗಳೇ ಮೊದಲು ತಿರುಗಿಬೀಳುತ್ತಾರೆ.

ಮಾತುಮಾತಿಗೆ ನಡುಬೀದಿಯಲ್ಲಿ ನಿಂತು ಸರ್ಕಾರವನ್ನು ಸಮರ್ಥಿಸಿಕೊಳ್ಳುತ್ತಿದ್ದ ಸಿ.ಟಿ.ರವಿ ಕಳೆದ ಮೂರು ತಿಂಗಳಿಂದೀಚೆಗೆ ಬಾಯನ್ನೇ ಬಿಡುತ್ತಿಲ್ಲ. ಗಾಲಿ ಜನಾರ್ದನ ರೆಡ್ಡಿಯಂತೂ ಜನವರಿ 18ರಂದು ವಿಧಾನಸಭೆಯ ಕಾರಿಡಾರ್‌ನಲ್ಲೇ ಯಡ್ಡಿ ಮೇಲೆ ಏರಿ ಹೋಗಿದ್ದಾರೆ. ಮಂತ್ರಿ ಸುರೇಶ್‌ಕುಮಾರ್‌ಗೆ ಯಡ್ಡಿಯ ದುಡುಕು ಬುದ್ಧಿಯನ್ನು ಸಂಭಾಳಿಸುವ ವ್ಯವಧಾನವೇ ಉಳಿದಂತಿಲ್ಲ, ಆಚಾರ್ಯ ಕಾಗೇರಿ, ಶೋಭಾ, ಸೋಮಣ್ಣ ಯಾರೂ ಬಹಿರಂಗವಾಗಿ ಯಡ್ಡಿಯನ್ನು ಸಮರ್ಥಿಸಿಕೊಳ್ಳುವಷ್ಟು ಧೈರ್ಯವಹಿಸುತ್ತಿಲ್ಲ.

ಇಂಥಾ ಸ್ಥಿತಿಯಲ್ಲಿ ಯಡ್ಡಿಯ ಪರ ವಕಾಲತ್ತು ವಹಿಸಿ ಬೊಬ್ಬೆ ಹೊಡೆಯುತ್ತಿರುವವರು ಬಾಯಿಬಡುಕ ಪುಟ್ಟಸ್ವಾಮಿ ಮತ್ತು ಲಾಯರ್ ದಿವಾಕರ್ ಮಾತ್ರ. ತೀರ ಇತ್ತೀಚೆಗೆ ವಕೀಲ ದಿವಾಕರ್‌ಗೂ ಸಿಎಂ ಸೋಡಚೀಟಿ ಕೊಟ್ಟಾಗಿದೆ. ಕಾರಣ ಪತ್ರಕರ್ತನೊಬ್ಬನೊಂದಿಗೆ ದಿವಾಕರ್‌ಗಿದ್ದ ನೆಂಟಸ್ತಿಕೆ.

ದಿವಾಕರ್ ಸಿಎಂ ವಿರುದ್ಧ ಈ ರೀತಿ ಐದಾರು ಸುದ್ದಿ ಬರೆಸಿದ್ದು, ಕರಂದ್ಲಾಜೆ ವಿರುದ್ಧ ಆಗಾಗ ಪುಕಾರೆಬ್ಬಿಸುವುದು ಇತ್ಯಾದಿಯೆಲ್ಲ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದು ಫೋನ್ ಟ್ಯಾಪಿಂಗ್ ಮೂಲಕವಂತೆ.

ಬಹು ಹಿಂದೆಯೇ ಆರ್.ಪಿ.ಜಗದೀಶ್, ದಿವಾಕರ್ ಮತ್ತು ಅಮೃತಾಂಜನಿ ಲೆಹರ್‌ಸಿಂಗ್‌ನನ್ನು ಹೊರಗಟ್ಟುವಂತೆ ಯಡ್ಡಿ ಆರೆಸ್ಸೆಸ್ ತಾಕೀತು ಮಾಡಿತ್ತು. ಆರೆಸ್ಸೆಸ್ ನೀಡಿದ ಈ ಸಲಹೆಯನ್ನು ಸೌಜನ್ಯಕ್ಕೂ ಪಾಲಿಸದೇ ಅಸಡ್ಡೆ ಮಾಡಿದ ಯಡ್ಡಿ ವಿರುದ್ಧ ಸಹಜವಾಗೇ ಆರೆಸ್ಸೆಸ್ ತಿರುಗಿಬಿದ್ದಿದೆ. ಅದು ಕೇವಲ ಈ ಮೂವರು ಕಾರಣಕ್ಕಷ್ಟೇ ಅಲ್ಲ, ಸದ್ಯ ಕರ್ನಾಟಕದ ಆರೆಸ್ಸೆಸ್ ವಲಯದಲ್ಲಿ ಮೈ.ಚ.ಜಯದೇವರನ್ನು ಕಂಡರೆ ಯಾರಿಗೂ ಇಷ್ಟವಿಲ್ಲ, ಜಾತಿಯ ಕಾರಣಕ್ಕೆ ಯಡ್ಡಿಯನ್ನು ಬೆಂಬಲಿಸಿಕೊಂಡೇ ಬಂದ ಮೈ.ಚ.ಜಯದೇವರನ್ನು ಮೂಲೆಗುಂಪು ಮಾಡಿದ್ದು ಕಲ್ಲಡ್ಕ ಪ್ರಭಾಕರ ಭಟ್ಟ. ಸದ್ಯ ಇಡೀ ದಕ್ಷಿಣ ಪ್ರಾಂತದ ಉಸ್ತುವಾರಿ ಹೊತ್ತಿರುವ ಕಲ್ಲಡ್ಕ ಭಟ್ಟ ಹೇಳಿದ ಯಾವ ಕೆಲಸವನ್ನೂ ಯಡ್ಡಿ ಮಾಡಿಕೊಡಲಿಲ್ಲ, ನೇಮಕಾತಿ ವಿಷಯದಲ್ಲಿ ಆರೆಸ್ಸೆಸ್ ನೀಡಿದ ಬಹುತೇಕ ಸಲಹೆಗಳಿಗೂ ಯಡ್ಡಿ ಸೊಪ್ಪು ಹಾಕಲಿಲ್ಲ. ಈ ಎಲ್ಲಾ ಸಿಟ್ಟನ್ನು ಒಂದೇ ಬಾರಿ ತೀರಿಸಿಕೊಳ್ಳಲು ಭಟ್ಟರ ಜೊತೆ ಆರೆಸ್ಸೆಸ್ ಚೆಡ್ಡಿಗಳಾದ ಮಂಗೇಶ ಭೇಂಡೆ, ಕೃನರಹರಿ, ರಾಮಣ್ಣ, ಹೊಸಬಾಳೆ ಇತ್ಯಾದಿಗಳೆಲ್ಲ ಕತ್ತಿ ಮಸೆಯುತ್ತಿದ್ದಾರೆ.

ಹಾಗೇನಾದರೂ ಕೇಸು ದಾಖಲಿಸಲು ರಾಜ್ಯಪಾಲರು ಅಂಕಿತ ಹಾಕಿದ್ದೇ ಆದ ಪಕ್ಷದಲ್ಲಿ ಸಹಜವಾಗೇ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆಯ ಕೂಗು ಮೊಳಗುತ್ತದೆ. ರೆಡ್ಡಿ ಬ್ರದರ್ಸ್ ಇದರ ನಾಯಕತ್ವ ವಹಿಸುವುದಂತೂ ಶತಸಿದ್ಧ ತಮ್ಮ ವಿರುದ್ಧ ಒಳಗೊಳಗೇ ಕತ್ತಿ ಮಸೆಯುತ್ತಿರುವ ಯಡ್ಡಿಯನ್ನು ಬಲಿಹಾಕಲು ರೆಡ್ಡಿಗಳು ಕಾತರಿಸುತ್ತಿದ್ದಾರೆ.

ತನ್ನ ನಾಯಕತ್ವ ಬದಲಾವಣೆಗೇನಾದರೂ ಒತ್ತಡ ಬಂತೆಂದರೆ ವಿಧಾನಸಭೆಯನ್ನೇ ವಿಸರ್ಜಿಸಲು ಯಡ್ಡಿ ನಿರ್ಣಯ ಮಂಡಿಸಹೊರಟರೆ ಸಂಪುಟದಲ್ಲೇ ವಿರೋಧ ಹುಟ್ಟಿಹಾಕಲು ಆರೆಸ್ಸೆಸ್ ನಿಷ್ಠರು ಸಜ್ಜಾಗಿದ್ದಾರೆ. ಕ್ಯಾಬಿನೆಟ್‌ನಲ್ಲಿ **dissolution** ಮಂಡನೆಯಾಗಲು ಸಂಪುಟದ ಅರ್ಧದಷ್ಟಾದರೂ ಸಚಿವರ ಸಮ್ಮತಿಬೇಕು. ಯಾರಿಗೂ ಚುನಾವಣೆ ಬೇಕಿಲ್ಲ, ಜಿಲ್ಲಾ ಪಂಚಾಯ್ತಿಗಾಗಿ ಈಗಾಗಲೇ ಕೋಟಿಗಟ್ಟಲೆ ಸುರಿದು ಹೈರಾಣಾಗಿರುವಾಗ ಮತ್ತೆ ಚುನಾವಣೆ ಎದುರಿಸಲು ಯಾರು ತಾನೇ ಒಪ್ಪಲು ಸಾಧ್ಯ? ಈ ನಿಟ್ಟಿನಲ್ಲಿ ಯಡ್ಡಿ ಪರ ಲಕ್ಷ್ಮಣ ಸವದಿ, ಬೊಮ್ಮಾಯಿ, ಶೋಭಾ ಕರಂದ್ಲಾಜೆ ಮತ್ತು ಸೋಮಣ್ಣ ಬಿಟ್ಟರೆ ಬೇರೆ ಯಾರೂ ನಿಲ್ಲುವ ಸ್ಥಿತಿಯಲ್ಲಿಲ್ಲ. ಉದಾಸಿ, ಅಶೋಕ್, ಸುರೇಶ್‌ಕುಮಾರ್, ಆಚಾರ್ಯ ಶೆಟ್ಟರ್, ಕತ್ತಿ, ಕಾಗೇರಿ, ವಿಜಯಶಂಕರ್, ರಾಂದಾಸ್, ನಾರಾಯಣಸ್ವಾಮಿ, ರವೀಂದ್ರನಾಥ್ ಇತ್ಯಾದಿಗಳೆಲ್ಲ ರೆಡ್ಡಿಗಳ ಜೊತೆ ಕೈಜೋಡಿಸುತ್ತಾರೆ.

ಅತ್ತ ಸರ್ಕಾರವನ್ನು ವಿಸರ್ಜಿಸಲಾಗದೆ ಇತ್ತ ಮುಖ್ಯಮಂತ್ರಿ ಗಾದಿಯನ್ನು ಉಳಿಸಿಕೊಳ್ಳಲಾಗದೆ ಮೈಪರಚಿಕೊಳ್ಳುವ ಸ್ಥಿತಿ ಯಡ್ಡಿಯದ್ದು ಅದಕ್ಕೀಗ ಕ್ಷಣಗಣನೆ ಶುರುವಾಗಿದೆ. ಜನವರಿ 27ಕ್ಕೇನಾದರೂ ರಾಜ್ಯಪಾಲರ ಅಂಕಿತ ಬಿತ್ತೆಂದರೆ ಮುಖ್ಯಮಂತ್ರಿ ಕುರ್ಚಿಗೆ ಬೆಂಕಿ ಬಿದ್ದಂತೆಯೇ.

ಮುಂದೈತೆ ಮಾರಿಹಬ್ಬ

● ರಾ. ಸೋಮನಾಥ್

ಅನಂತ್, ಶೆಟ್ಟರ್, ಈಶ್ವರಪ್ಪ ಜೊತೆಗಿದ್ದೇ ಬತ್ತಿ ಇಟ್ಟರೇನಪ್ಪಾ?

ರಾಜ್ಯ ಬಿಜೆಪಿಯಲ್ಲಿ ಯಡ್ಡಿ ಬಿಟ್ಟರೆ ನಾಯಕರು ಅಂತಿರುವುದು ಅನಂತ್‌ಕುಮಾರ್, ಈಶ್ವರಪ್ಪ ಮತ್ತು ಶೆಟ್ಟರ್, ದಿನಕ್ಕೊಂದು ಹಗರಣ, ರಾಜ್ಯಪಾಲರ ಕ್ರಮ, ಲೋಕಾಯುಕ್ತರ ಪೆಟ್ಟು ಇತ್ಯಾದಿ ಏನೆಲ್ಲಾ ರಾದ್ಧಾಂತವಾದರೂ ಇವರ್‍ಯಾರೂ ಏಕೆ ಯಡ್ಡಿಯ ನೆರವಿಗೆ ಬರುತ್ತಿಲ್ಲ?

ಹಾಕತ್ತೆಂದರೆ ಇವರ್‍ಯಾರಿಗೂ ಯಡ್ಡಿ ಮುಂದುವರಿಯುವುದು ಇಷ್ಟವಿಲ್ಲ, ಶೆಟ್ಟರ್ ಪ್ರತಿಯೊಂದನ್ನ ಮಾರ್ಮಿಕವಾಗಿ ಗಮನಿಸುತ್ತಾ ತನಗೆಲ್ಲಿ ಲಾಭವಾಗುತ್ತೋ ಎಂದು ಹೊಂಚ ಕೂತಿದ್ದರೆ, ಅನಂತ್‌ಕುಮಾರ್ ಒಳಗೊಳಗೇ ಬತ್ತಿ ಇಟ್ಟು ತಮಾಷೆ ನೋಡುತ್ತಿದ್ದಾರೆ. ಇದು ಯಡ್ಡಿಗೂ ಗೊತ್ತಿದೆ. ಜೆಡಿಎಸ್ ನಾಯಕ ಕುಮಾರಸ್ವಾಮಿಗೆ ಯಡ್ಡಿ ಭೂಹಗರಣದ ಪ್ರಮುಖ ದಾಖಲೆಗಳನ್ನು ಒದಗಿಸಿಕೊಟ್ಟಿದ್ದೇ ಅನಂತ್ ಕುಮಾರ್ ಎಂಬುದು ಗುಟ್ಟಾಗಿ ಉಳಿದಿಲ್ಲ, ಪತ್ರಿಕಾ ಖದೀಮ ಭಟ್ಟಂಗಿ ಭಟ್ಟನೊಬ್ಬ ಕುಮಾರಸ್ವಾಮಿಗೂ ಅನಂತ್‌ಗೂ ಏಟ್ರಿಯಾ ಹೋಟೇಲಿನಲ್ಲಿ ಮಿಲಾಕತ್ತು ಮಾಡಿಸಿದ್ದನ್ನು ಪಕ್ಕಾ ಮಾಡಿಕೊಂಡೇ ಯಡ್ಡಿ ಸಮಯ ಕಾಯುತ್ತಿದ್ದಾರೆ.

ಈ ಮಧ್ಯೆ ಪಕ್ಷಾಧ್ಯಕ್ಷ ಹರಕುಬಾಯಿ ಈಶ್ವರಪ್ಪ ರಾಜ್ಯಪಾಲರ ವಿರುದ್ಧ ಎಲ್ಲೆಂದರಲ್ಲಿ ಕಿಡಿಕಾರುತ್ತಿರುವುದು ಕೂಡ ಯಡ್ಡಿ ಮೇಲಿನ ನಿಷ್ಠೆಯಾಗಲಿ ಸರ್ಕಾರದ ಮೇಲಿನ ಕಾಳಜಿಯಿಂದಾಗಲಿ ಅಲ್ಲ, ರಾಜ್ಯಪಾಲರನ್ನು ಕೆಣಕಿದಷ್ಟೂ ಯಡ್ಡಿ ವಿರುದ್ಧದ ಕಾರ್ಯಾಚರಣೆ ತೀವ್ರಗೊಳ್ಳುತ್ತದೆಯೆಂಬ ಹುನ್ನಾರ ಮೇಲುನೋಟಕ್ಕೆ ಕಾಣುತ್ತಿದೆ. ಈಶ್ವರಪ್ಪ ಯಡ್ಡಿಯ ವಕಾಲತ್ತು ವಹಿಸಿದಂತೆ ಕಂಡರೂ ಆಳದಲ್ಲಿ ಯಡ್ಡಿಗೆ ಕೆಡುಕಾಗಲಿ ಎಂಬ ತಂತ್ರವಿರುತ್ತದೆ. ಅದಕ್ಕೆ ಕಾರಣವೂ ಇದ್ದೇ ಇದೆ. ಅದು ಶಿವಮೊಗ್ಗದ ಪಿಇಎಸ್ ಕಾಲೇಜಿನ ಪಾಲು ಹಂಚಿಕೆಯ ಕಚ್ಚಾಟ.

ಶಿವಮೊಗ್ಗದಲ್ಲಿ ಪಿಇಎಸ್ ಕಾಲೇಜು ಸ್ಥಾಪಿಸುವಾಗ ಯಡ್ಡಿ-ಈಶ್ವರಪ್ಪ ಅರ್ಧಕರ್ಧ ಪಾಲುದಾರಿಕೆಯ ಒಪ್ಪಂದಕ್ಕೆ ಬಂದೇ ಡೊನೇಶನ್ ದಂಧೆಗೆ ಕೈಹಾಕಿದ್ದರು. ಆದರೆ ರಾಘವೇಂದ್ರ ಲೋಕಸಭೆಗೆ ಗೆದ್ದು ಬಂದಿದ್ದೇ ತಡ ಪಿಇಎಸ್ ಉಸಾಬರಿಯಿಂದ ಈಶ್ವರಪ್ಪನವರನ್ನು ಹೊರಗಿಟ್ಟ. ತೀರ ಇತ್ತೀಚೆಗೆ ಗೊತ್ತಾಗಿದ್ದೇನೆಂದರೆ ರಾಘು ಆಡಳಿತ ಮಂಡಳಿಯ ಸಕಲ ಸೂತ್ರಗಳನ್ನೆಲ್ಲ ಆಕ್ರಮಿಸಿಕೊಂಡು ಈಶ್ವರಪ್ಪನವರನ್ನು ಲೆಕ್ಕಕ್ಕೇ ಇಡದೇ ಹೊರಗಟ್ಟಿದ್ದ.

ಇದು ಗೊತ್ತಾಗಿದ್ದೇ ಈಶ್ವರಪ್ಪನ ತಲೆ ಕೆಟ್ಟಿದೆ. ಯಡ್ಡಿಯ ಜೊತೆಗಿದ್ದೇ ಕತ್ತು ಕುಯ್ಯಲು ಕತ್ತಿ ಮಸೆಯಲಾರಂಭಿಸಿದ್ದಾರಂತೆ. ರಾಜ್ಯಪಾಲರನ್ನು ವಾಚಾಮಗೋಚರ ಬೈದಷ್ಟೂ ಯಡ್ಡಿ ವಿರುದ್ಧ ಕುಣಿಕೆ ನಿಗಿಯಾಗುತ್ತದೆ. ಗಣಿರೆಡ್ಡಿಗಳನ್ನು ಹೀಯಾಳಿಸಿದಷ್ಟೂ ಯಡ್ಡಿ ದುರ್ಬಲರಾಗುತ್ತಾರೆ. ದೇವೇಗೌಡ-ಕುಮಾರಸ್ವಾಮಿಯನ್ನು ಕುಟುಕಿದಷ್ಟೂ ಯಡ್ಡಿ ಬುಡಕ್ಕೆ ಬೆಂಕಿ ಬೀಳುತ್ತದೆ.


ಜೊತೆಗಿದ್ದೇ ಕತ್ತಿ ಮಸೆಯುವ ರಾಜ್ಯ ನಾಯಕರ ಮುಂದೆ ಹತಾಶೆ ಬಿಟ್ಟರೆ ಯಡ್ಡಿಗೆ ತಾನೇ ಇನ್ನೇನಿದೆ? ●

ಕನ್ನಡ ಜರ್ನಲಿಸಂನ ಸಮಸ್ಯಾಶಿಶು ವಿಭಟ್!

...ತಃ ಪ್ರಜಾವಾಣಿ ಬಾಗಿಲ ಬಳಿ ಹೋಗಿ ನಿಲ್ಲಲಿಲ್ಲ ಎಂಬುದನ್ನು ...ಮಾನ್ಯ ಪತ್ರಕರ್ತ ವಿಶ್ವೇಶ್ವರ ಭಟ್ಟರು ಉಳಿದೆಲ್ಲಾ ಕನ್ನಡ ಡೈಲಿಗಳ ...ಡಿಯುತ್ತಾ ಸಾಗುತ್ತಿದ್ದಾರೆ.

...ೇ ಪಯಣ, ಯಾವುದೋ ದಾರಿ, ಏಕಾಂಗಿ ಸಂಚಾರಿ'ಯೆಂಬ ...ಡಿಗೆ ಕೋರಸ್ ನೀಡಲು ಟೆಂಪರರಿಯಾಗಿ ತಬ್ಬಲಿಗಳಾಗಿರುವ ...ಮ್ಮ, ತ್ಯಾಗರಾಜು, ಬಡ್ತಿ ಇತ್ಯಾದಿಗಳಿದ್ದಾರೆ.

...ಘೋಷಿತ ಕನ್ನಡ ಪತ್ರಿಕಾ ಚಕ್ರವರ್ತಿಗಳ ಈ ತಂಡ ಸದ್ಯಕ್ಕೆ ಬೆಂಗಳೂರಿನ



...ರಸ್ತೆಯಲ್ಲಿರುವ ಕನ್ನಡ ಪ್ರಭ ಕಚೇರಿಯ ಸುತ್ತಾ ಠಳಾಯಿಸುತ್ತಿದೆ. ...ಮೂಲದ ಪ್ರಕಾರ ಇದೇ ಜನವರಿ 24 ಅಥವಾ 25 ಕ್ಕೆ ...ಭಟ್ಟರು ತಮ್ಮ ಖಾಸಾ ತಂಡದೊಂದಿಗೆ ಕನ್ನಡ ಪ್ರಭದ ಕಚೇರಿ ...ಮಾಡಲಿದ್ದಾರೆ!

...ಇನ್ನೊಂದು ಮೂಲದ ಪ್ರಕಾರ ಇದೆಲ್ಲಾ ಸುವರ್ಣ ಚಾನೆಲ್‌ನಲ್ಲಿರುವ ...ಸುಖಾಸುಮ್ಮನೆ ಹಬ್ಬಿಸುತ್ತಿರುವ ರೂಮರ್!!

...ವಿಚಾರಕ್ಕೆ ಬರುವ ಮುನ್ನ ಕಳೆದ ಒಂದು ತಿಂಗಳಲ್ಲಿ ಏನೇನಾಗಿದೆ ...ತ್ತ ಒಮ್ಮೆ ನೋಡುವುದಾದರೆ ವಿಭಟ್ಟರು ಉನ್ನತ ...ಸಕ್ಕಾಗಿ ಅಮೆರಿಕಾಗೆ ಹೋಗುವ ತಮ್ಮ ...ಮನ್ನು ಕೈಬಿಟ್ಟರು. ಅದಕ್ಕೆ ಜಪಾನ್ ದೇಶದ ...ಇಳುವರಿಯಲ್ಲಿ ತೌಡಿನ ಪ್ರಮಾಣ ...ಗುತ್ತಿದೆಯೆಂಬ ಸುದ್ದಿ ಕಾರಣವಾಯಿತಂತೆ!



...ದುಕೊಳ್ಳಲು ಕಾರಣ ಇಲ್ಲದಿಲ್ಲ. ಯಾಕೆಂದರೆ ...ರ್ನಾಟಕದಿಂದ ಹೊರ ದಬ್ಬಿಸಿಕೊಂಡ ಮೇಲೆ ...ಶ್ವರಿ ನಗರದ ತಮ್ಮ ನಾಲ್ಕು ಕೋಟಿ ...ಮು ಬಂಗಲೆಯೊಳಗೆ ಕುಳಿತು ಎಲ್ಲರ ವಿರುದ್ಧವೂ ...ಯುತ್ತಿದ್ದ ಭಟ್ಟರು ಕೊನೆಗೆ ಮೇಲೆದ್ದು ವಿಜಯ ...ಪ್ರಭಾಕರ ಕೋರೆ ಮುಂತಾದವರನ್ನು ಕಂಡು ...ಲಿಯ ಬಗ್ಗೆ ಚರ್ಚಿಸಿದ್ದರು.

...ಆದ್ಯಾವುದೂ ಬರ್ಕಾತ್ತಾಗಲಿಲ್ಲ.

...ದುಡ್ಡು ಮತ್ತು ಪ್ರಿಂಟಿಂಗ್ ಮಿಷಿನ್ ಪ್ರಾ...

...ಕೆಲವು ಅನಿವಾಸಿ ಸಾಹುಕಾರ ಕನ್ನಡಿಗರು ಅದೆಷ್ಟೋ ಲಕ್ಷ ...ಣ ಹಾಕುವುದಾಗಿಯೂ ವಿಭಟ್ಟರು ಅರ್ಜೆಂಟಾಗಿ ಪತ್ರಿಕೆ ಶುರು ...ಮದು ಗ್ರೀನ್‌ಸಿಗ್ನಲ್ ಕೊಟ್ಟರೆಂತಲೂ ಸುದ್ದಿಯಾಯಿತು.

...ವಿಭಟ್ಟರೆ ತಮ್ಮ ಬ್ಲಾಗಿನಲ್ಲಿ ಇದನ್ನು ಬರೆದುಕೊಂಡರು.

...ಅಲ್ಲೊಂದು ಘೋರ ದುರಂತ ಸಂಭವಿಸಿಬಿಟ್ಟಿತು.

...ರು ತಮ್ಮ ಖಾಸಾ ತಂಡದೊಂದಿಗೆ, ಹಾಲಿ ಕರ್ನಾಟಕ ಶಾಸಕರಂತೆ ...ಸ ಆಚೆಗಿರುವ ರೆಸಾರ್ಟ್ ಒಂದರೊಳಗೆ ಹೊಕ್ಕು ಹೊಸ ಡೈಲಿಯ ...ಮಾಡಿಯೇ ಬಿಟ್ಟಿದ್ದರಂತೆ. ಒಂದೆರಡು ಬಾರಿ ದೆಹಲಿ-ಮುಂಬೈಗೂ ...ಸೈಟಲ್ಲು, ಮೀಡಿಯಾ ಕಂಪನಿ ನೋಂದಣಿ ...ಡಿಬಂದರಂತೆ.

...ತಾನೊಂದು ಬಗೆದರೆ ಮಾನವ, ಬೇರೊಂದು ...ದೈವ ಎನ್ನುವಂತೆ ವಿಭಟ್ಟರಿಗೆ ಒಂದು ಘೋರ ...ದುರಾಯಿತು.

...ಪ್ರಿಂಟಿಂಗ್ ಮಿಷಿನ್ ಪ್ರಾಬ್ಲಂ!

...ರ ಪ್ರಕಾರ ಅವರ ಹೊಸ ಡೈಲಿಯು ಆರು ...ಲ್ಲಿ ಬರಬೇಕಿತ್ತು, ಆದರೆ ಪ್ರಿಂಟಿಂಗ್ ಮಿಷಿನ್ ...ಆ ಬಗ್ಗೆ ಮಿಷಿನ್ ತಯಾರಕರೊಂದಿಗೆ ...ದಾಗ ಆ ದುರಾತ್ಮನು 'ನೀವು ಈಗ ಮಿಷಿನ್ ...ನಾವು ತಯಾರಿಸಿ ಕೊಡಲು ಎರಡು ವರ್ಷ ...' ಅರಿದನಂತೆ.

...ರು ಅಲ್ಲಿಯತನಕ ನಿಶಸ್ತ್ರರಾಗಿರಲು ಸಾಧ್ಯವೇ? ...ಪದ ಟೀಂ ಹೊಸ ಪತ್ರಿಕೆಯ ಪ್ರಾಜೆಕ್ಟ್



...ಪ ಪೆಟ್‌ಸ್ಟೈಲ್‌ನಲ್ಲಿ ಕಾಣಿಸಿಕೊಂಡಿರುವ ಈ ವಿಚಾರ ಕನ್ನಡ ಜರ್ನಲಿಸಂನ ...ಮಾಸದ ಬಹುದೊಡ್ಡ ಜೋಕ್ ಎನಿಸಿಕೊಂಡು ಬಿಟ್ಟಿದೆ.

ಅಲ್ಲಾ.....!

ವಿಭಟ್ಟರು ಒಂದು ಹೊಸ ಪತ್ರಿಕೆ ಮಾಡೇ ಬಿಡಲಿ, ಅದರಿಂದ ಕಂಗಾಲಾಗುವುದೇನೂ ಇಲ್ಲ. ಅದು ಅಷ್ಟು ಸಲೀಸಾದ ಸಂಗತಿಯೂ ಅಲ್ಲ. ಆದರೆ ಜರ್ನಲಿಸಂನ ಕೆಲಸ ಗೊತ್ತಿರುವವರಿಗೆ ಕಾಮನ್‌ಸೆನ್ಸ್ ಇರಬೇಡವೆ?

ಸ್ವಂತಕ್ಕೊಂದು ಪ್ರಿಂಟಿಂಗ್ ಪ್ರೆಸ್ ಇದ್ದರೆ ಮಾತ್ರ ಒಂದು ಪತ್ರಿಕೆ ಮಾಡಲು ಸಾಧ್ಯ ಎಂದರೆ ಯಾರೂ ನಂಬುವುದಿಲ್ಲ. ಕರ್ನಾಟಕದ ಉದ್ದಗಲಕ್ಕೂ ಸ್ವಂತ ಪ್ರಿಂಟಿಂಗ್ ಪ್ರೆಸ್ ಇರದ ಡಜನ್‌ಗಟ್ಟಲೆ ಡೈಲಿಗಳಿವೆ. ಇಂಥ ಡೈಲಿಗಳನ್ನು ಪ್ರಿಂಟು ಮಾಡಿ ಕೊಡಬಲ್ಲ ಡಜನ್‌ಗಟ್ಟಲೆ ಪ್ರಿಂಟರ್‌ಗಳೂ ಇದ್ದಾರೆ. ಬೆಂಗಳೂರಿನಲ್ಲಿಯೇ ರಾಜ್‌ಹನ್ಸ್, ನ್ಯೂಸ್‌ಲೈನ್, ಲಾವಣ್ಯ ಥರದ ದೈತ್ಯಾಕಾರದ ಪ್ರಿಂಟಿಂಗ್ ಸಂಸ್ಥೆಗಳಿವೆ. ರಾಜಾಜಿನಗರದಲ್ಲಿರುವ ಬಾಲಚಂದ್ರ ಮಾಲೀಕತ್ವದ ರಾಜ್‌ಹನ್ಸ್ ಒಂದೇ ಸಂಸ್ಥೆ ಒಂದಲ್ಲಾ ನಾಲ್ಕು ಪ್ರಜಾವಾಣಿ ಸೈಜಿನ ಪ್ರಸಾರವಿರುವ ಡೈಲಿಗಳನ್ನು ಪ್ರಿಂಟಿಸಿ ಕೊಡಬಲ್ಲ ರಾಕ್ಷಸ ಗಾತ್ರದ ಮಿಷಿನ್‌ಗಳನ್ನು ಹೊಂದಿದೆ. ವಸ್ತುಸ್ಥಿತಿ ಹೀಗಿರುವಾಗ ನನ್ನ ಹತ್ತಿರ ಪ್ರಿಂಟಿಂಗ್ ಮಿಷಿನು ಇಲ್ಲ, ಅದಕ್ಕೆ ಪೇಪರ್ ಮಾಡಲ್ಲ ಎಂದು ವಿಭಟ್ಟರು ಹೇಳಿದರೆ ಹಾಗೇ ಸುಮ್ಮನೆ ನಗೆ ಬರುತ್ತದೆ.

ಮೊದಲಿನಿಂದಲೂ ಅಷ್ಟೇ

ವಿಭಟ್ಟರಿಗೆ ಸರಿಯಾದ ಎಕ್ಸ್‌ಕ್ಯೂಸ್ ಅಥವಾ ಕನ್ವಿನ್ಸಿಂಗ್ ಆದ ನೆಪಗಳನ್ನು ಸೃಷ್ಟಿಸಿಕೊಳ್ಳಲೂ ಬರುವುದಿಲ್ಲ. ವಿಕದಿಂದ ಹೊರಬರಬೇಕಾಗಿ ಬಂದಾಗ ಅಮೆರಿಕಾದಲ್ಲಿ ಓದುತ್ತೇನೆಂದು ಹೇಳಿ ಯಾರೂ ನಂಬದಂತಾಯಿತು. ಈಗ ನೋಡಿದರೆ ಸ್ವಂತ ಪೇಪರ್ ಮಾಡುತ್ತೇನೆಂದು ರಣಘೋಷ ಹಾಕಿ, ಅಂಗಡೀಲಿ ಪ್ರಿಂಟಿಂಗ್ ಮಿಷನ್ನು ಸಿಗಲಿಲ್ಲ ಎನ್ನುತ್ತಿದ್ದಾರೆ.

ಇದು ಹೇಗಿದೆಯೆಂದರೆ

"ರದ್ದಿ ಅಂಗಡಿ ಯಾಕೆ ತೆಗೀಲಿಲ್ಲ ಅಂದರೆ ಗೋಣಿಚೀಲ ಸಿಗಲಿಲ್ಲ ಅದಕ್ಕೆ" ಎಂಬಂತೆ!

...ಗ್ಗದುತ್ತಿರುವ ...ದಸ್ಯಗರು

ಕನ್ನಡದ ಬಹುತೇಕ ದಿನಪತ್ರಿಕೆಗಳಲ್ಲಿ ಪ್ರಗತಿಪರರು ಹಾಗೂ ಕೋಮುವಾದಿ ಜಾತಿವಾದಿಗಳಿದ್ದಾರೆ. ಸಂಖ್ಯೆಯಲ್ಲಿ ಸ್ವಲ್ಪ ಜಾಸ್ತಿಕಮ್ಮಿ ಎಂಬುದನ್ನು ಬಿಟ್ಟರೆ ವಿಭಟ್ಟರಿದ್ದಾಗ ವಿಜಯ ಕರ್ನಾಟಕ ಇದ್ದ ರೀತಿ ಹಂಡ್ರೆಡ್ ಪರ್ಸೆಂಟ್ ಕೋಮುವಾದಿಯಾಗಿದ್ದ ದಿನಪತ್ರಿಕೆಗಳಿರಲಿಲ್ಲ.



ವಿಭಟ್ಟ, ಪ್ರತಾಪ್ ಸಿಮ್ಹ, ತ್ಯಾಗರಾಜ, ಯತಿರಾಜ್‌ಗಳ ರೀತಿ ಇಡೀ ತಂಡವೇ ಹಸಿಹಸಿ ಭ್ರಷ್ಟಾಚಾರ ನಡೆಸಿ ಸಿಕ್ಕಿಬಿದ್ದವರೂ ಇರಲೇ ಇಲ್ಲ ಬಿಡಿ. ಕೋಮುವಾದ+ಭ್ರಷ್ಟಾಚಾರಗಳೆರಡೂ ಹದವಾಗಿ ಬೆರೆತ ತಂಡ ಇದಾಗಿದೆ. ಹಾಗಾಗಿಯೇ ವಿಭಟ್ಟರ ತಂಡವನ್ನು ಒಳಕರೆದುಕೊಳ್ಳಲು ಬೇರೆ ಯಾವ ದಿನಪತ್ರಿಕೆಯ ಮಾಲೀಕರೂ ಸಿದ್ಧರಿರಲಿಲ್ಲ. ಅದರಿಂದ ಆಗುವ ಲಾಭಕ್ಕಿಂತ ಹಾನಿಯೇ ಹೆಚ್ಚೆಂಬುದು ಬಹುತೇಕರಿಗೆ ಅರ್ಥವಾಗಿಹೋಗಿತ್ತು. ತಮಗಾಗಿ ಒಂದು ನೆಲೆ ಹುಡುಕಿಕೊಳ್ಳುವ ಈ ಪ್ರಕ್ರಿಯೆಯಲ್ಲಿ ಈ ಗುಂಪು ಕನ್ನಡ ಜರ್ನಲಿಸಂನ ಸಮಸ್ಯಾಶಿಶುಗಳಾಗಿ ಬದಲಾಗಿದ್ದಾರೆ.



ಇದೀಗ ಇವರೆಲ್ಲಾ ಕನ್ನಡಪ್ರಭ ಸೇರಲಿದ್ದಾರೆಂಬ ರೂಮರ್ ಅನ್ನೇ ಆಧರಿಸಿ ಹೇಳಬೇಕೆಂದರೆ ಅಲ್ಲೀಗ ಸದ್ಯಕ್ಕೆ ಯಾವ ಸಮಸ್ಯೆಯೂ ಇಲ್ಲ. ರಂಗನಾಥ್ ಬಿಟ್ಟುಹೋದ ನಂತರವೂ ಕನ್ನಡಪ್ರಭದ ಪ್ರಭೆ ಕಿಂಚಿತ್ತೂ ಕಡಿಮೆಯಾಗಿಲ್ಲ. ಅದೇಕೋ ಸಂಪಾದಕ ಶಿವಸುಬ್ರಮಣ್ಯ **low profile maintain** ಮಾಡಿಕೊಂಡಿದ್ದಾರೆ. ಆದರೆ ಕೆಲಸದ ದಕ್ಷತೆಯಲ್ಲಿ ತಮ್ಮ ಸಾಮರ್ಥ್ಯ ಸಾಬೀತು ಮಾಡಿ ತೋರಿಸುತ್ತಿದ್ದಾರೆ.

ಈ ಮಧ್ಯೆ ಕನ್ನಡಪ್ರಭದ ಮಾತೃ ಸಂಸ್ಥೆಯಾದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್‌ನೊಳಗೆ ಕೆಲವು ಮಹತ್ವದ ಬೆಳವಣಿಗೆಗಳಾಗಿವೆ. ಸುವರ್ಣ ಚಾನಲ್ ಮಾಲೀಕ ರಾಜೀವ್ ಚಂದ್ರಶೇಖರ್ ಕನ್ನಡಪ್ರಭದ ಅರ್ಧ ಭಾಗ ಮಾಲೀಕರಾಗಲು ಅದರ ಷೇರು ಖರೀದಿಗೆ ಕೈಹಾಕಿದ್ದಾರೆ. ಮತ್ತೊಂದೆಡೆ ಇಂಡಿಯಾ ಟುಡೆಗೆ ಎಡಿಟರ್ ಆಗಿದ್ದ ಪ್ರಭು ಚಾವ್ಲಾ ಅಲ್ಲಿಂದ ಹೊರದಬ್ಬಿಸಿಕೊಂಡು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂದು ಕುಳಿತಿದ್ದಾರೆ. ಪಕ್ಕಾ ಚೆಡ್ಡಿ ಬುದ್ಧಿಯ ಚಾವ್ಲಾ 2ಜಿ ಸ್ಪೆಕ್ಟ್ರಂ ಹಗರಣದಲ್ಲಿ ತಲೆ ಹಾಕಿದ್ದ ಅವಿವೇಕಿ ಪತ್ರಕರ್ತರ ಪೈಕಿ ಅಗ್ರಗಣ್ಯನಾಗಿದ್ದಾತ. ಇದು ಹಗರಣವಾಗಿ ಸ್ಫೋಟಗೊಂಡಾಗ ಇಂಡಿಯಾ ಟುಡೆ ಚಾವ್ಲಾಗೆ ಗೇಟ್‌ಪಾಸ್ ಕೊಟ್ಟು ಎಂ.ಜೆ. ಅಕ್ಬರ್‌ರನ್ನು ಸಂಪಾದಕ ಸ್ಥಾನಕ್ಕೆ ತಂದಿದೆ. ಈಗ ಚೆಡ್ಡಿ ಚಾವ್ಲಾ ಇರುವ ಕಡೆಯೇ ವಿಭಟ್ಟರ ತಂಡ ಹೋಗಿ ಸೇರಿಕೊಂಡರೆ ಅದು ಹಾಗಲಕಾಯಿಗೆ ಬೇವಿನ ಕಾಯಿ ಜೊತೆಯಾದಂತೆಯೇ ಸರಿ. ಕನ್ನಡಪ್ರಭಕ್ಕೆ ಹಾರ್ಡ್‌ಕೋರ್ ಕಮ್ಯೂನಲ್ ಎಂಬ ಕಳಂಕ ಇದುವರೆಗೂ ಇರಲಿಲ್ಲ. ನಾಳೆ ವಿಭಟ್ಟರು ಅಲ್ಲಿ ಕಾಣಿಸಿಕೊಂಡರೆ ಕನ್ನಡಪ್ರಭಕ್ಕೆ ಆ ಕಳಂಕ ಮಾತ್ರ ತಪ್ಪಿದ್ದಲ್ಲ ಅಷ್ಟೆ.

• ಪಾರ್ವತೀಶ

ಕನ್ನಡ ಪ್ರಭದೊಳಗಿನ ಮೂಡ್

"ವಿಭಟ್ಟರು ತಮ್ಮ ಖಾಸಾ ತಂಡದೊಂದಿಗೆ ಬರುತ್ತಿದ್ದಾರಂತೆ ನಿಜಾನಾ?" ಎಂದು ಕೇಳಿದರೆ ಕನ್ನಡ ಪ್ರಭದ ಯಾವೊಬ್ಬ ಸಿಬ್ಬಂದಿಯೂ 'ಗೊತ್ತಿಲ್ಲ' ಅನ್ನುತ್ತಾರೆ. ಅದಕ್ಕಿಂತ ಮುಖ್ಯವಾಗಿ ಈ ಸುದ್ದಿ ಕೇಳಿ ಬೆಂಗಳೂರಿನ ಹೆಡ್‌ಆಫೀಸಿನಲ್ಲಾಗಲಿ ಅಥವಾ ಜಿಲ್ಲಾ ಬ್ಯೂರೋಗಳಲ್ಲಾಗಲಿ ಯಾರಿಗೂ ಖುಷಿಯಾಗುತ್ತಿಲ್ಲ. ಎಲ್ಲಾ ಸರಿಯಾಗಿ ನಡೆಯುತ್ತಿರುವಾಗ ಇದೆಲ್ಲಿಯ ಕಿರಿಕಿರಿ ಎನ್ನುವ ಅಭಿಪ್ರಾಯ ಬಹುತೇಕರಿಗಿದೆ.

ಸ್ವತಃ ಸಂಪಾದಕ ಶಿವಸುಬ್ರಮಣ್ಯ ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ತಾವಾಯಿತು ತಮ್ಮ ಕೆಲಸವಾಯಿತು. ಬಿಡುವು ಸಿಕ್ಕಾಗ **wild life photography** ಆಯಿತೆಂಬಂತೆ ಇರುವ ಸಭ್ಯ **workoholic** ಜರ್ನಲಿಸ್ಟ್ ಆತ. ಕನ್ನಡಪ್ರಭದಲ್ಲೀಗ ಅದ್ಭುತ ಕೆಲಸಗಾರರ ಟೀಂ ರೂಪುಗೊಂಡಿದೆ. ಗಿರೀಶ್ ಬಾಬು, ರವಿ ಮಾಳೇನಹಳ್ಳಿ, ಡಾ. ವೆಂಕಟೇಶ್, ವಾಗ್ದೇವಿ ಶೆಟ್ಟಿ, ಶ್ರೀಕಾಂತ್ ಭಟ್, ರೇಣುಕಾ ಪ್ರಸಾದ್ ಹಾಡ್ಯ ಕ್ರೀಡಾ ವಿಭಾಗದ ಸೋಮಶೇಖರ್, ಸಖಿ ಪತ್ರಿಕೆಗೆ ಕೆಲಸ ಮಾಡುವ ಚೇತನಾ ತೀರ್ಥಹಳ್ಳಿ ಒಳ್ಳೇ ಜೋಶ್‌ನಿಂದ ಕೆಲಸ ಮಾಡುತ್ತಿದ್ದಾರೆ. ಸಂಪಾದಕ ಶಿವಸುಬ್ರಮಣ್ಯ ವಿನಾಕಾರಣ ಯಾರನ್ನು ಮೆರೆಸದೆ, ತುಳಿಯದೆ ಟೀಂ ಸ್ಪಿರಿಟ್ ಬೆಳೆಸುತ್ತಾ ಮುಂದೆ ಸಾಗುತ್ತಿದ್ದಾರೆ. ಕಳೆದ ಕೆಲ ತಿಂಗಳಿಂದ ಕನ್ನಡಪ್ರಭ ಮೈದುಂಬಿಕೊಂಡು ಬರುತ್ತಿದೆ. ಹೊಸ ವರ್ಷದ ಸಂದರ್ಭದಲ್ಲಿ ಲೋಕಾಯುಕ್ತ ಸಂತೋಷ್ ಹೆಗಡೆ ಕುರಿತು ಮಾಡಿದ ಬರಹ, ಪ್ರತಿದಿನ ಮುಖಪುಟದಲ್ಲೇ ಪ್ರಕಟವಾಗುತ್ತಿರುವ 'ಇವನು ನಮ್ಮ ರೈತ' ಅಂಕಣ, ಪ್ರತಿ ಭಾನುವಾರದ ಅಕ್ಷರ ತೋರಣವೆಂಬ ಸಾಹಿತ್ಯದ ಪುಟಗಳು ಕನ್ನಡ ಪ್ರಭಕ್ಕೆ ಪ್ರಭೆ ತಂದಿದೆ. ಅದರ ಓದುಗರ ಸಂಖ್ಯೆ ನಿಜಕ್ಕೂ ಹೆಚ್ಚಾಗಿದೆ. ಇದನ್ನೆಲ್ಲಾ ಇಟ್ಟುಕೊಂಡು ನೋಡಿದರೆ ಶಿವಸುಬ್ರಹ್ಮಣ್ಯರನ್ನು ಕದಲಿಸಿ ಆ ಜಾಗಕ್ಕೆ ವಿಭಟ್ಟರನ್ನು ತರುವ ಅಗತ್ಯ ಕಾರಣ ಒಂದೂ ಇಲ್ಲ.

ಆದರೂ ವಿನಾಶಕಾಲೇ ವಿಪರೀತ ಬುದ್ಧಿ ಎನ್ನುವಂತೆ ಎಕ್ಸ್‌ಪ್ರೆಸ್ ಮಾಲೀಕ ಸೊಂತಾಲಿಯಾ ಹಾಗೂ ರಾಜೀವ್ ಚಂದ್ರಶೇಖರ್ ಏನಾದರೂ ವಿಭಟ್ಟರಿಗೇ ಜೋತು ಬಿದ್ದರೂ ಆಶ್ಚರ್ಯವಿಲ್ಲ ಎನ್ನುವವರಿದ್ದಾರೆ.

ಜನವರಿ ಕೊನೆಯ ವಾರದಲ್ಲಿ ಇದಕ್ಕೆ ಖಚಿತ ಉತ್ತರ ಸಿಗಲಿದೆ.


ಈ ಸಮಸ್ಯಾ ಶಿಶುಗಳ, ನಿರಾಶ್ರಿತರ ಗುಂಪು ಯಾರ ದಿಕ್ಕಿನತ್ತ ಚಲಿಸಿದರೂ ಅಲ್ಲೊಂದು ಹೊಸ ಸಮಸ್ಯೆ ಗ್ಯಾರಂಟಿಯಾಗಿ ತಲೆ ಎತ್ತುತ್ತಿರುವುದೇ ಈ ಕ್ಷಣದ ಸುದ್ದಿಮನೆ ಕತೆಯಾಗಿದೆ.

ಮೂಡಿಗೆರೆ

ವಿದ್ಯಾರ್ಥಿನಿಯ ಅಶ್ಲೀಲ ಚಿತ್ರ ಸೆರೆಹಿಡಿದವರಾರು?

ಕಳೆದ ಹದಿನೈದು ದಿನದಿಂದ ಮೂಡಿಗೆರೆ ಸೀಮೆಯ ಪಡ್ಡೆ ಹೈಕಳು ಕಂಡಾಪಟ್ಟೆ ಬ್ಯುಸಿಯಾಗಿವೆ. ಹಾಗಂತ ಅವೆಲ್ಲ ಯಾವುದೋ ಘನಂದಾರಿ ಕೆಲಸ ಮಾಡುತ್ತಿವೆ ಅಂತಲ್ಲ. ಅವು ಅಶ್ಲೀಲ ವಿಡಿಯೋ ತುಣುಕೊಂದನ್ನು ನೋಡಿ ನೋಡಿ ವಿಕೃತ ಖುಷಿ ಪಡುತ್ತಿವೆ. ಈ ವೀಡಿಯೋ ತುಣುಕು ಈಗಾಗಲೆ ಮೂಡಿಗೆರೆ ಸುತ್ತಮುತ್ತಲ ಬಹುತೇಕ ಪಡ್ಡೆ ಹುಡುಗರ ಕೈಸೇರಿ ಎಗ್ಗಿಲ್ಲದೆ ಎಂಎಂಎಸ್, ಬ್ಲೂಟೂಥ್ ಮೂಲಕ ಒಬ್ಬರಿಂದ ಮತ್ತೊಬ್ಬರಿಗೆ ಹರಿದಾಡುತ್ತಿದೆ. ದುರಂತವೆಂದರೆ, ಈ ದೃಶ್ಯ ನೋಡಿದವರ ಗುಮಾನಿಗಳೆಲ್ಲ ಇಲ್ಲಿನ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಸುತ್ತಾ ಬೀಟು ಹೊಡೆಯುತ್ತಿವೆ.

ಅಸಲು ವಿಷಯವೆಂದರೆ, ಈ ಕಾಲೇಜಿನ ಯೂನಿಫಾರಮ್ ಅನ್ನೇ ಹೋಲುವ ಬಟ್ಟೆ ಧರಿಸಿದ ಯುವತಿ ಯುವಕನೊಬ್ಬನೊಂದಿಗೆ ಆ ಅಶ್ಲೀಲ ದೃಶ್ಯಾವಳಿಯಲ್ಲಿ ಕಾಣಿಸಿಕೊಂಡಿದ್ದಾಳೆ. ಸುಮಾರು ಒಂಬತ್ತು ನಿಮಿಷದಷ್ಟು ಉದ್ದವಿರುವ ಈ ಅಶ್ಲೀಲ ವಿಡಿಯೋದಲ್ಲಿ ಆ ಹುಡುಗಿ ತಿಳಿಹಾಲಿನ ಬಣ್ಣದ ಟಾಪ್ ಮತ್ತು ತಿಳಿ ಸಿಮೆಂಟ್ ಬಣ್ಣದ ಪ್ಯಾಂಟು ಧರಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ.



ಮೊಬೈಲ್ ಬಳಸಿ ಇದನ್ನು ಸೆರೆ ಹಿಡಿದಿರುವುದರಿಂದ ದೃಶ್ಯಗಳಲ್ಲಿ ಅಷ್ಟೊಂದು ಸ್ಪಷ್ಟತೆಯಿಲ್ಲ. ಮೂರನೆಯ ವ್ಯಕ್ತಿ ಗೋಡೆ ಮರೆಯಲ್ಲಿ ನಿಂತು ಪುಟ್ಟಕಿಂಡಿಯ ಮೂಲಕ ಒಳಗಿನ ದೃಶ್ಯಗಳನ್ನು ಚಿತ್ರಿಸಿರುವ ಸಾಧ್ಯತೆಯಿದೆ. ಬೆಳಕು ಚೆನ್ನಾಗಿ ಬೀಳುವುದರಿಂದ ಗೋಡೆಗಳ ಇಟ್ಟಿಗೆಗಳು ಕಾಣಿಸುತ್ತವೆ. ಅದು ಕೊಠಡಿಯಾ ಅಥವಾ ತೆರೆದ ಸ್ಥಳವಾ ಎಂಬುದು ಕುತೂಹಲ ಕೆರಳಿಸಿದೆ. ಇಡೀ ವಾತಾವರಣ ಹಳೆಯ ಶೌಚಾಲಯದಂತೆ, ಪಾಳುಬಿದ್ದ ಮನೆಯಂತಿದೆ. ಸುತ್ತಲೂ ಕಸ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ. ಯುವತಿ ನೆಲದಲ್ಲಿ ಅರೆ ನಗ್ನಾವಸ್ಥೆಯಲ್ಲಿದ್ದಾಳೆ. ಅಶ್ಲೀಲ ಪರ್ವ ನಾಲ್ಕು ನಿಮಿಷದ ಹತ್ತು ಸೆಕೆಂಡು ಮಾತ್ರ ನಡೆಯುತ್ತದೆ. ಉಳಿದ ಅವಧಿಯಲ್ಲಿ ಯುವತಿಯ ದೇಹವನ್ನು ಯೂನಿಫಾರಂ ಮೇಲಿನಿಂದ ತೋರಿಸಲಾಗಿದೆ. ಎಲ್ಲೂ ಕೂಡ ಯುವಕನ ಮುಖ ಸ್ಪಷ್ಟವಾಗಿ ಕಾಣಿಸುವುದಿಲ್ಲ. ಆತ ಓರೆಯಾಗಿ ಮಾತ್ರ ಕಾಣಿಸಿಕೊಳ್ಳುತ್ತಾನೆ. ಹೀಗಾಗಿ ಇದೊಂದು ವ್ಯವಸ್ಥಿತ ತಯಾರಿಯಂತೆಯೂ ಕಂಡು ಬರುತ್ತದೆ.

ಇದು ಇಂತಹ ಸೀಡಿಗಳನ್ನೇ ತಯಾರಿಸಿ ದಂಧೆ ನಡೆಸುವವರ ಷಡ್ಯಂತ್ರದಂತೆ ಕಾಣಿಸುವುದಿಲ್ಲ, ಬದಲಾಗಿ ವಿದ್ಯಾರ್ಥಿನಿಯ ಅರಿವಿಗೆ ಬಾರದಂತೆ ಚಿತ್ರೀಕರಿಸಿದ ಪಡ್ಡೆಗಳ ಕುತಂತ್ರದಂತೆ ಕಾಣಿಸುತ್ತದೆ. ಇಲ್ಲವೆಂದರೆ ಬ್ಲಾಕ್‌ಮೇಲ್ ಮಾಡಲು ಮೂರನೆ ವ್ಯಕ್ತಿ ಚಿತ್ರೀಕರಿಸಲ್ಪಟ್ಟಿರುವ ಸಾಧ್ಯತೆಯೂ ಇದೆ. ವೀಡಿಯೋ ತುಣುಕಿಗೆ 'ಜಿಜಿಸಿ ಮೂಡಿಗೆರೆ' ಎಂದು ಹೆಸರಿಡಲಾಗಿದೆ.

ಚಿತ್ರೀಕರಣದ ಆರಂಭದಲ್ಲಿ ಕಾಲೇಜಿನ ಪಕ್ಕದ ಪ್ರೌಢ ಶಾಲೆಯ ಬೆಳಗಿನ ಗಂಟೆ ಸದ್ದು ಕೇಳಿಸುತ್ತದೆ. ಒಂದು ನಿಮಿಷ ಕಳೆಯುವಷ್ಟರಲ್ಲಿ ಪೀರಿಯಡ್ ಆರಂಭಿಸುವ ಗಂಟೆ ಬಾರಿಸುವ ಎರಡು ಸದ್ದು ಕೇಳಿಸುತ್ತದೆ. ನೂರಾರು ಮಕ್ಕಳ ಮಾತುಗಳೂ ಚಿಲಿಪಿಲಿಯಂತೆ ಕೇಳಿಸುತ್ತದೆ. ವಾಹನಗಳ ಓಡಾಟದ ಶಬ್ದ ಮತ್ತು ಹಾರನ್‌ಗಳ ಕೀರಲು ಧ್ವನಿಗಳು ಆಗಾಗ ಕೇಳಿಸುತ್ತದೆ. ಅಂದರೆ ಶಾಲೆ ಮತ್ತು ಕಾಲೇಜು ಸಂಕೀರ್ಣದ ಆಸುಪಾಸಿನಲ್ಲಿ ಇದರ ಚಿತ್ರೀಕರಣ ನಡೆದಿರುವುದಕ್ಕೆ ಪುಷ್ಟಿಯನ್ನೊದಗಿಸುತ್ತದೆ.

ವೀಡಿಯೋದಲ್ಲಿ ಕಾಣಿಸಿಕೊಳ್ಳುವ ಯುವಕ ಕಾಲೇಜಿನಿಂದ ಹೊರಗಿನವನು ಅನ್ನುವುದರಲ್ಲಿ ಸಂಶಯವಿಲ್ಲ. ದೃಶ್ಯದಲ್ಲಿರುವ ಮುಖಕ್ಕೆ ಸರಿಯಾಗಿ ಹೋಲುವ ಇನ್ನೊಂದು ಮುಖ ಕಾಲೇಜಿನಲ್ಲಿ ಕಾಣಿಸುತ್ತಿಲ್ಲ. ತುಂಬು ತೋಳಿನ ಬಿಳಿ ಅಂಗಿ ಧರಿಸಿರುವ ಆತ ಅಷ್ಟೂ ಹೊತ್ತು ತನ್ನ ಮುಖವನ್ನು ಪೂರ್ತಿಯಾಗಿ ತೋರಿಸುವುದಿಲ್ಲ. ಇಪ್ಪತ್ತೈದರಿಂದ ಮೂವತ್ತರೊಳಗಿನ ವಯೋಮಾನದ ಆತ ಯಾರು? ಆತನದ್ದು ಪ್ರೇಮ ನಾಟಕವಾ? ಅಥವಾ ತೀಟೆ ತೀರಿಸಿಕೊಳ್ಳುವ ಜಾಯಮಾನದವನಾ? ಚಿತ್ರೀಕರಣ ನಡೆಸಲು ಮೊದಲೇ ನಿರ್ಧರಿಸಲಾಗಿತ್ತೆ? ಅದು ಹುಡುಗಿಗೆ ತಿಳಿದಿತ್ತೆ? ಒಂದೆಡೆ ಹುಡುಗಿ ಮುಖ ಮುಚ್ಚಿಕೊಳ್ಳುತ್ತಾಳೆ ಯಾಕೆ? ಎಲ್ಲಾ ಮುಗಿದ ಬಳಿಕ ಹುಡುಗಿಯ ಎಡಗೈಯನ್ನು ಬಲಗೈ ಮೇಲಿಟ್ಟು ಏನು ಹೇಳುತ್ತಾನೆ? ವೀಡಿಯೋ ಮೂಲಕ ಚಿತ್ರೀಕರಿಸಿದ ಮೂರನೆ ವ್ಯಕ್ತಿ ಯಾರು? ಇವು ಪ್ರಮುಖ ಪ್ರಶ್ನೆಗಳು.

ಪ್ರೀತಿಯ ನಾಟಕವಾಡಿ ಆ ಹುಡುಗಿಯನ್ನ ಈ ರೀತಿ ಬಳಸಿಕೊಳ್ಳಲಾಗಿರುವ ಹಾಗೂ ಯಾರೋ ಕಿಡಿಗೇಡಿಗಳು ಅದನ್ನು ಕದ್ದು ಚಿತ್ರೀಕರಿಸಿಕೊಂಡಿರುವ ಸಾಧ್ಯತೆಗಳನ್ನು ತಳ್ಳಿ ಹಾಕಲಾಗುವುದಿಲ್ಲ. ಆದರೆ ಆ ವಿಡಿಯೋದಲ್ಲಿರುವಾಕೆ ಬಾಲಕಿಯರ ಕಾಲೇಜಿನ ವಿದ್ಯಾರ್ಥಿನಿಯೇ ಎಂಬುದು ಸದ್ಯದ ಪ್ರಶ್ನೆ. ಕೇವಲ ಯೂನಿಫಾರಮ್ ಒಂದರಿಂದಲೇ ಖಚಿತ ನಿರ್ಧಾರಕ್ಕೆ ಬಂದರೆ ದುಡುಕುತನವಾಗುತ್ತದೆ. ಒಂದು ವೇಳೆ ಆಕೆ ವಿದ್ಯಾರ್ಥಿನಿಯೇ ಆಗಿದ್ದರೆ ಖಂಡಿತವಾಗಿಯೂ ಇದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಕಾಲೇಜಿನ ಆಡಳಿತ ಮಂಡಳಿ ಹಾಗೂ ಪೋಷಕರು ಈ ಬಗ್ಗೆ ಎಚ್ಚರ ವಹಿಸಬೇಕು. ಈ ಬಗ್ಗೆ ಆಂತರಿಕವಾಗಿ ಯಾದರೂ ತನಿಖೆ ನಡೆಸುವ ಅವಶ್ಯಕತೆಯಿದೆ.

ಮೂಡಿಗೆರೆಯ ಸರಕಾರಿ ಕಾಲೇಜಿನಲ್ಲಿ ತೀರ ಉತ್ತಮರೆನಿಸಿದ ಉಪನ್ಯಾಸಕರಿದ್ದಾರೆ. ಅವರ ಮೇಲೆ ಅಷ್ಟಾಗಿ ಯಾರಿಗೂ ಆತಂಕವಿಲ್ಲ. ಕೆಲವು ವಿದ್ಯಾರ್ಥಿನಿಯರು ಸಮಯಕ್ಕೆ ಸರಿಯಾಗಿ ಕಾಲೇಜಿಗೆ ಬಾರದಿರುವುದು ಉಪನ್ಯಾಸಕರಿಗೆ ತಿಳಿದಿದೆ. ಕೆಲವರು ಅರ್ಧದಲ್ಲಿ ಎದ್ದು ಹೋಗುವುದು ನಡೆಯುತ್ತಿದೆ. ಹೀಗಾಗಿ ಹೊರಗಿನ ಅಬ್ಬೇಪಾರಿ ಪಡ್ಡೆ ಹುಡುಗರ ಕೈಗೆ ಸಿಕ್ಕಿ ಹೈರಾಣಾಗುವ ಸಂದರ್ಭ ಬಂದೊದಗಬಹುದು. ಈ ಬಗ್ಗೆ ಎಲ್ಲರೂ ಗಮನ ಹರಿಸಬೇಕಿದೆ.

ಮೂಡಿಗೆರೆ ತುಂಬಾ ವ್ಯಾಪಿಸಿರುವ ಈ ಅಶ್ಲೀಲ ವೀಡಿಯೋಗೂ ತಮಗೂ ಸಂಬಂಧವಿಲ್ಲದಂತೆ ಪೊಲೀಸರು ಮೌನ ವಹಿಸಿದ್ದಾರೆ. ಇದು ಬಾಲಕಿಯರ ಕಾಲೇಜಿನ ಹೆಸರಿನಲ್ಲಿ ಇರುವುದರಿಂದ ಸಹಜವಾಗಿ ಚರ್ಚೆಯಾಗುತ್ತಿದೆ. ವಿಷಯ ಬಲ್ಲ ವಿದ್ಯಾರ್ಥಿಗಳ ಪೋಷಕರಲ್ಲಿ ಆತಂಕ ಮೂಡಿದೆ. ಕಂದಮ್ಮಗಳ ಹಾದಿ ತಪ್ಪಿಸಲು ಯಾವ ಚಿರತೆ ಹೊಂಚು ಹಾಕಿದೆಯೋ ಅನ್ನುವ ಚಿಂತೆಯೂ ವ್ಯಾಪಕವಾಗಿದೆ. ಆದರೆ ಇದು ಮೂಡಿಗೆರೆ ಕಾಲೇಜು ಹುಡುಗಿ ಹೌದೊ ಅಲ್ಲವೋ? ಹೀಗೆ ಹುಡುಗಿಯನ್ನ ಬಲಿ ಬೀಳಿಸಿದ ಕಾಮುಖರ್‍ಯಾರು? ಇಂಥ ಮಾಫಿಯಾಗಳೇನಾದರೂ ಇವೆಯಾ ಮುಂತಾದ ಪ್ರಶ್ನೆಗಳು ಎಲ್ಲರನ್ನೂ ಕಾಡುತ್ತಿವೆ. ಸ್ಥಳೀಯ ಪೊಲೀಸರು ದೂರಿಗಾಗಿ ಕಾಯದೆ ಕಾರ್ಯಾಚರಣೆಗಿಳಿದರೆ ಸತ್ಯ ತಿಳಿಯುವುದು ತಡವಾಗಲಾರದು. ಅದು ತುರ್ತಿನ ಕೆಲಸವೂ ಹೌದು.

• ಅಜೀಜ್ ಕಿರುಗುಂದ

ಕಾರ್ಟೂನ್ ಕಾರ್ನರ್



ಬಾಗಲಕೋಟೆ

ಕಾಂಗ್ರೆಸ್ ಶವಪೆಟ್ಟಿಗೆಗೆ ಮೊಳೆ ಜಡಿದವರು!

ಪುರಾತನ ಪಕ್ಷ ಕಾಂಗ್ರೆಸ್‌ನೊಳಗೆ ಯಾವುದೂ ಸರಿಯಿಲ್ಲವೆಂಬುದು ಲೋಕಕ್ಕೆ ಗೊತ್ತಿರುವ ವಿಚಾರ. ಲೋಕಸಭೆ, ವಿಧಾನ ಸಭೆಯಿಂದ ಹಿಡಿದು ಇತ್ತೀಚೆಗೆ ನಡೆದ ಜಿಪಂ, ತಾಪಂ ಚುನಾವಣೆಗಳತನಕ ಈ ಪಕ್ಷದ್ದು ಅಕ್ಷರಶಃ ಗೋತಾ ಪರ್ವ. ಇಂದು ಬಿಜೆಪಿ ಪ್ರತೀ ಸಲ ಬಚಾವಾಗುತ್ತಿದೆಯೆಂದರೆ ಅದಕ್ಕೆ ಕಾಂಗ್ರೆಸ್‌ನ ಕರುಣಾಜನಕ ಸ್ಥಿತಿಯೇ ಕಾರಣ. ಕಾಂಗ್ರೆಸ್ ಈ ಪರಿ ಹೀನಾಯ ಸ್ಥಿತಿ ತಲುಪಲು ರಾಜ್ಯಾದ್ಯಂತ ಸಾವಿರ ಕಾರಣ ಸಿಗಬಹುದು. ಬಾಗಲಕೋಟೆ ಜಿಲ್ಲೆಯಲ್ಲಿ ಕಾಂಗ್ರೆಸ್ ಎಕ್ಕುಟ್ಟಲು ಕಾರಣವೇನೆಂಬುದಕ್ಕೆ ಉತ್ತರ ಹುಡುಕುವುದಷ್ಟೇ ಈ ವರದಿಯ ಉದ್ದೇಶ.

ಈ ಹಿನ್ನೆಲೆಯಲ್ಲಿ ತಲಾಷಿಗಿಳಿದರೆ ಕಾಂಗ್ರೆಸ್ ಶವಪೆಟ್ಟಿಗೆಗೆ ಮೊಳೆ ಹೊಡೆಯುತ್ತಲೇ ಜಗತ್ತು ಮರೆತಿರುವ ಒಂದು ಹಿಂಡು ನೇತಾರರು ಕಣ್ಣಿಗೆ ಬೀಳುತ್ತಾರೆ. ಹಾಗಂತ ಜಿಲ್ಲೆಯೊಳಗೆ ಕಾಂಗ್ರೆಸ್ ಲಾಗಾಯ್ತಿನಿಂದಲೂ ಶವಪೆಟ್ಟಿಗೆಯೊಳಗೆ ಪವಡಿಸಿತ್ತೆಂದುಕೊಳ್ಳಬೇಕಿಲ್ಲ. ಒಂದು ಕಾಲದಲ್ಲಿ ವಿರೋಧಿಗಳು ಎದುರು ನಿಲ್ಲಲಾರದಂತೆ ಈ ನೆಲದಲ್ಲಿ ಕಾಂಗ್ರೆಸ್ ಪ್ರಖರವಾಗಿತ್ತು. ಸಾಕ್ಷಾತ್ ರಾಮಕೃಷ್ಣ ಹೆಗಡೆಯವರೇ ಬಾಗಲಕೋಟೆ ಲೋಕಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್, ಸಿದ್ದು ನ್ಯಾಮಗೌಡ ಎಂಬ ಬಾಲಕನೆದುರು ಸೋಲುಂಡಿದ್ದರು. ಆದರಿಂದು ಅದೇ ಕಾಂಗ್ರೆಸ್ ಖುದ್ದು ಸೋನಿಯಾ ಗಾಂಧಿಯೇ ಬಂದರೂ ನೆಲಬಿಡಲಾರದಂಥ ರೋಗಿಷ್ಠ ಸ್ಥಿತಿ ತಲುಪಿದೆ.



ಪಕ್ಷವನ್ನು ಈ ಸ್ಥಿತಿಗಿಳಿಸಿದವರಲ್ಲಿ ಬಿ.ಬಿ. ಚಿಮ್ಮನಕಟ್ಟಿ ಮೊದಲಿಗ. ಈತ ಒಮ್ಮೆ ಜಿಲ್ಲಾ ಉಸ್ತುವಾರಿ ಸಚಿವನಾಗಿ, ಎರಡೆರಡು ಸಾರಿ ಕಾಂಗ್ರೆಸ್ ಅಧ್ಯಕ್ಷಗಿರಿ ಅನುಭವಿಸಿದವನು. ಆದರೆ ಆ ಅವಧಿಯ ತುಂಬಾ ಪಕ್ಷ ಬೆಳೆಸುವ ಬದಲಾಗಿ ಶುದ್ಧ ಅಹಂಕಾರ ಬೆಳೆಸಿಕೊಂಡ. ರೋಸಿಹೋದ ಕುಲಬಾಂಧವರೇ ಒದ್ದು ಹೊರಗಟ್ಟಿದ್ದರು. ಕಂಡಕಂಡವರ ಭೂಮಿ ತೋರಿಸಿ ಸಾಲ ಎತ್ತುವುದನ್ನೇ ಕಸುಬಾಗಿಸಿಕೊಂಡ ಈ ಅವಿವೇಕಿ ತನ್ನ ಬಾದಾಮಿ ಶುಗರ್ ಕಾರ್ಖಾನೆಯನ್ನು ಬದುಕಿಸಿಕೊಳ್ಳುವುದನ್ನೇ ಜನಸೇವೆ ಅಂದುಕೊಂಡ. ಈತನ ಇಂಥಾ ಹರುಕು ಬುದ್ಧಿಯ ವಿರುದ್ಧ ಪಕ್ಷದ ಕಾರ್ಯಕರ್ತರೇ ತಿರುಗಿಬಿದ್ದರು. ಅದರ ಪರಿಣಾಮವೆಂಬಂತೆ ಎರಡು ಬಾರಿ ಹೀನಾಯವಾಗಿ ಸೋತು ಹೋದ.

ಚಿಮ್ಮನಕಟ್ಟಿ ಎಂದೂ ಕಾರ್ಯಕರ್ತರನ್ನು ಮಾತಾಡಿಸಲಿಲ್ಲ, ಇನ್ನು ಪಕ್ಷ ಕಟ್ಟುವ ಮಾತೆಲ್ಲಿಯದು? ಇಂಥ ಅರಿವುಗೇಡಿತನದಿಂದಾಗಿ ಈತನ ಕುಲಬಾಂಧವರೇ ಬಿಜೆಪಿಗೆ ಓಟುಹಾಕಲಾರಂಭಿಸಿದರು. ಮಾಜಿ ಕಲ್ಲಿದ್ದಲು ಸಚಿವ ಸಿದ್ದು ನ್ಯಾಮಗೌಡನು ತದನಂತರ ಕಾಂಗ್ರೆಸ್‌ನಲ್ಲಿ ಅನಾಥ ಶಿಶುವಿನಂತಾದವನು. ಈತನಿಗೆ ಒಂದಷ್ಟು ಜಾತಿ ರೋಗ ತಗುಲಿಕೊಂಡಿರುವ ಗುಮಾನಿಗಳಿವೆ. ತನ್ನ ಕುಲಬಾಂಧವ ಸಂಸದ ಪಿ.ಸಿ. ಗದ್ದಿ ಗೌಡನೊಂದಿಗೆ ಗುಪ್ತ್ ಗುಪ್ತ್ ಒಪ್ಪಂದ ಮಾಡಿಕೊಂಡಿರುವ ಸುದ್ದಿಗಳೂ ಆಗಾಗ ಕೇಳಿಬರುತ್ತದೆ. ಈ ಜಿಪಂ, ತಾಪಂ ಚುನಾವಣಾ ಸಂದರ್ಭದಲ್ಲಿ ಈತನ ಹಿಂದಿರುವ ಕಾರ್ಯಕರ್ತರೇ ಮೇಲ್ಕಂಡ ವಿಚಾರದ ಕುರಿತು ಬಹಿರಂಗ ಹೇಳಿಕೆ ನೀಡಿದ್ದರು. ಇದರಿಂದ ಸರಿಯಾಗಿ ಇಕ್ಕಿಸಿಕೊಂಡು ಕಾಂಗ್ರೆಸ್ ಅನ್ನು ಉಸಿರುಗಟ್ಟಿಸಿದ ನ್ಯಾಮಗೌಡನೀಗ ಸಕ್ಕರೆ ಫ್ಯಾಕ್ಟರಿಯಲ್ಲಿ ಬಿಜಿಯಾಗಿದ್ದಾನಂತೆ. ಆತ ಅದಕ್ಕೇ ಲಾಯಕ್ಕೆಂಬುದು ಖಂಡಿತಾ ಕುಹಕವಲ್ಲ.



ಮೇಲೆ ಹೇಳಿದ ಅಷ್ಟು ಉದಾಹರಣೆಗಳ ನಡುವೆಯೂ ನಿಜವಾಗಿಯೂ ಕಾಂಗ್ರೆಸ್ ಸತ್ತ ಸ್ಥಿತಿ ತಲುಪಿರುವುದಕ್ಕೆ ಕಾರಣವೇನು ಅಂತ ಹುಡುಕಹೊರಟರೆ, ಹುಲ್ಲಪ್ಪ ಮೇಟಿ ಎದುರುಗೊಳ್ಳುತ್ತಾನೆ. ಪದೇಪದೆ ಸಿದ್ಧರಾಮಯ್ಯನ ಹೆಸರು ಉಸುರುವ ಈತ ಅಖಂಡ ಉತ್ತರ ಕರ್ನಾಟಕದ ಅಘೋಷಿತ ಕುರುಬರ ನಾಯಕನೆಂದುಕೊಂಡು ಮೆರೆಯ ಹತ್ತಿದ್ದಾನೆ. ಹಿಂದೆ ಜನತಾದಳದಲ್ಲಿದ್ದ ಹುಲ್ಲಪ್ಪ ಮೇಟಿ ಇಡೀ ಪಕ್ಷವನ್ನೇ ಎಕ್ಕುಟ್ಟಿಸಿದ್ದ. ಈತ ಬಿಜೆಪಿಯೊಂದಿಗೆ ಡೀಲು ಕುದುರಿಸಿಕೊಂಡಿದ್ದೇ ಅದಕ್ಕೆ ಕಾರಣ. ನಂತರ ಕಾಂಗ್ರೆಸ್‌ಗೆ ಜಿಗಿದ ಮೇಟಿ ಅದೇ ಚಾಳಿ ಮುಂದುವರೆಸಿದ. ಕಳೆದ ಜಿಪಂ ತಾಪಂ ಚುನಾವಣೆಯಲ್ಲೂ ನಿರಾಣಿಯೊಂದಿಗೆ ಕೈಜೋಡಿಸಿ ಬಿಜೆಪಿ ಗೆಲುವಿಗೆ ಅವಿರತವಾಗಿ ಶ್ರಮಿಸಿದ್ದ.

ನಂಜಯ್ಯಮಠರಂಥ ಮುತ್ಸದ್ದಿಗಳನ್ನೂ ಮೂಲೆ ಗುಂಪಾಗಿಸಿ ಮೆರೆದಾಡುತ್ತಿರುವ ಈತ ಕುರುಬರ ಮತ ಹಾಗೂ ಸಿದ್ದುವಿನ ಬೆಂಬಲದಿಂದ ಮಂತ್ರಿಯಾಗುವ ಕನಸು ಕಾಣುತ್ತಿದ್ದಾನೆ. ಆದರೆ ಕಾಂಗ್ರೆಸ್ ಸತ್ತು ಮಲಗಿದೆ!

ಇನ್ನು ಪಕ್ಕಾ ಅಬ್ಬೇಪಾರಿಯೂ, ಮಹಾ ಜಿಪುಣಾಗ್ರೇಸರನೂ ಆಗಿರುವ ವಿಜಯಾನಂದನಿಗೆ ರಾಜಕಾರಣದ ಗಂಧಗಾ[ಳಿ] ಗೊತ್ತಿಲ್ಲ. ಸದಾ ಹುಡುಗರ ಗುಂಪು ಕಟ್ಟಿಕೊಂಡು ಓಡಾಡುತ್ತಾನಾದರೂ ಅವರಿಗೊಂದು ಕಪ್ಪು ಚಹಾ ಕು[ಡಿ]ಸಲೂ ಹಿಂದೆಮುಂದೆ ನೋಡುವವನೀತ. ಆದರೀಸಲ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿದೆಯೆಂದರೆ ಅದಕ್ಕೆ ಬಿಜೆಪಿ ಶಾಸಕ ದೊಡ್ಡನಗೌಡ ಪಾಟೀಲನ ದುರಾಡಳಿತ ಕಾರಣವೇ ಹೊರತು ವಿಜಯಾನಂದನ್ ಯೋಗ್ಯತೆಯಲ್ಲ. ಆದರೀತ ಆ ಗೆಲುವನ್ನು ತನ್ನದೆ ಅಂತ ಒದರಾಡುತ್ತಿದ್ದಾನೆ. ಕಾಂಗ್ರೆಸ್ ಸಂಘಟನೆಯತ್ತ ಕಿಂಚಿತ್ತೂ ಗಮನ ಹರಿಸುತ್ತಿಲ್ಲ.

ಬಾದಾಮಿಯ ಶಿವರಾಯ[ಪ್ಪ] ಜೋಗಿನ ಮಾತಲ್ಲೇ ಮಹಲು ಕಟ್ಟುವ ಜಾಯಮಾನದವನು. ರಾಹುಲ್ ಸೋನಿಯಾ ಅಂತಲೇ ಒದರಾಡುವ ಈತನಿಗೆ ಸ್ವಂತದ ಬುದ್ಧಿಯಾಗಲಿ, ದೂರದೃಷ್ಟಿಯಾಗಲೀ ಇಲ್ಲ. ಇದೀಗ ಕಾಂಗ್ರೆಸ್ ಜಿಲ್ಲಾಧ್ಯಕ್ಷನಾಗಿರುವ ಬಾಗವಾನನದ್ದು ತಟಸ್ಥ ಧೋರಣೆ. ಈತ ಸಾಯೋ ಹಂತ ತಲುಪಿರುವ ಕಾಂಗ್ರೆಸ್‌ಗೆ ಉಸಿರನ್ನೂ ನೀಡುತ್ತಿಲ್ಲ, ಕೊಲ್ಲೋ ಕೆಲಸವನ್ನೂ ಮಾಡುತ್ತಿಲ್ಲ! ಕುಂತಲ್ಲೇ ಸ್ವರ್ಗ ಕಾಣುವ ಜೆ.ಎನ್. ಪಾಟೀಲದ್ದೂ ಅದೇ ಕಥೆ. ಹಿಂದೆ ಬಾಗಲಕೋಟೆ ಶಹರ ಅಭಿವೃದ್ಧಿ ಅಧ್ಯಕ್ಷನಾಗಿದ್ದಾಗ ಗಡದ್ದಾಗಿ ಉಂಡಿರುವ ಈತ ಯಾವುದರ ಬಗೆಗೂ ತಲೆ ಕೆಡಿಸಿಕೊಳ್ಳದೆ ಜೀವಂತ ಶವದಂತೆ ಬಾಳ ಹತ್ತಿದ್ದಾನೆ.

ಮೇಲ್ಕಂಡ ಸ್ವಾರ್ಥಿ, ದುರ್ಬಲ ನಾಯಕರುಗಳ ನಡುವಲ್ಲೂ ಒಂದಿಷ್ಟು ಮಂದಿ ಸಮರ್ಥ ಅನ್ನಿಸುವಂಥವರಿದ್ದಾರೆ. ಆದರೆ ಕಾಂಗ್ರೆಸ್‌ನೊಳಗಿನ ದಗಲ್ಬಾಜಿಗಳ ದಂಡು ಅದನ್ನು ಕಸುವಾಗಿ ಬದಲಾಯಿಸಿಕೊಳ್ಳುವುದರ ಬದಲು ಕಸದಂತೆ ಕಾಲಡಿಹಾಕಿ ತುಳಿಯುವ ಯತ್ನ ನಡೆಸುತ್ತಿದೆ. ಆದರೆ ಮೇಲಂ ನೋಟಕ್ಕೆ ಸಮರ್ಥರಂತೆ ಕಾಣಿಸುವವರಲ್ಲೂ ಹಲವಾರು ಗುಣದೋಷಗಳಿರುವುದು ಸತ್ಯ.

ರಾಮಕೃಷ್ಣ ಹೆಗಡೆ ಕಾಲದಲ್ಲಿ ಕ್ರೀಡಾ ಸಚಿವನಾಗಿದ್ದ ಅಜಯ ಕುಮಾರ್ ಸರನಾಯಕ ಅಂಥವರು ಮೊದಲಿಗ. ಸ್ವಭಾವತಃ ಸಾಧುವೂ ಸಜ್ಜನೂ ಆದ ಈತನಿಗೆ ಜನಸ್ಪಂದನೆಯ ಕೊರತೆಯಿದೆ. ಚುನಾವಣಾ ಸಂದರ್ಭ ಹಾಗೂ ಕೆಲ ಕಾರ್ಯಕ್ರಮಗಳನ್ನು ಹೊರತುಪಡಿಸಿದರೆ ಜನರಿಗೆ ಸಿಗುವುದೇ ಅಪರೂಪ. ಪಕ್ಕಾ ಹೈಸ[ಾ] ಸಂಸ್ಕೃತಿಯ ಈತ. ಶ್ರಮದ ಕೊರತೆಯೂ ಇದೆ. ಆದರೂ ಈತ ದುಷ್ಟನಲ್ಲ. ಇನ್ನು ಜೆ.ಟಿ.ಪಾಟೀಲ್‌ಗೆ ಯುವಕ[ರ] ಉತ್ಸಾಹವಿದೆ. ಜವಾಬ್ದಾರಿ ನಿಭಾಯಿಸುವ ತಾಕತ್ತೂ ಇದೆ. ಆದರೆ ಈತ ಹೆಚ್.ಕೆ.ಪಾಟೀಲ್ ಸಂಬಂಧಿಯೆನ್ನುವ ಕಾರಣದಿಂದ ಕೆಲಮಂದಿ ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದ್ದಾರೆ. ವಾಸ್ತವವಾಗಿ ಈತ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷಗಾದಿಗೆ ಅರ್ಹರಾಗಿದ್ದವರು. ಆದಾಗಿದ್ದರೆ ಕಾಂಗ್ರೆಸ್ ಈ ರೀತಿ ಚಿಂತಾಜನಕ ಸ್ಥಿತಿ ತಲುಪುತ್ತಿರಲಿಲ್ಲ ಎಂಬುದಕ್ಕೆ ಖುದ್ದು ಕಾಂಗ್ರೆಸ್ ಕಾರ್ಯ ಕರ್ತರೇ ಸಹಮತ ಸೂಚಿಸುತ್ತಾರೆ.

ಇನ್ನು ಪರಿಷತ್ ಸದಸ್ಯ ಎಸ್.ಆರ್. ಪಾಟೀಲ ಕೂಡಾ ಸಚ್ಚಾರಿತ್ರ್ಯದಿಂದಲೇ ಎದುರಾಳಿಗಳಿಗೆ ಭ[ಯ] ಕೊಡಬಲ್ಲವರು. ಒಳ್ಳೆಯ ಕೆಲಸಗಾರರೂ ಹೌದು. ಇಂಥವರಿಗೆ ಜವಾಬ್ದಾರಿ ನೀಡಿದರೆ ಕಾಂಗ್ರೆಸ್ ಒಂದಷ್ಟು ನಿರಾಳವಾಗಿ ಉಸಿರಾಡೀತು.

ಆದರೆ ಖದೀಮ ನಾಯಕರುಗಳು ಈ ಕ್ಷಣಕ್ಕೂ ಕಾಂಗ್ರೆಸ್ ಶವಪೆಟ್ಟಿಗೆಗೆ ಮೊಳೆ ಜಡಿಯುವ ಕಾರ್ಯದಲ್ಲಿ ಬ್ಯುಸಿಯಾಗಿದ್ದಾರೆ. ಕೊನೇ ಮೊಳೆ ನಾಟುವ ಮೊದಲು ರಾಜ್ಯ ನಾಯಕರು ಎಚ್ಚೆತ್ತುಕೊಳ್ಳದಿದ್ದರೆ ಬಾಗಲಕೋಟೆಯಲ್ಲಿ ಕಾಂಗ್ರೆಸ್ ಹೇಳಹೆಸರಿಲ್ಲದಂತಾಗುವುದು ಖಂಡಿತ.

• ಮೇಘರಾಜ್


ಉಡುಪಿ ಜೈಲಲ್ಲಿ ಪೋಲೀಸ್ ಪಾತಕ! ರೌಡಿ ಶೆಟ್ಟಿಗಾರ್‌ನ ಕಾರಾಗೃಹದಲ್ಲೇ ಕೊಲ್ಲಿಸಿದ ಪಾತಕಿ ಪಿಟ್ಟಿ!!

ವಿಭಜಿತ ದಕ್ಷಿಣ ಕನ್ನಡದ ಸೆರೆಮನೆಗಳು ಪ್ರಭಾವಿ ಳ ಪಾಲಿನ ಅರಮನೆಗಳಾ? ಇಂಥಾದೊಂದು ಶ್ನೆಗೆ ಉಡುಪಿ ಜಿಲ್ಲಾ ಜೈಲಲ್ಲಾಗಿರುವ ರೌಡಿಯೊಬ್ಬನ ಕೊಲೆ 'ಹೌದು' ಎಂಬ ಪಕ್ಕಾ ಉತ್ತರ ಕೊಟ್ಟುಬಿಟ್ಟದೆ!

ಉಡುಪಿ ಮತ್ತು ದಕ್ಷಿಣ ಕನ್ನಡದ ಕಾರಾಗೃಹದ ಭ್ರಷ್ಟ ಮುಕ ಅಧಿಕಾರಿಗಳು ಅಥವಾ ಪೊಲೀಸರು ತಮ ಗೆ ಕಾಸು ಕೊಡದ ಕೈದಿಗಳನ್ನು ನಿಷ್ಠ ಖತರ್‌ನಾಕ್ ಗಳಿಂದಲೇ ಹಣಿಸುವುದು, ಹಿಂಸಿಸುವುದು, ರಕ್ತ ಹರಿಸುವುದು ಮಾಮೂಲಿ ಜೈಲ್ ಪ್ರೊಸಿಜರ್ ತಾಗಿದೆ. ಪಾಪಿ ಪೊಲೀಸರ ಕುಮ್ಮಕ್ಕಿನಿಂದಲೇ ಉಡುಪಿಯ ಹಿರಿಯಡ್ಕದ ಜೈಲಲ್ಲಿ ಪುರಾತನ ಪಾತಕಿಗಳಾದ ವಿನೋದ್ ಶೆಟ್ಟಿಗಾರ್ ಮತ್ತವನ ಪಿಟ್ಟಿ ನಾಗೇಶನ ಗ್ಯಾಂಗ್‌ಗಳ ಮಧ್ಯೆ ಕಾಳಗ ತೋಗಿದೆ. ಜೈಲು ಅಧಿಕಾರಿಗಳ ಎದುರೇ ನಾಧೀನ ಪಾತಕಿ ವಿನೋದ್ ಶೆಟ್ಟಿಗಾರ್ ಸಹ ಚೂರಿ ದಾಳಿಗೆ ಬರ್ಬರವಾಗಿ ಹತನಾಗಿ ದ್ದಾನೆ.

ಶೆಟ್ಟಿಗಾರ್ ನಿಖಾಲಿ!

ಡಿ ವಿನೋದ್ ಶೆಟ್ಟಿಗಾರ್ ಎದುರಾಳಿ ಪಾತಕಿ ನಾಗೇಶ್‌ನ ಕೊಲೆಗೆ ವಿಫಲ ಪ್ರಯತ್ನ ನಡೆಸಿ ಕಳೆದ ತಿಂಗಳಿಂದ ಈ ಜೈಲು ಪಾಲಾಗಿದ್ದ. ಅಲ್ಲಾತ ಅಧಿಕಾರಿ ಅಂಬೇಕರ್ ಎಂಬ ಖಾಕಿ ಗೂಂಡಾನ ಲುಗೆಯನ್ನು ಹಣ-ಹೆಂಡ ಚೆಲ್ಲಿಯೇ ಸಂಪಾದಿಸಿ



ವಿಪರೀತ ಹಿಂಸೆ ಕೊಡಲು ಶುರುಮಾಡಿದ್ದ. ಅವರು ಕುಂತರೂ ಕಾಡುತ್ತಿದ್ದ. ನಿಂತರೂ ಸತಾಯಿಸುತ್ತಿದ್ದ. ಈ ನಾಲ್ವರು ಶೆಟ್ಟಿಗಾರ್‌ನ ಮೇಲೆ ತಿರುಗಿ ಬೀಳುವಂತೆ ನಾಜೂಕಾಗಿ ಜೈಲು ಅಧಿಕಾರಿಗಳು ನೋಡಿಕೊಂಡಿದ್ದರು. ಜೈಲೊಳಗಿದ್ದ ಶೆಟ್ಟಿಗಾರ್‌ಗಿಂತ ಹೊರಗಿದ್ದ ಆತನ ನೆತ್ತರಿಗಾಗಿ ತಹತಹಿಸುತ್ತಿದ್ದ ವೈರಿ ಪಿಟ್ಟಿ ನಾಗೇಶನೇ ಹೆಚ್ಚು ಖಾಸಾ ಆದ್ಮಿಯಾಗಿದ್ದ ಪೊಲೀಸರಿಗೆ ಮತ್ತು ಜೈಲು ಅಧಿಕಾರಿಗಳಿಗೆ.


ಜೈಲು ಅಧಿಕಾರಿಗಳ ಪಾತಕ ಸ್ಕೆಚ್ ರೌಡಿಗಳ ಲೆಕ್ಕಚುಕ್ತಾ

ಜೈಲು ಪಾಲಾಗಿದ್ದ ಚೂರಿ ಜೈಲೊಳಗೆ ಸೇರಿಸಿದ್ದು ಶೀಲಾಳೇ ಎನ್ನುತ್ತಾರೆ ಪೊಲೀಸರು. ಪೊಲೀಸರಿಗೆ ಶೀಲಾ ಜೈಲು ಕರ್ಮಕಾಂಡದ ಬಗ್ಗೆ ಪತ್ರಿಕಾಗೋಷ್ಠಿ ಕರೆದು ವಿವರಿಸಿದ್ದಕ್ಕೆ ಸಿಟ್ಟಿದೆ.

ಒಟ್ಟಾರೆ ಚೂರಿ ಜೈಲು ಸೇರಿದ್ದು ಪೊಲೀಸರಿಗೆ-ಜೈಲರ್‌ಗಳಿಗೆ ಗೊತ್ತಿತ್ತು, ಆ ಅಸ್ತ್ರ ಸರಬರಾಜು ಜೈಲು ಅಧಿಕಾರಿಗಳ ನೆರವಿನಿಂದಲೇ ನಡೆದಿದೆ ಎಂಬುದು ನಿಸ್ಸಂಶಯ. ಆದರೆ ಒಳಗೊಯ್ದು ಶೆಟ್ಟಿಗಾರ್‌ನ ಎದುರಾಳಿಗಳ ಕೈಗೆ ಕೊಟ್ಟಿದ್ದು ಶೀಲಾಳೋ? ಸಿಮ್ರಾನೋ? ಯಾರೇ ಜೈಲೊಳಗೆ ಮುಟ್ಟಿಸಿದ್ದರೂ ಅದನ್ನು ಕಳಿಸಿದ್ದು ಮಾತ್ರ ಪಾತಕಿ ಪಿಟ್ಟಿ ನಾಗೇಶನೇ!

ಶೆಟ್ಟಿಗಾರ್ V/s ಪಿಟ್ಟಿ

ಪರಮಶತ್ರುಗಳಾದ ಪಿಟ್ಟಿನಾಗೇಶ್ ಮತ್ತು ವಿನೋದ್ ಶೆಟ್ಟಿಗಾರ್ ಉಡುಪಿ ಬೀದಿಯ ಪುಡಿ ರೌಡಿಗಳಾದರೂ ಅನಾಹುತಕಾರಿ ಭೂಗತ ಪಾತಕಿಗಳ ಬಲಗೈ ಬಂಟರು. ವಿನೋದ್ ಶೆಟ್ಟಿಗಾರ್ ಭೂಗತ ಪಾತಕಿ ರವಿ ಪೂಜಾರಿ ಸಹಚರನಾದರೆ, ಪಿಟ್ಟಿ ನಾಗೇಶ ಯತೀಶ್ ಶೆಟ್ಟಿ, ಶ್ರೀಕರ ಶೆಟ್ಟಿ ಗ್ಯಾಂಗ್‌ಸ್ಟರ್ ಆಗಿದ್ದ! ಉಡುಪಿಯ ಪಾತಕ ಲೋಕದ ಅಧಿಪತ್ಯಕ್ಕಾಗಿ ಈ ರೌಡಿಗಳ ಗ್ಯಾಂಗ್ ನಡುವೆ ಆಗಾಗ ಕಾಳಗ ನಡೆಯುತ್ತಲೇ ಇತ್ತು. ಶೆಟ್ಟಿಗಾರ್‌ನ ಅಕೌಂಟನಲ್ಲಿ ಆರೆಂಟು ಕ್ರಿಮಿನಲ್ ಕೇಸ್ ಇತ್ತು, ಅಷ್ಟೇ ಸಾಧನೆ ಪಿಟ್ಟಿಯದ್ದಾಗಿತ್ತು.



ರಿಯಾಜ್-ಮುತ್ತಪ್ಪ

ತಿಂಗಳ ಹಿಂದೆ ಉಡುಪಿಯ ಸೆಂದೂರುಕಟ್ಟೆಯ ಬಾರ್ ಒಂದರಲ್ಲಿ ತನ್ನ ತಂಡದೊಂದಿಗೆ ಪಿಟ್ಟಿ ಪಡೆ ಮೇಲೆರಗಿದ್ದ. ಆಗ ದೊಡ್ಡ ಮಾರಾಮಾರಿಯೇ ಆಗಿ ರೌಡಿಗಳು ಕಾರಾಗೃಹ ಸೇರಿದ್ದರು. ಹೊರಬಿದ್ದ ನಂತರ ಈ ಸೇಡು ತೀರಿಸಿಕೊಳ್ಳಲು ತಹತಹಿಸುತ್ತಿದ್ದ. ಶೆಟ್ಟಿಗಾರ್ ಕುಕ್ಕಿಕಟ್ಟೆ ರೌಡಿ ಪಿಟ್ಟಿ ನಾಗೇಶನನ್ನು ಡಯಾನಾ ಟಾಕೀಸ್ ಹತ್ತಿರದ ಆತನ ಮನೆ ಸಮೀಪವೇ ಕೊಂದುಹಾಕಲು ಪ್ರಯತ್ನಿಸಿದ್ದ. ಮಾರಣಾಂತಿಕ ಹಲ್ಲೆಗೀಡಾಗಿದ್ದ ಪಿಟ್ಟಿ ತಿಂಗಳುಗಟ್ಟಲೇ ಸಾವು-ಬದುಕಿನ ನಡುವೆ ಹೊಯ್ದಾಡಿದ್ದ. ಸಂಪೂರ್ಣ ಚೇತರಿಸಿಕೊಂಡು ಮತ್ತೆ ಫೀಲ್ಡಿಗೆ ಇಳಿದು ಮುಯ್ಯಿ ತೀರಿಸಿಕೊಳ್ಳಲು ಭೂಗತ ಲೆಕ್ಕಾಚಾರ ಹಾಕುತ್ತಲೇ ಇದ್ದ. ಪಿಟ್ಟಿ ಕೊಲೆ ಕೇಸಲ್ಲಿ ಶೆಟ್ಟಿಗಾರ್ ತನ್ನನ್ನೂ ಏಳು ಸಹಚರರೊಂದಿಗೆ ಹಿರಿಯಡ್ಕದ ಜಿಲ್ಲಾ ಜೈಲೆಂಬ 'ಸ್ವರ್ಗ' ಸೇರಿದ್ದ!! ಜಾಮೀನು ಪಡೆದು ಹೊರಬರುವ ತಯಾರಿಯಲ್ಲಿದ್ದ ಶೆಟ್ಟಿಗಾರ್ ತನ್ನ ಉಳಿಸಲಾರ ನೆಂಬುದು ಪಿಟ್ಟಿಗೆ ಖಾತ್ರಿಯಾಗಿತ್ತು. ವೈರಿಯನ್ನು ಜೈಲಲ್ಲೇ ಸುಲಭವಾಗಿ ಮುಗಿಸಬಹುದೆಂದು ತೀರ್ಮಾನಿಸಿದ್ದ ಪಿಟ್ಟಿ ಕಾರಾಗೃಹದ ಅಧಿಕಾರಿಗಳು, ಪೊಲೀಸರು ಮತ್ತು ಶೆಟ್ಟಿಗಾರ್‌ನ ಎದುರು ಹಾಕಿಕೊಂಡಿದ್ದ ಕೈದಿಗಳನ್ನೆಲ್ಲ ಬಳಸಿ ಕೊಂಡು ಹತ್ಯೆಯನ್ನು ಕರಾರುವಾಕ್ಕಾಗಿ ಮುಗಿಸಿಬಿಟ್ಟದ್ದಾನೆ!!

ರೌಡಿ ಶೆಟ್ಟಿಗಾರ್ ಹತ್ಯೆ ಪಾತಕ ಲೋಕದಲ್ಲಿ ಸಣ್ಣ ತಲ್ಲಣವನ್ನಷ್ಟೇ ಮೂಡಿಸಿದೆ. ಆದರೆ ದೊಡ್ಡ ಅಲ್ಲೋಲ ಕಲ್ಲೋಲವನ್ನು ಪೊಲೀಸ್ ಮತ್ತು ನಾಗರಿಕ ಸಮಾಜದಲ್ಲಿ ಮೂಡಿಸಿದೆ. ಉಡುಪಿ-ಮಂಗಳೂರಿನ ಜೈಲುಗಳು ಕ್ರಿಮಿನಲ್‌ಗಳ ಆಡಂಬೋಲದಂತಾಗಿರುವ ಬಗ್ಗೆ ಚರ್ಚೆಗಳು ಭುಗಿಲೆದ್ದಿವೆ. ಜೈಲರ್‌ಗಳ-ಪೊಲೀಸರ ಧನ ದಾಹ ನೆತ್ತರು ದಾಹದಿಂದ ಜೈಲುಗಳಲ್ಲಿ ಜೀವಕ್ಕೆ ಯಾವ ಬೆಲೆ-ಭದ್ರತೆಯೂ ಇಲ್ಲದಾಗಿದೆ. ಈ ಹರಾಮಿ-ಹೊಣೆಗೇಡಿ ಪೊಲೀಸ್ ಅಧಿಕಾರಿಗಳ ಮೇಲೆ ಹಿರಿಯ ಅಧಿಕಾರಿಗಳಾದ ಎಸ್ಪಿ, ಪೊಲೀಸ್ ಕಮೀಷನರ್, ಜೈಲ್ ಅಧಿಕಾರಿಗಳಿಗೆ ಹಿಡಿತವೇ ಇಲ್ಲ ಎಂಬುದು ಸಾಬೀತಾಗಿದೆ.

ವಿಪರ್ಯಾಸ ನೋಡಿ ಈ ಭೀಭತ್ಸ ಹತ್ಯೆ- ಪೊಲೀಸ್ ಪಾತಕದ ಗಡಿಬಿಡಿಯಲ್ಲೇ ಲಂಚದ ಆರೋಪದಲ್ಲಿ ಜೈಲು ಸೇರಿದ್ದ ಮಂಗಳೂರು ಜೈಲರ್ ತಿಮ್ಮಪ್ಪ ನಾಯ್ಕ್ ಜಾಮೀನು ಪಡೆದು ಯಥಾಸ್ಥಾನ ತಲುಪಿದ್ದಾನೆ! ಈಗ ಹೇಳಿ ಪಾಪಿ ಪೊಲೀಸ್ ಅಧಿಕಾರಿಗಳ-ಜೈಲರ್‌ಗಳ ಲೇವಾದೇವಿ ಅಡ್ಡೆ ಯಂತಾಗಿರುವ ಕರಾವಳಿ ಜೈಲುಗಳು ವಧಾಸ್ಥಾನವಾಗದೇ ಇನ್ನೇನಾಗಲು ಸಾಧ್ಯ? ಮಾನವ ಹಕ್ಕು ಆಯೋಗ-ಮಾನವ ಹಕ್ಕು ಹೋರಾಟಗಾರರು ಇತ್ತ ಗಮನಹರಿಸುವಿರಾ? ಈ ಬೇವರ್ಸಿ ಅಧಿಕಾರಿಗಳಿಗೆ ಅಂಕುಶವಿಡುವವರ್‍ಯಾರು?

ನ್ದ. ಜೈಲರ್ ಸಾಹೇಬರ ಚೆಡ್ಡಿ ದೋಸ್ತ್‌ನಂತಾಗಿ ದ್ದ. ಸಾಹೇಬರಿಗೆ ಕಾಸುಕೊಟ್ಟು ಬೇಕುಬೇಕಾದ್ದು ಜು ಮಾಡಿಸಿಕೊಂಡು ಹಾಯಾಗಿದ್ದ. ಜೈಲರ್ ಜೈಲಿಗೆ ಸಂಬಂಧಿಸಿದ ಪೊಲೀಸರ ಕಿರುಕುಳ, ಬಗ್ಗೆ ಕೈದಿ ಯಾರಾದರೂ ಕಿಮಕ್-ಕಮಕ್ ಎಂದರೂ ಶೆಟ್ಟಿಗಾರ್ ಅವರ ಮೇಲೆರಗಿ ಸಾಹೇಬರಿಗೆ ನೆರವಾ ಅದಕ್ಕೆ ಪ್ರತಿಫಲವಾಗಿ ಜೈಲಲ್ಲೇ ಕುಳಿತು ಅಂಡರ್ ನಂಧೆಯನ್ನು ಸಾಂಗೋಪಾಂಗವಾಗಿ ಮುಂದುವರೆಸಿ ದ್ದ.

ಥ ಖತರ್‌ನಾಕ್ ಕಾರ್ಯಾಚರಣೆಯ ಶೆಟ್ಟಿಗಾರ್ ಗಳಾದ ಶೇಖ್ ರಿಯಾಜ್, ಮುತ್ತಪ್ಪ, ಆತನ ನಾಗರಾಜ್ ಮತ್ತು ಶರಣಪ್ಪ ಅಮರಾಪುರ ಎಂಬು ನ್ನುಬಿದ್ದು ಕಾಡತೊಡಗಿದ್ದ ಈ ಕಿರುಕುಳಕ್ಕೆ ಕಾರಣವೂ ನಾಲ್ವರು ಕೈದಿಗಳು ಮತ್ತು ಮುತ್ತಪ್ಪನ ಹೆಂಡತಿ ತ್ತೀಚೆಗಷ್ಟೇ ಮಾಧ್ಯಮದವರ ಮುಂದೆ ಜೈಲ್ ಎಂಡ ಎತ್ತಿಯಾಡಿದ್ದರು. ಜೈಲರ್ ಅಂಬೇಕರ್ ಪೀಡಿಸುತ್ತಾನೆ. ಜೈಲು ಅವ್ಯವಸ್ಥೆಯ ಆಗರ ನೇರಾನೇರ ಆರೋಪಿಸಿದ್ದರು. ಅಷ್ಟೇ ಅಲ್ಲ, ನ್ಯಾಯಾ ಲಕ್ಕೂ ದೂರುವುದಾಗಿ ದಮಕಿ ಬೇರೆ ಹಾಕಿದ್ದರು. ಜರಿಂದ ಜೈಲರ್ ಅಂಬೇಕರ್ ಮತ್ತಿತರ ಜೈಲು ಗಳು, ಪೊಲೀಸರು ಕೆರಳಿ ಕೆಂಡವಾಗಿದ್ದರು. ಈ ಬಾಯಿ ಮುಚ್ಚಿಸಲು ಒಳಗಿನ ರೌಡಿ ವಿನೋದ್ ನ ಛೂಬಿಟ್ಟಿದ್ದರು. ಶೆಟ್ಟಿಗಾರ್ ಜೈಲು ಗಳ ಮೇಲೆ ಆರೋಪ ಹೊರಿಸಿದ ಕೈದಿಗಳಿಗೆ



ಶೀಲಾ ಬಳೆಗಾರ್


ಸೇಡಿಗಿಂತಲೂ ಕೀಳಾಗಿತ್ತು. ಪೊಲೀಸರ ಕುಮ್ಮಕ್ಕಿನಿಂದ ಪ್ರಚೋದಿತರಾಗಿದ್ದ ಕೈದಿ ಮುತ್ತಪ್ಪ ನಾಗರಾಜ್, ರಿಯಾಜ್ ಮತ್ತು ಶರಣಪ್ಪ ತಮಗೆ ತ್ರಾಸು ಕೊಡುತ್ತಿದ್ದ ರೌಡಿ ವಿನೋದ್ ಶೆಟ್ಟಿಗಾರ್‌ನ ಮೇಲೆರಗಿ ಕೊಂದೇ ಹಾಕಿಬಿಟ್ಟರು!!

ಚೂರಿ ಎಲ್ಲಿಂದ ಬಂತು?

ಒಂದಲ್ಲ, ಎರಡಲ್ಲ; ಬರೋಬ್ಬರಿ ನಾಲ್ಕು ಚೂರಿ ಜೈಲೊಳಗೆ ಸೇರಿಕೊಂಡಿತ್ತು, ನಾಲ್ವರ ಕೈಯಲ್ಲೂ ಒಂದೊಂದು ಚೂರಿ ಇತ್ತು. ಈ ದೊಡ್ಡಗಾತ್ರದ ಚೂರಿ ಯಿಂದ ಮುತ್ತಪ್ಪನ ತಂಡ ಬರೋಬ್ಬರಿ ಹನ್ನೆರಡು ಕಡೆ ಶೆಟ್ಟಿಗಾರ್‌ನ ಇರಿದು ಕೊಂದಿದೆ. ಈ ಚೂರಿಗಳು ಜೈಲು ಅಧಿಕಾರಿಗಳ ಸಹಕಾರ ಇಲ್ಲದೆ ಒಳ ಸೇರಿಕೊಳ್ಳಲು ಸಾಧ್ಯವೇ ಇಲ್ಲ. ವೈರಿ ಶೆಟ್ಟಿಗಾರ್‌ನ ವಿರುದ್ಧ ಮುತ್ತಪ್ಪನ ಸಹಚರರು ಜೈಲಲ್ಲಿ ತಿರುಗಿ ಬಿದ್ದಿದ್ದನ್ನು ಪಿಟ್ಟಿ ನಾಗೇಶ್‌ಗೆ ಜೈಲು ಅಧಿಕಾರಿಗಳಿಂದ ಗೊತ್ತಾಗಿತ್ತು. ಇದನ್ನು ಶೆಟ್ಟಿಗಾರ್‌ನ ಮುಗಿ ಸಲು ಆತ ಬಳಸಿಕೊಂಡು ಹತ್ಯೆಗೆ ಮುಹೂರ್ತವಿಟ್ಟಿದ್ದಾನೆ.

ಒಂದು ಮೂಲದ ಪ್ರಕಾರ, ಧಾಡಸಿ ಹೆಣ್ಣಾದ ಕೈದಿ ಮುತ್ತಪ್ಪನ ಹೆಂಡತಿ ಶೀಲಾ ಬಳೆಗಾರ್‌ಳನ್ನು ಪಿಟ್ಟಿ ನಾಗೇಶ್ ತನ್ನ ಕೊಲೆಗಡುಕ ಕೆಲಸಕ್ಕೆ ಬಳಸಿಕೊಂಡಿದ್ದಾನೆ. ಆಕೆಗೆ ದೊಡ್ಡ ಮೊತ್ತದ ಆಸೆ ಹುಟ್ಟಿಸಿ ಚೂರಿಗಳನ್ನು ಜೈಲೊಳಗೆ ಸಾಗಿಸಿದ್ದಾನೆ. ಶೀಲಾ ತನ್ನ ಮಗಳ ಹುಟ್ಟುಹಬ್ಬದ ನೆಪದಲ್ಲಿ ಕೆಲವು ದಿನಗಳ ಹಿಂದೆ ದೈತ್ಯ ಕೇಕ್ ಒಂದನ್ನು ಜೈಲಿಗೆ ಗಂಡನಿಗೆ ಕೊಡಲೆಂದು ಒಯ್ದಿದ್ದಳಂತೆ. ಅದರಲ್ಲೇ ನಾಲ್ಕು ಚಾಕು ಅಡಗಿತ್ತೆಂಬುದು ರೌಡಿ-ಪೊಲೀಸ್ ಲೋಕಗಳೆರಡರ ತರ್ಕ. ಆದರೆ ಶೀಲಾ ಇದನ್ನು ತನ್ನ ವಾರಗಿತ್ತಿ ಸಿಮ್ರಾನ್ ಮೇಲೆ ಹಾಕುತ್ತಿದ್ದಾಳೆ. ಆಕೆಯ ಗಂಡ ಮುತ್ತಪ್ಪನ ಜತೆ ಜೈಲಲ್ಲಿ ಮೈದುನ ನಾಗರಾಜನೂ ಇದ್ದಾನೆ. ಈತ ಭಟ್ಕಳದ ಸಿಮ್ರಾನ್ ಎಂಬ ಸಾಬರ ಹುಡುಗಿಯನ್ನು ಮದುವೆ ಯಾಗಿದ್ದಾನೆ. ಆಕೆ ದಢೂತಿ ಆಕಾರದವಳು. ಇಂಥ ದೊಡ್ಡ ದೇಹದ ಹೆಣ್ಣೊಂದು ಕೆಲ ದಿನಗಳ ಹಿಂದೆ ಜೈಲಿಗೆ ಹೋಗಿದ್ದಳೆಂದೂ, ಆಕೆಯೇ ಸಿಮ್ರಾನ್ ಎಂದೂ, ಈ ಸಿಮ್ರಾನ್‌ಳೇ ಗಂಡನ ಕೈಗೆ ಚಾಕು ಕೊಟ್ಟು ಬಂದಿದ್ದಾಳೆಂದು ಶೀಲಾ ಬಳೆಗಾರ್ ಹೇಳುತ್ತಿದ್ದಾಳೆ.

ಶೀಲಾ ತುಂಬ ಚಾಲಾಕಿ ಹೆಣ್ಣು, ಸಾಗರ ಮೂಲದ ಈಕೆ ಆಂಧ್ರದಲ್ಲಿ ಪೊಲೀಸ್ ಇಲಾಖೆಯಲ್ಲಿದ್ದಳು. ಗಂಡನ ಕಳ್ಳತನ-ಪುಂಡತನ ಆಕೆಯ ಉದ್ಯೋಗಕ್ಕೆ ಕುತ್ತು ತಂದಿತ್ತು. ಆ ಬಳಿಕ ಮೈಸೂರು ಮೂಲದ ಮುತ್ತಪ್ಪ ಸೆಂಟ್ರಿಂಗ್ ಕೆಲಸ, ಬಾವಿ, ರಿಂಗ್ ತಯಾರಿಕೆ ನಡೆಸುತ್ತ ಬ್ರಹ್ಮಾವರಕ್ಕೆ ಬಂದು ನಿಂತಿದ್ದ, ಆದರೆ ಹಿಂದಿನ ಖದೀಮತನ-ಕ್ರಿಮಿನಲ್ ಕಾರ್ಯಾಚರಣೆ ಚಾಳಿ ಮಾತ್ರ ಬಿಟ್ಟಿರಲಿಲ್ಲ, ಹೀಗೆ ಉಡುಪಿ



ಉಡುಪಿಯ ಕುಕ್ಕೆಕಟ್ಟೆಯ ಶಿಕ್ಷಕ ಮನೋಹರನನ್ನು ೯೯ರಲ್ಲಿ ಶೆಟ್ಟಿಗಾರ್-ಪೀಫಿ ದಿನೇಶ್ ತಂಡ ತಲವಾರಿಂದ ಕೊಚ್ಚಿಕೊಂದು ಹಾಕಿತ್ತು. ಗುರುವನ್ನೇ ಕೊಲ್ಲುವ ಮೂಲಕ ಪಾತಕ ಲೋಕದ ಎಂಟ್ರಿ ಪಡೆದಿದ್ದ ಶೆಟ್ಟಿಗಾರ್ ಈ ಕೇಸಲ್ಲಿ ಖುಲಾಸೆಯೂಗೊಂಡಿದ್ದ. ಆ ಬಳಿಕ ಆತನ ರಕ್ತದಾಹದ ಆಟಾಟೋಪ ಜೋರಾಗಿಹೋಯ್ತು. ಹಲವು ಕ್ರಿಮಿನಲ್ ಪಾತಕಗಳ ಕ್ರಿಮಿ ವಾಮಂಜೂರು ರೋಹಿಯನ್ನು ನಾಲ್ಕು ವರ್ಷದ ಹಿಂದೆ ಮೈಸೂರು ಜೈಲಿಂದ ಮಂಗ ಳೂರಿಗೆ ಕರೆತಂದಾಗ ಆತನ ಎಸ್ಕೇಪ್‌ಗೆ ಶೆಟ್ಟಿಗಾರ್ ಸ್ಕೆಚ್ ಹಾಕಿ ವಿಫಲ ಯತ್ನ ಮಾಡಿದ್ದ. ಶೆಟ್ಟಿಗಾರ್-ಶಕ್ತಿವೇಲು ಪೊಲೀಸರ ಮೇಲೆ ಮಂಗಳೂರಿನ ಪಿವಿಎಸ್ ಸರ್ಕಲ್ ಬಳಿ ಹಲ್ಲೆ ಮಾಡಿ ವಾಮಂಜೂರು ರೋಹಿಯನ್ನು ಮುಕ್ತಿಗೊಳಿಸಲು ಹವಣಿಸಿ ಜೈಲು ಪಾಲಾಗಿದ್ದರು.

ಜಾಮೀನು ಮೇಲೆ ಹೊರಗಿದ್ದ ಶೆಟ್ಟಿಗಾರ್ ಐದು

• ನಹುಶ

ಸೆರೆಮನೆಯಾ? ಅರಮನೆಯಾ?

ಕರಾವಳಿಯ ಜೈಲುಗಳಲ್ಲಿ ಜೈಲರ್ ಪೊಲೀಸ್ ದುಷ್ಟಕೂಟ ತಮ್ಮ ಲಾಭಕ್ಕೆ ಕೈದಿ-ಕೈದಿಗಳನ್ನೇ ಎತ್ತಿಕಟ್ಟಿ ರಕ್ತಪಾತ ಮಾಡಿಸುತ್ತ ಚೆಂದ ನೋಡುತ್ತಿದೆ. ಕೈದಿಗಳು ಹೊಡೆದಾಡಿ ಸಾಯಲಿ ಎಂಬಂಥ ಮನಃಸ್ಥಿತಿ ಈ ನೀಚ ಅಧಿಕಾರಿಗಳದು. ಅಶಾಂತಿಗೆ ಪೂರಕ ವಾತಾವರಣ ಸೃಷ್ಟಿಸುವುದರಲ್ಲಿ ಸ್ಥಳೀಯ ಪೊಲೀಸರು ನಿಸ್ಸೀಮರು. ಕರಾವಳಿ ಜೈಲುಗಳಲ್ಲಿ ಭ್ರಷ್ಟಾಚಾರದಷ್ಟೇ ಬಿರುಸಾಗಿ ಮತಾಂಧತೆಯೂ ಬೇರೂರಿದೆ!


ಮಂಗಳೂರು ಜೈಲಲ್ಲಿ ಮತಾಂಧ ಕುಸ್ತಿಗಳು ಸಾಕಷ್ಟು ನಡೆದಿದೆ. ಭಜರಂಗಿ, ಹಿಂಜಾವೇ ರೌಡಿಗಳು ಯಾವ್ಯಾವುದೋ ಕ್ರಿಮಿನಲ್-ಕಮ್ಯೂನಲ್ ಪಾತಕಮಾಡಿ ಜೈಲು ಪಾಲಾದಾಗ ಅಲ್ಲಿರುವ ಮುಸ್ಲಿಂ-ಕ್ರಿಶ್ಚಿಯನ್ ಕೈದಿಗಳ ಮೇಲೆ ವಿನಾಕಾರಣ ಕಾಲು ಕೆರೆದು ಹೊಡೆದಾಡಿದ ಘಟನೆಗಳು ಒಂದೆರಡಲ್ಲ, ಮತಾಂಧ ಜೈಲು ಸಿಬ್ಬಂದಿ ಇದಕ್ಕೆ ಕುಮ್ಮಕ್ಕು ಕೊಟ್ಟಿದೆ. ಅಥವಾ ಭಾನ್ಗಡಿ ನಡೆದಾಗ ಹೊಣೆಗೇಡಿತನದಿಂದ ಕಣ್ಮುಚ್ಚಿ ಕುಂತಿದೆ. ಈ ಜೈಲ್ ಪಾತಕ ಎಷ್ಟರಮಟ್ಟಿಗೆ ಹೋಗಿದೆಯೆಂದರೆ, ಆಡಳಿತ ವರ್ಗದ ರಾಜಕಾರಣಿಗಳಿಗೆ, ದೊಡ್ಡ ಪೊಲೀಸ್ ಅಧಿಕಾರಿಗೆ ಬೇಡದವರನ್ನು ಕೈದಿಗಳಿಂದ ಹೊಡೆಸಿ ಕೊಂದು ಹಾಕುವ ಹಂತಕ್ಕೆ ತಲುಪಿದೆ ಆಕಸ್ಮಾತ್ ಸತ್ತರೆ ಕೈದಿಗಳ ಕಾಳಗವೆಂದು ಕ್ಲೈಮ್ ಮಾಡಿ ಬಚಾವಾಗುವ ದೂ(ದು)ರಾಲೋಚನೆ ಖಾಕಿ ಕಿರಾತಕರದು.

ಉಡುಪಿ-ಮಂಗಳೂರಿನ ಜೈಲುಗಳಲ್ಲಿ ಕೈದಿಗಳ ಜೀವಕ್ಕೆ ಭದ್ರತೆ ಎಂಬುದೇ ಇಲ್ಲ, ಕಾನೂನು-ಕಟ್ಟಳೆಗೆ-ಮಾನವ ಹಕ್ಕಿಗೆ ಕವಡೆ ಕಿಮ್ಮತ್ತಿಲ್ಲ. ಉಡುಪಿ ಜೈಲರ್ ಅಂಬೇಕರ್ ಮತ್ತವನ ಸಿಬ್ಬಂದಿಗೆ ಕಾಸು ಕೊಟ್ಟರೆ ಸೆರೆಮನೆ ಸಾಕ್ಷಾತ್ ಅರಮನೆಯಾಗುತ್ತದೆ. ಹೆಂಡ-ಹೆಣ್ಣು-ಮಾದಕ ಪದಾರ್ಥದಿಂದ ಹಿಡಿದು ಮಾರಕಾಯುಧಗಳೆಲ್ಲ ಇಲ್ಲಿ ಥಳುಕುತ್ತವೆ. ಕರಾವಳಿಯ ಬಹುತೇಕ ಜೈಲುಗಳಲ್ಲಿ ಕೈದಿಗಳು ಮೊಬೈಲ್ ಫೋನ್ ಹಿಡಿದು ಓಡಾಡುತ್ತಾರೆ. ಬಾಟ್ಲಿ ಎತ್ತಿ ಬಿರಿಯಾನಿ ಮೆಲ್ಲುತ್ತಾರೆ. ಗುಟುಕಾ, ಗಾಂಜಾ, ಸಿಗರೇಟು, ಪಾನ್ ರಾಜಾರೋಷವಾಗಿ ನುಸುಳುತ್ತಿದೆ. ಅಂಡರ್‌ವರ್ಲ್ಡ್‌ನ ಸೇಫ್ ಸ್ಪೆಟ್ ಸೈಟ್ ಇದು. ಪ್ರಭಾವಿ ಕೈದಿಗಳು-ಹಣವಂತ ಕ್ರಿಮಿನಲ್‌ಗಳು ಕರಾವಳಿ ಜೈಲಿಗೆ ಪಿಕ್‌ನಿಕ್ ಬಂದಂತೆ ಜಾಲಿಯಾಗಿ ಬಂದಿಳಿದು ಹೋಗುತ್ತಿದ್ದಾರೆ.

ಬಂಧೀಖಾನೆ ಮಂತ್ರಿ ಮತ್ತು ಹಿರಿಯ ಅಧಿಕಾರಿಗಳಿಗೆ ಇದೆಲ್ಲ ಈಗಲಾದರೂ ಅರ್ಥವಾದೀತಾ? ಉಡುಪಿ ಕಾರಾಗೃಹದಲ್ಲಾದ ಭಯಾನಕ ಹತ್ಯೆ ಪಾಠ ಕಲಿಸೀತಾ? ಅಥವಾ ಜನರೇ ಬುದ್ಧಿ ಕಲಿಸಬೇಕಾದೀತಾ!

[illegible] ಗ್ಗ ಜಿಲ್ಲೆಯ ಚಂದ್ರಗುತ್ತಿಯ ಬೆತ್ತಲೆ ಸೇವೆಯನ್ನು ಇನ್ನೊಂದು ನಿದರ್ಶನವಾಗಿ [illegible] ಮಾಡುವವರು ಇದು ತಮಗೆ ಅವಮಾನದ ಸಂಗತಿ ಎಂದು ಯಾವತ್ತೂ ಹೇಳಲಿಲ್ಲ. [illegible] ಯಾಕೆ? ಇನ್ನೂ ಹಿಂದಿನ ಚರಿತ್ರೆಗೆ ಹೋಗಿ ನೋಡುವುದಾದರೆ [illegible]

• [illegible]



ಯಾರ ಸಂವೇದನೆಯನ್ನು ಯಾರು ಕೊಂದರು?

ಕೆ.ವಿ.ಅಕ್ಷರ ಅವರು ಇತ್ತೀಚೆಗೆ ಪ್ರಜಾವಾಣಿಯಲ್ಲಿ ಪ್ರಕಟಿಸಿದ 'ಹರಕೆ-ಹರಾಜು' ಲೇಖನ ಅನೇಕ ಪ್ರಶ್ನೆಗಳನ್ನು ಎತ್ತಲು ಅವಕಾಶ ಕೊಡುತ್ತದೆ. ಇಂಥ ಮುಖ್ಯ ಸಂಗತಿಗಳ ಬಗ್ಗೆ ನಮ್ಮ ಸಮೂಹ ಮಾಧ್ಯಮ ವಹಿಸುತ್ತಿರುವ ಪಾತ್ರದ ಬಗ್ಗೆ ಅವರು ಕೆಲವು ಪ್ರಶ್ನೆಗಳನ್ನು ಎತ್ತುತ್ತಾರೆ.

ಮಾಧ್ಯಮವನ್ನು ನಮ್ಮ ಸಮಾಜದ ಒಂದು ಅಂಗವಾಗಿಯೇ ನೋಡಬೇಕು; ಹೊರಗಿಟ್ಟು ನೋಡಬಾರದು. ಒಂದು ಸಮಾಜದ ಸಂವೇದನೆ ಜಡವಾಗಿದ್ದರೆ ಮಾಧ್ಯಮದ ಸಂವೇದನೆ ಅದಕ್ಕನುಗುಣವಾಗಿರುತ್ತದೆ. ನಮ್ಮ ದೇಶದಲ್ಲಿ ಮಾಧ್ಯಮಗಳು ಚುರುಕಾಗಿಯೂ ಕೆಲಸ ಮಾಡಿವೆ; ಜಡವಾಗಿಯೂ ವರ್ತಿಸಿವೆ. ಇತ್ತೀಚೆಗೆ ಅನೇಕ ಮುಖ್ಯ ಹಗರಣಗಳು ಬಯಲಾಗಲು, ಸಾರ್ವಜನಿಕ ಚರ್ಚೆಯ ವಿಷಯಗಳಾಗಲು ಮಾಧ್ಯಮ ವಹಿಸಿದ ಪಾತ್ರವೇ ಕಾರಣ ಎಂಬುದನ್ನು ನಾವು ಮರೆಯಲಾಗದು. ನಮ್ಮ ಕ್ರಿಕೆಟ್ 'ಕಲಿ'ಗಳನ್ನು ಮಾರುಕಟ್ಟೆಯ ವಸ್ತುಗಳಂತೆ ಬಿಕರಿ ಮಾಡುವುದನ್ನು ಒಂದು 'ಅವಮಾನದ' ಸಂಗತಿಯಾಗಿ ಪರಿಗಣಿಸಲಾಗದಷ್ಟು ಮಾಧ್ಯಮ ಜಡವಾಗಿವೆ ಎಂಬುದು ನಿಜ. ಹೀಗೆ ಕ್ರಿಕೆಟ್ಟಿಗೆ ಮಾತ್ರ ಈ ಅವಮಾನವನ್ನು ಸೀಮಿತಗೊಳಿಸಬೇಕಾಗಿಯೂ ಇಲ್ಲ. ನಮ್ಮ ಶಿಕ್ಷಣ ಕ್ಷೇತ್ರವನ್ನೇ ನೋಡಿದರೂ ಇದು ತಿಳಿಯುತ್ತದೆ: ಸಾಫ್ಟ್‌ವೇರ್ ಇಂಜಿನಿಯರುಗಳು ಮತ್ತು ವೈದ್ಯರನ್ನು ಮಾತ್ರ ಅಂತರರಾಷ್ಟ್ರೀಯ ಮಾರುಕಟ್ಟೆಯ ಸರಕಾಗಿ ಬೆಲೆಕಟ್ಟಿ ಉಳಿದ ಜ್ಞಾನಶಾಖೆಗಳಲ್ಲಿ ಅಧ್ಯಯನ ಮಾಡುವ ಲಕ್ಷಾಂತರ ಪ್ರತಿಭಾವಂತರನ್ನು ಕಾಲ ಕಸ ಮಾಡಿರುವುದರ ಹಿಂದೆ ಇರುವ ಮನಸ್ಸು ಯಾರದು? ಹಾಗೆಯೇ ಇನ್ನು ಅನೇಕ ಉದಾಹರಣೆಗಳನ್ನು ಕೊಡಬಹುದು.

ಜಾಗತೀಕರಣ ಎನ್ನುವುದು ಹಣದ ರೂಪದಲ್ಲಿ ಮಾತ್ರ ನಮ್ಮನ್ನು ಆವರಿಸಿದ್ದರ ಕೆಟ್ಟ ಪರಿಣಾಮ ಎಲ್ಲೆಲ್ಲಿಯೂ ಮುಖ ತೋರುತ್ತಿದೆ. ಈ ಹಣ ಎನ್ನುವುದು ನಮ್ಮ ಸಮಾಜದ ಸೂಕ್ಷ್ಮ ಸಂವೇದನೆಯನ್ನು ತಿಂದು ಹಾಕಿದೆ; ಮಾಧ್ಯಮಗಳೂ ಹೀಗಾಗಿರುವುದು ವಿಷಾದದ ಸಂಗತಿ. ಆದರೆ ಸುಬ್ರಹ್ಮಣ್ಯ ದೇವಾಲಯವೊಂದರಲ್ಲಿ ಹಲವು ಹರಕೆದಾರರು ಎಂಜಲೆಲೆಗಳ ಮೇಲೆ ಹೊರಳಾಡಿದ ಸುದ್ದಿ ಮುಖಪುಟದ ವರದಿಯಾದದ್ದು ಮತ್ತು 'ವರದಿಯಾದ ರೀತಿಯಿಂದಲೇ ಇದು ನಮ್ಮ ಸಮಾಜವನ್ನು ಕಾಡುತ್ತಿರುವ ಮುಖ್ಯವಾದ ಪಿಡುಗಿನ ಒಂದು ಉದಾಹರಣೆ-ಎಂಬ ಧ್ವನಿಯೂ ಈ ವರದಿಗಳ ಹಿಂದಿತ್ತು' ಎಂಬುದು ನಮ್ಮ ಮಾಧ್ಯಮಗಳು ನಿರ್ವಹಿಸಿದ ಅಗತ್ಯ ಕರ್ತವ್ಯ ಹಾಗೂ ಎಚ್ಚೆತ್ತ ರೀತಿಯನ್ನೂ ತೋರುತ್ತಿದೆ.

ಅಕ್ಷರ ಅವರು ಭಾವಿಸುವಂತೆ ಇದು, 'ನಗಣ್ಯವೆನ್ನಬಹುದಾದ ಒಂದು ಪುಟ್ಟ ಊರಿನ ಒಂದು ಘಟನೆ.' ಹಾಗೆಯೇ, 'ದೇವಾಲಯದಲ್ಲಿ ಯಾರೋ ಒಂದಿಷ್ಟು ಜನ, ತಮ್ಮದೇ ಆದ ನಂಬಿಕೆಯಿಂದ ಪ್ರೇರಿತರಾಗಿ' ಮಾಡಿದ ಕೆಲಸ ಇದು. ಸುಬ್ರಹ್ಮಣ್ಯದಂಥ 'ಪುಟ್ಟ ಊರು'ಗಳು ನಮ್ಮ ಧಾರ್ಮಿಕ ಕ್ಷೇತ್ರದಲ್ಲಿ ಇಂಥ ನಂಬಿಕೆಗಳನ್ನು ಬಿತ್ತುವ, ಸಮೃದ್ಧ ಫಸಲನ್ನು ತೆಗೆಯುವ ಪ್ರಭಾವೀ ಕ್ಷೇತ್ರಗಳೆಂಬುದು ಮತ್ತು ಇಂಥ ಪುಟ್ಟ ಊರುಗಳು ಭಾರತದ ತುಂಬ ಕ್ರಿಯಾಶೀಲವಾಗಿದ್ದವು ಮತ್ತು ಈಗಲೂ ಕ್ರಿಯಾಶೀಲವಾಗಿವೆ ಎಂಬುದನ್ನು ನಾನು ವಿವರಿಸಬೇಕಾದ ಅಗತ್ಯವಿಲ್ಲ. ತಿರುಪತಿಯೂ ಪುಟ್ಟ ಊರೇ; ಧರ್ಮಸ್ಥಳವೂ ಪುಟ್ಟ ಊರೇ. ಪುಟಪರ್ತಿ ಇನ್ನೂ ಸಣ್ಣ ಊರು.

ತಲೆಯ ಮೇಲೆ ಮಲಹೊರುವ ವ್ಯಕ್ತಿ ಇದು ತನಗೆ ಅಪಮಾನಕರ ಎಂದು ಭಾವಿಸುವುದಕ್ಕೆ ಸಾವಿರ ಸಾವಿರ ವರ್ಷಗಳೇ ಬೇಕಾದವು. ಇಂಥ ಪ್ರಜ್ಞೆಯನ್ನು ದಲಿತರಿಗಿಂತ ಮೊದಲೇ ಪಡೆದಿದ್ದ ಮೇಲ್ಜಾತಿ ಮತ್ತು ವರ್ಗಗಳು ಇದನ್ನು ಯಾಕೆ ಅವನ ಅರಿವಿಗೆ ಬರುವಂತೆ ಮಾಡಲಿಲ್ಲ. ಅಂಥ ಒಂದು ಸೂಕ್ಷ್ಮ ಸಂವೇದನೆಯೇ ಅವನಲ್ಲಿ ಇಲ್ಲದಂತೆ ಮಾಡಿದವರು ಯಾರು? ಇಂಥ ಸೂಕ್ಷ್ಮ ಪ್ರಶ್ನೆಗಳಿಗೆ ಉತ್ತರಿಸುವುದು ಸಾಧ್ಯವಾದಾಗ ಮಾತ್ರ, ಎಂಜಲೆಲೆಯ ಮೇಲೆ ಉರುಳುವವರು ಸ್ವಂತ ನಂಬಿಕೆಯಿಂದ ಮತ್ತು ಪ್ರೇರಣೆಯಿಂದ ಹಾಗೆ ಮಾಡುತ್ತಾರೊ ಅಥವಾ ಬೇರೆಯ ಕಾರಣಗಳು ಇದರ ಹಿಂದೆ ಇರಬಹುದೊ ಎಂಬುದು ಅರ್ಥವಾಗುವುದು ಸಾಧ್ಯ.

ಅಕ್ಷರ ಅವರ ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯ ಬೆತ್ತಲೆ ಸೇವೆಯನ್ನು ಇನ್ನೊಂದು ನಿದರ್ಶನವಾಗಿ ನೋಡಬಹುದು. ಬೆತ್ತಲೆಸೇವೆ ಮಾಡುವವರು ಇದು ತಮಗೆ ಅವಮಾನದ ಸಂಗತಿ ಎಂದು ಯಾವತ್ತೂ ಹೇಳಲಿಲ್ಲ, ಆದರೆ ಅದನ್ನು ಸರ್ಕಾರ ನಿಷೇಧಿಸಿದ್ದು ಯಾಕೆ? ಇನ್ನೂ ಹಿಂದಿನ ಚರಿತ್ರೆಗೆ ಹೋಗಿ ನೋಡುವುದಾದರೆ ಸತಿಪದ್ಧತಿಯೂ 'ಸ್ವಪ್ರೇರಣೆ'ಯದೇ. ಅದನ್ನು ತಡೆದದ್ದು ಯಾಕೆ?

ಪ್ರಜಾಪ್ರಭುತ್ವ ಎನ್ನುವುದು ಕೇವಲ ರಾಜಕೀಯ ವ್ಯವಸ್ಥೆಯಲ್ಲ. ಬಹುಮತದಿಂದ ಅಧಿಕಾರ ಹಿಡಿಯುವ ರಾಜಕೀಯ ಪಕ್ಷ ಅಥವಾ ಪಕ್ಷಗಳು ನಡೆಸುವ ಸರ್ಕಾರ ಮಾತ್ರವೂ ಅಲ್ಲ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಹೀಗೆ ಅನೇಕ ಸಂಗತಿಗಳನ್ನು ಒಳಗೊಂಡ ಒಂದು ಸಂಕೀರ್ಣ ವ್ಯವಸ್ಥೆ. ಸಮಾಜ ತನ್ನ ತಪ್ಪುಗಳನ್ನು ತಿದ್ದಿಕೊಳ್ಳುವ ಮೂಲಕ ಪ್ರಜಾಪ್ರಭುತ್ವ ಗಟ್ಟಿಯಾಗಿ ಬೇರುಬಿಡುವಂತೆ ನೋಡಿಕೊಳ್ಳುತ್ತದೆ.

ನಂಬಿಕೆಯೆನ್ನುವುದು ಸಾರ್ವಜನಿಕ ಆಚರಣೆಯಾದಾಗ, ಸಾರ್ವಜನಿಕ ಕ್ರಿಯೆಯಾದಾಗ ಅದು ಸಾರ್ವಜನಿಕ ಚರ್ಚೆಗೆ ಎಡೆಮಾಡಿಕೊಡುತ್ತದೆ. ಸಮುದಾಯದ ಹಿತಕ್ಕೆ ಮಾರಕವಾಗುವಂತಿದ್ದರೆ, ಸಮಾಜದ ಘನತೆಗೆ ಕುಂದುಂಟುಮಾಡುವಂತಿದ್ದರೆ, ನಾಗರಿಕ ಸಮಾಜಕ್ಕೆ ಅವಮಾನಕರವಾಗಿದ್ದರೆ ಅಂಥ ನಂಬಿಕೆ ಪ್ರಶ್ನಾರ್ಹವಾಗುತ್ತದೆ; ವ್ಯಕ್ತಿಯ ಗಡಿಯನ್ನು ದಾಟಿ ಸಮಾಜದ ಚರ್ಚೆಯ ವ್ಯಾಪ್ತಿಯನ್ನು ಇಂಥ ನಂಬಿಕೆಗಳು ಪಡೆದುಕೊಳ್ಳುತ್ತವೆ. ಈ ಕಾರಣದಿಂದಾಗಿಯೇ ಬೆತ್ತಲೆ ಸೇವೆ ನಿಲ್ಲುವುದು ಸಾಧ್ಯವಾಯಿತು. ನರಬಲಿ ನಿಂತಿರುವುದರ ಹಿಂದೆಯೂ ಇದೇ ತರ್ಕ ಕೆಲಸ ಮಾಡುತ್ತದೆ. ಇದೆಲ್ಲ ಸಾಧ್ಯವಾದದ್ದು ಪ್ರಜಾಪ್ರಭುತ್ವದ ಕಾರಣದಿಂದಾಗಿಯೇ. ಪ್ರಜಾಪ್ರಭುತ್ವ ಎನ್ನುವುದು ನಿರಂತರವಾಗಿ ತನ್ನ ತಪ್ಪುಗಳನ್ನು ತಿದ್ದಿಕೊಂಡು ಬೆಳೆಯುವ ಪ್ರಕ್ರಿಯೆ. ಇದು ಎಂದೂ ನಿಂತ ನೀರಾಗಿರುವುದಿಲ್ಲ.

ಇವತ್ತು ನಮ್ಮಲ್ಲಿ ಚಾಲ್ತಿಯಲ್ಲಿರುವ ಬಹುಪಾಲು ಧಾರ್ಮಿಕ ಆಚರಣೆಗಳು ಮತ್ತು ಮೂಢ ನಂಬಿಕೆಗಳು 'ನಗಣ್ಯ' ಊರಿನ 'ಘಟನೆಗಳು' ಮಾತ್ರ ಆಗಿರುವುದಿಲ್ಲ.' 'ಮಧ್ಯಯುಗದ ಭಾರತದ ಅನಾಗರಿಕ ಮನಃಸ್ಥಿತಿಯು ಇನ್ನೂ ಮುಂದುವರಿಯುತ್ತಿರುವ ಸಂಕೇತ' ಎಂದು ಇಂಥ ಘಟನೆಗಳನ್ನು ಪತ್ರಿಕೆಗಳ ಮುಖಪುಟಗಳಲ್ಲಿ ವರ್ಣಿಸುತ್ತಿವೆ ಎಂದರೆ ಅವು ತಮ್ಮ ಕರ್ತವ್ಯವನ್ನು ಸರಿಯಾಗಿಯೇ ನಿರ್ವಹಿಸುತ್ತಿವೆ ಎಂದೇ ಅರ್ಥ.

ನಮಗೆ ಅವಮಾನವಾಗುತ್ತಿದ್ದರೆ ಅದು ನಮಗೆ ಖಂಡಿತಾ ತಿಳಿಯಬೇಕು. ಸೂಕ್ಷ್ಮ ಸಂವೇದನೆ ಇದ್ದರೆ ಇಂಥ ಅವಮಾನಗಳು ನಮಗೆ ತಿಳಿಯುತ್ತವೆ ಮತ್ತು ನಮ್ಮನ್ನು ತೀರಾ ಕುಗ್ಗಿಸುತ್ತವೆ. ಅಕ್ಷರ ಅವರ ಈ ಅಭಿಪ್ರಾಯವನ್ನು ಖಂಡಿತಾ ಒಪ್ಪಬೇಕು. ಆದರೆ ನಮ್ಮ ಸಮಾಜದ ಇತಿಹಾಸ ಬಹಳ ದೊಡ್ಡದು. ಸಾವಿರಾರು ವರ್ಷಗಳ ಹಿಂದಿನ ಚರಿತ್ರೆಯ ಕಳಂಕ ಪುಟಗಳು ಅದರಲ್ಲಿ ಸೇರಿಹೋಗಿವೆ. ಬಹುಸಂಖ್ಯಾತರಾದ, ತಳ ಸಂಸ್ಕೃತಿಯನ್ನು ಮತ್ತು ಮಾನವೀಯ ಕಾಳಜಿಗಳನ್ನು ಅತ್ಯಂತ ಎಚ್ಚರದಿಂದ ರಕ್ಷಿಸಿಕೊಂಡು ಬಂದ ಹಲವು ತಳ ಸಮುದಾಯಗಳ ಸಂವೇದನೆಯನ್ನೇ ಬರ್ಬರವಾಗಿ ಕೊಂದು ಹಾಕಿದವರು ಯಾರು? ಅಂಥವರ ತಲೆಗಳ ಮೇಲೆ ಮಲ ಹೊರಿಸಿದವರು ಯಾರು? ಅಂಥವರನ್ನು ಬೆತ್ತಲೆಗೊಳಿಸಿ 'ಬೆತ್ತಲೆ ಸೇವೆಯನ್ನು' ಮಾಡಿಸಿಕೊಂಡವರು ಯಾರು? ನಂಬಿಕೆಗಳ ಹೆಸರಿನಲ್ಲಿ ನರಬಲಿಯನ್ನು ಕೊಡುವಂಥ ಮನಃಸ್ಥಿತಿಯನ್ನು ಅಚ್ಚೊತ್ತಿದವರು ಯಾರು?

ಇಂಥ ಪ್ರಶ್ನೆಗಳನ್ನು ಕೇಳಿಕೊಳ್ಳದೆ, ನಮ್ಮ ಸಮಾಜದ ಸಂಕೀರ್ಣ ಸ್ವರೂಪವನ್ನು ಗಮನಿಸದೆ ವ್ಯಕ್ತಿಯ ನಂಬಿಕೆಯನ್ನು ನಿರ್ಧರಿಸುವುದು, ವ್ಯಕ್ತಿಯ ಪ್ರೇರಣೆಗಳನ್ನು ಗುರುತಿಸುವುದು ಸರಳವಾಗುತ್ತದೆ. ಬಾಲಿಶವಾಗುತ್ತದೆ. ●

ಉಡುಪಿ ಜಿಲ್ಲೆಯಲ್ಲಿ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯಿಂದ ವಿದ್ಯಾರ್ಥಿಗಳಿಗೆ ಸ್ಪರ್ಧೆ

ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು ತನ್ನ ಆಶಯಕ್ಕನುಗುಣವಾಗಿ 'ಗಣರಾಜ್ಯ ದಿನ' ಮತ್ತು 'ಮಹಾತ್ಮ ಗಾಂಧೀಜಿಯವರ ಪುಣ್ಯತಿಥಿ'ಯನ್ನು ಅರ್ಥಪೂರ್ಣವಾಗಿ ಆಚರಿಸುವ ನಿಟ್ಟನಲ್ಲಿ ಉಡುಪಿ ಜಿಲ್ಲಾ ವ್ಯಾಪ್ತಿಯ ಕಾಲೇಜು ವಿದ್ಯಾರ್ಥಿಗಳಿಗೆ (ಪಿಯುಸಿ ಮತ್ತು ಪದವಿ) ಎರಡು ವಿಭಾಗದಲ್ಲಿ ಪ್ರತ್ಯೇಕವಾಗಿ ಮಹಾತ್ಮ ಗಾಂಧೀಜಿಯವರ ಆತ್ಮಕಥೆ 'ನನ್ನ ಸತ್ಯಶೋಧನೆಯ ಕಥೆ' (ಪಿ.ಯು.ಸಿ.ವಿದ್ಯಾರ್ಥಿಗಳಿಗೆ) ಮತ್ತು ಗಾಂಧೀಜಿಯವರ ಮಹತ್ವದ ಕೃತಿ 'ಹಿಂದ್ ಸ್ವರಾಜ್' (ಪದವಿ ವಿದ್ಯಾರ್ಥಿಗಳಿಗೆ) ಗಳ ಬಗ್ಗೆ ವಿಶ್ಲೇಷಣೆ - ವಿಮರ್ಶೆ ಬರೆಯುವ ಸ್ಪರ್ಧೆಯನ್ನು ದಿನಾಂಕ 23-1-2011 ರಂದು ಉಡುಪಿಯ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ (ಬೋರ್ಡ್ ಹೈಸ್ಕೂಲ್) ಹಮ್ಮಿಕೊಂಡಿದೆ.

ಈಗಾಗಲೇ ಎಲ್ಲಾ ಕಾಲೇಜುಗಳಿಗೆ ಪತ್ರ ಮುಖೇನ ಸ್ಪರ್ಧೆಯ ನಿಯಮಾವಳಿಗಳನ್ನು ಕಳುಹಿಸಲಾಗಿದ್ದು, ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ದಿನಾಂಕ 21-1-2011 ರ ಒಳಗೆ ತಮ್ಮ ಕಾಲೇಜಿನ ಪ್ರಾಂಶುಪಾಲರ ಮೂಲಕ ಹೆಸರು ನೋಂದಾಯಿಸಬಹುದು. ಒಂದು ಕಾಲೇಜಿನಿಂದ ಗರಿಷ್ಠ 4 ವಿದ್ಯಾರ್ಥಿಗಳು ಮಾತ್ರ ಭಾಗವಹಿಸಬಹುದು. ಕಾಲೇಜಿನ ಗುರುತಿನ ಪತ್ರ ಮತ್ತು ಮುಖ್ಯಸ್ಥರಿಂದ ಅನುಮತಿ ಮತ್ತು ದೃಢೀಕರಣ ಪತ್ರ ತರಬೇಕು.

ಹೆಚ್ಚಿನ ವಿವರಗಳಿಗೆ
ದಿನಕರ ಎಸ್.ಬೆಂಗ್ರೆ, (9845225031) ಮತ್ತು ಕೆ.ಫಣಿರಾಜ್ (9448983294) ಇವರನ್ನು ಸಂಪರ್ಕಿಸಬಹುದಾಗಿದೆ.

- ಜಿ.ರಾಜಶೇಖರ್ (ಅಧ್ಯಕ್ಷರು), ಕೆ.ಫಣಿರಾಜ್ (ಸ್ಪರ್ಧಾ ಸಮಿತಿ ಸಂಚಾಲಕರು), ದಿನಕರ ಎಸ್.ಬೆಂಗ್ರೆ (ಕಾರ್ಯದರ್ಶಿ), ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಉಡುಪಿ ಘಟಕ.

ಉರ್ದು ಅಕಾಡೆಮಿಯಲ್ಲಿ ಸರ್ಕಾರದ ಕುತಂತ್ರ

ಮಾನ್ಯರೆ,

ಕಳೆದ ಮೂವತ್ತು ವರ್ಷಗಳಿಂದ ಉರ್ದು ಅಕಾಡೆಮಿ ಕರ್ನಾಟಕದಲ್ಲಿ ಒಂದು ಸ್ವಾಯತ್ತ ಸಂಸ್ಥೆಯಾಗಿ ಕಾರ್ಯವೆಸಗುತ್ತಿದೆ. ಎಲ್ಲ ಅಕಾಡೆಮಿಗಳಿಗೂ ನೀಡುವಂತೆ ಸರ್ಕಾರ ನಿಗದಿತ ಸವಲತ್ತುಗಳನ್ನು ನೀಡುತ್ತಾ ಬರುತ್ತಿದೆ.

2008ರ ಸೆಪ್ಟೆಂಬರ್ ತಿಂಗಳಲ್ಲಿ ಕರ್ನಾಟಕ ಉರ್ದು ಅಕಾಡೆಮಿಯ ಅಧ್ಯಕ್ಷರನ್ನಾಗಿ ಖಲೀಲುರ್ರಹ್‌ಮಾನ್‌ರನ್ನು ಕರ್ನಾಟಕ ಸರಕಾರ ನೇಮಿಸಲಾಗಿ ಜೊತೆಗೆ 20 ಮಂದಿ ಸದಸ್ಯರ ನೇಮಕಾತಿಯಾಗಿತ್ತು.

ಖಲೀಲುರ್ರಹ್‌ಮಾನ್‌ರವರು ನಿವೃತ್ತ ಐಜಿಪಿಯಾಗಿರುವುದು ಮಾತ್ರವಲ್ಲ, ಉರ್ದು ಭಾಷೆಯ ಹೆಸರಾಂತ ಕವಿಯಾಗಿದ್ದು, ಕೆಲವೇ ಕೆಲವು ಉರ್ದುವಿನ ಶ್ರೇಷ್ಠ ವಿಮರ್ಶಕರಲ್ಲಿ ಒಬ್ಬರೆಂದು ವಿಶ್ವವಿಖ್ಯಾತರು. ಇದಲ್ಲದೆ ಭಾರತದಲ್ಲಿ ಮಾತ್ರವಲ್ಲ, ಪಾಕಿಸ್ತಾನ, ಅಫಘಾನಿಸ್ತಾನ, ಬಾಂಗ್ಲಾದೇಶ, ಅಮೇರಿಕಾ, ಇಂಗ್ಲೆಂಡ್ ಮುಂತಾದ ಅನೇಕ ರಾಷ್ಟ್ರಗಳ ಉರ್ದು ಸಾಹಿತ್ಯ ವಲಯದಲ್ಲಿ ಖಲೀಲುರ್ರಹ್‌ಮಾನರ ಖ್ಯಾತಿ ಇದೆ. ಇವರು ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಅನೇಕ ರಾಜ್ಯಗಳಿಂದ ಖ್ಯಾತ ಉರ್ದು ಸಾಹಿತಿಗಳನ್ನು ಕರ್ನಾಟಕಕ್ಕೆ, ಮುಖ್ಯವಾಗಿ ಬೆಂಗಳೂರು, ಗುಲ್ಬರ್ಗ, ಬೆಳಗಾಂವ್, ಮೈಸೂರು ಮುಂತಾದ ಕಡೆಗಳಿಗೆ ಆಹ್ವಾನಿಸಿದ್ದಾರೆ.

ಉರ್ದುವಿನ ಖ್ಯಾತ ಸಾಹಿತಿಗಳಾದ ಗೋಪಿಚಂದ್ ನಾರಂಗ್, ಶಂಸುರ್ರಹ್ಮಾನ್ ಫಾರುಕಿ, ಬಲರಾಜ್ ಕೋಮಲ್, ರತನ್ ಸಿಂಘ್, ಪದ್ಮಶ್ರೀ ಮುಜ್ತಬಾ ಹುಸೈನ್, ಡಾ. ಶಮೀಮ್ ಹನಫಿ ಮುಂತಾದವರನ್ನು ಆಹ್ವಾನಿಸಿ ಕಾರ್ಯಕ್ರಮಗಳನ್ನು ನಡೆಸಿದ್ದರಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಅನೇಕ ಕಾರ್ಯಕ್ರಮಗಳನ್ನು, ಉರ್ದು-ಕನ್ನಡ ಮತ್ತು ಇತರ ಭಾಷೆಗಳಿಗೆ ಅನುವಾದ ಕಮ್ಮಟ ಮುಂತಾದ ಕೊಡುಕೊಳೆಯ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.


ಇಂತಹ ಕಾರ್ಯಶೀಲ ಮತ್ತು ಉತ್ತಮ ಆಡಳಿತ ತಜ್ಞರೆನಿಸಿರುವ ಖಲೀಲುರ್ರಹ್ಮಾನ್‌ರವರನ್ನು ಉರ್ದು ಅಕಾಡೆಮಿಯ ಅಧ್ಯಕ್ಷ ಸ್ಥಾನದಿಂದ ಎಲ್ಲ ಸದಸ್ಯರನ್ನೂ ಸೇರಿದಂತೆ ಇದ್ದಕ್ಕಿದ್ದಂತೆ ಕಾರಣ ಮತ್ತು ನಿಯಮಾನುಸಾರ ವಿವರವನ್ನು ಕೇಳದೆ ಕಳೆದ ವರ್ಷದ ಕೊನೆಯಲ್ಲಿ ಸರಕಾರ ಬರ್ಖಾಸ್ತುಗೊಳಿಸಿತ್ತು. 14.01.2011ರ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯ ಪ್ರಕಾರ ಸಚಿವ ಕಾರಜೋಳರವರು ಸದನಕ್ಕೆ ನೀಡಿದ ಹೇಳಿಕೆಯಂತೆ ಉರ್ದು ಅಕಾಡೆಮಿಯ ಅಧ್ಯಕ್ಷರು ಶಿಷ್ಟಾಚಾರವನ್ನು ಪಾಲಿಸಿಲ್ಲ ಮತ್ತು ಸಿಬ್ಬಂದಿಗೆ ಕಿರುಕುಳ ನೀಡಿದ್ದಕ್ಕೆ, ನಿಯಮಾನುಸಾರ ವಜಾ ಮಾಡಲಾಗಿದೆ ಎಂದಿದ್ದಾರೆ.


ಹೀಗಿದ್ದರೆ ಈ ಕಾರಣಗಳನ್ನು ನೀಡಿ ಅವರಿಗೆ ಮಂತ್ರಿಯವರು ಶಿಸ್ತಿನ ಕ್ರಮದಂತೆ ವಿವರವನ್ನು ಕೇಳಿದ್ದಾರೆಯೇ, ಅಕಾಡೆಮಿಯ ಅಧ್ಯಕ್ಷರಿಗೆ ಉತ್ತರಿಸುವ ಅವಕಾಶವನ್ನು ನೀಡಿದ್ದಾರೆಯೇ? ಅಧ್ಯಕ್ಷರ ಜೊತೆಗೆ ಸದಸ್ಯರನ್ನೂ ವಜಾಮಾಡುವ ಮೂಲಕ ತೆಗೆದುಕೊಂಡ ಕ್ರಮ ಅಕಾಡೆಮಿಯನ್ನೇ ವಜಾಮಾಡಿದಂತಲ್ಲವೇ? ಒಂದು ಸ್ವಾಯತ್ತ ಅಕಾಡೆಮಿಯ ಅಧ್ಯಕ್ಷರಾಗಿರುವ ಸಾಹಿತ್ಯ ವಲಯದಲ್ಲಿ ಗೌರವ ಹೊಂದಿರುವ ಖಲೀಲುರ್ರಹ್ಮಾನರನ್ನು ಪ್ರಜಾಪ್ರಭುತ್ವದ ನಿಯಮಾನುಸಾರ ಆರೋಪಗಳಿಗೆ ಉತ್ತರ ನೀಡಲು ಅವಕಾಶವನ್ನು ನೀಡದೆ ಸರಕಾರ, ಕನ್ನಡ ಸಂಸ್ಕೃತಿ (?) ಇಲಾಖೆ ಮತ್ತದರ ಮಂತ್ರಿಗಳು ಈ ರೀತಿ ಅವಮಾನ ಮಾಡಿರುವುದು ತೀರಾ ಖಂಡನೀಯ.

- ನಿಮ್ಮ ವಿಶ್ವಾಸಿಗಳು,
ಫಕೀರ್ ಮುಹಮ್ಮದ್ ಕಟ್ಪಾಡಿ ಬೆಂಗಳೂರು, ಡಾ. ಕೆ. ಮರುಳಸಿದ್ದಪ್ಪ ಬೆಂಗಳೂರು, ಜಿ. ರಾಜಶೇಖರ್ ಉಡುಪಿ, ಪುರುಷೋತ್ತಮ ಬಿಳಿಮಲೆ ಸೋಮಯಾಜಿ ಮಂಗಳೂರು, ಎಚ್.ಎಸ್. ಶಿವಪ್ರಕಾಶ್ ನವದೆಹಲಿ, ಭಾನು ಮುಷ್ತಾಕ್ ಹಾಸನ, ಕೆ. ಫಣಿರಾಜ್ ಉಡುಪಿ, ಶೂದ್ರ ಶ್ರೀನಿವಾಸ್ ಬೆಂಗಳೂರು, ಮಾಹೆರ್ ಮನ್ಸೂರ್ ಬೆಂಗಳೂರು, ಕೆ. ಷರೀಫಾ ಬೆಂಗಳೂರು, ಇಕ್ಬಾಲ್ ಹುಸೇನ್ ಬೆಂಗಳೂರು, ಕೆ.ಎಲ್. ಅಶೋಕ್ ಶಿವಮೊಗ್ಗ.

ಮಂಗನ ಬ್ಯಾಟೆ

• ಕಲ್ಲುಳ್ಳಿ ವಿಠಲ ಹೆಗ್ಡೆ





ಗನ ಬ್ಯಾಟೆಯನ್ನು ಸರ್ಕಾರ ನಿಷೇಧ ಮಾಡಿದ್ದನ್ನು ವಿರೋಧಿಸಿ ರೈತ ಘದವರು ಪ್ರತಿಭಟಿಸಿದರು. ಮಂಗಗಳನ್ನು ಹಳ್ಳಿಯಿಂದ ಖಾಲಿ ಡಬೇಕೆಂಬ ಬೇಡಿಕೆಯನ್ನು ಇಟ್ಟರು. ಸಿದ್ದನ ಸಹಾಯದಿಂದ ದಿನಕ್ಕೊಂದು ಯಿಂದ ಮಂಗಗಳನ್ನು ತಂದು ತಂದೂ ಪೇಟೆಗೆ ಬಿಟ್ಟರು. ಮಂಗಗಳನ್ನು ವಂತ ಹಿಡಿದು ಪೇಟೆಗೆ ತರುವಾಗ ಒಂದಷ್ಟು ಮಂಗಗಳು ಸಾಯುತ್ತಿದ್ದವು.

ನೀಹಾವಳಿಗೆ ಊರಿನ ಜನ ಮಂಗನ ಬ್ಯಾಟೆ ಮಾಡು ಅಂತ ಫಾರೆಸ್ಟ್ ಇಲಾಖೆಗೆ ಗಾರ್ಡ್ ಇನ್‌ಫಾರ್ಮೇ ಕೊಟ್ಟಿದ್ದ. ಎಂದಿನಂತೆ ಮಂಗನ ಬ್ಯಾಟೆ ನಡೀತಿತ್ತು. ಗಳನ್ನೆಲ್ಲ ಬಲೆಯಲ್ಲಿ ಸುತ್ತಿಯಾಗಿತ್ತು, ಆಗ ಫಾರೆಸ್ಟರ್ ರ್ ಅಂತ ಪ್ರತ್ಯಕ್ಷನಾದ. ಆತನೊಂದಿಗೆ ಕೆಲವೇ ಸಿಬ್ಬಂದಿ ಬಂದಿದ್ದರೂ ಆತ ಕಿರುಚಾಡಿದ. "ನಿಮ್ಮನ್ನೆಲ್ಲ ಅರೆಸ್ಟ್ ಕೋಳಹಾಕ್ತಿನಿ, ಜೈಲ್ ಕಾಣಿಸ್ತಿನಿ" ಅಂತೆಲ್ಲ ಬೊಬ್ಬೆ ದ.

ಳಗಿನ ದೃಶ್ಯವನ್ನು ಕಂಡ ಸಿದ್ದ ಹೇಗಾದರೂ ಮರದ ಂದ ಸರಸರ ಅಂತ ಕೆಳಗೆ ಜಾರಿ ತಪ್ಪಿಸಿಕೊಳ್ಳೋಣ ನೋಡಿದ. ಆದರೆ ಮರದ ಬುಡದಲ್ಲೇ ಗಾರ್ಡ್ ಪ್ಪಿ. ಸಿದ್ದನನ್ನು ಹಿಡಿದ ಗಾರ್ಡ್ ಆತನನ್ನು ಮಂಗನನ್ನು ಂಡು ಹೋಗುವ ಹಾಗೆಯೇ ಎಳೆದುಕೊಂಡು ವ. "ಅವತ್ತು ಪುಣಿಗನ ಬೆಕ್ಕು ಕೇಳಿದ್ರೆ ಅದೇನು ನೆ? ಸಾಹೇಬ್ರ ಹತ್ರ ಬೊಗಳು" ಅಂದ. ಆರಡಿ ವ ಫಾರೆಸ್ಟರ್ ಸಿದ್ದನ ಕುತ್ತಿಗೆಗೆ ಕೈ ಹಾಕಿ "ನೀನೇ ಲ್ಲ ಕಾರಣ. ಕಾಡು ನಿನ್ನ ಅಪ್ಪಂದೇನು? ದಿನಾ ಮಾಡ್ತೀಯ. ಅದೇನೋ ಕೇಳಿದರೆ ಅದ್ಯಾರಿಗೋ ತೆ ಅಂತೀಯಾ. ಅವಳೇನು ತ್ರಿಪುರ ಸುಂದರಿನಾ? ಸೂತಾಕಿ ಬಿಡ್ತಿನಿ, ಸೂವರ್" ಅಂದ.

ಡೆಯರ ಸಮ್ಮತಿಯ ಮೇಲೆಯೇ ಮಂಗನ ಬ್ಯಾಟೆ ದ್ದರಿಂದ ಕೂಡಲೆ ವಡೇರ ಮನೆಗೆ ವಿಷಯ ಹೋಗಿ ಬಂದರು. ಇತ್ತೀಚೆಗೆ ಮಂತ್ರಿಯಾದವರ ಮಾವ ರು. ವಡೆಯರನ್ನು ಕಂಡ ಫಾರೆಸ್ಟರ್ "ನೋಡಿ ಎಂತ ಹಲ್ಕಾ ಕೆಲಸ ಮಾಡ್ತಿದಾನೆ. ಮೇಲಿನವರಿಗೆ ದ್ರೆ ನಾವು ಮನೆಗೆ ಹೋಗಬೇಕು" ಎಂದ. ಅದಕ್ಕೆ ರು "ಇರಲಿ ಫಾರೆಸ್ಟರೇ, ಬನ್ನಿ ಮಾತಾಡೋಣ. ಗಳನ್ನ ಇಟ್ಕೊಂಡು ಜಮೀನು ಮಾಡೋಕ್ಕಾಗಲ್ಲ. ನಿಮಗೂ ಗೊತ್ತು, ಇಲ್ಲಿ ಮಂಗನ ಬ್ಯಾಟೆ ಮಾಡದೆ ದಾರಿ ಇಲ್ಲ. ಬೇಕಾದರೆ ಮಂಗಗಳನ್ನ ಹಿಡಿದು ವರೂ ದೂರ ಬಿಟ್ಟುಬಿಡೋಣ" ಎಂದು ಹೇಳಿದರು. ಬ್ಬರ ನಡುವೆ ಏನೇನು ಮಾತುಕತೆ ನಡೆಯಿತೋ ಲ್ಲ. ಕೊನೆಗೆ ಅಂತೂಇಂತೂ ಬಲೆ ಸೇರಿ ಇನ್ನೂ ತವಾಗಿದ್ದ ಮಂಗಗಳನ್ನೆಲ್ಲ ಹೇರಿಕೊಂಡು ಗಾರ್ಡ್ ಸಿದ್ದ ಪೇಟೆಗೆ ಹೊರಟರು. ಅದಾಗಲೇ ಸತ್ತಿದ್ದ ಗಳನ್ನು ಹೂತು ಹಾಕಿದರು.

* * * *

ದೆಲ್ಲ ಆದನಂತರ ಫಾರೆಸ್ಟಿನವರ ಕಿರಿಕಿರಿಯೇ ಬೆಂದು ನಿರ್ಧರಿಸಿದ ಸಿದ್ದ ಕಿಂದರಿ ಹಿಡಿದ. ಆದಷ್ಟು ನ್ನು ಬಾಯಿ ಪಾಠ ಮಾಡಿಕೊಂಡ ಸಿದ್ದ ಕಿಂದರಿ ಹಗಲೂ ರಾತ್ರಿ ಹಾಡುತ್ತಿದ್ದ. ಹೀಗೆ ತುಂಡುಗುಂಬಳಿ ಂದರಿ ಸಿದ್ದನಾದ.

ದರಿ ಸಿದ್ದನಿಗೆ ಬಹಳ ಬೇಡಿಕೆ ಬಂದದ್ದು ಅವನ ಕ್ಕ ಸೇರಿಸೋ' ಹಾಡಿನಿಂದ. ನಮ್ಮೂರಲ್ಲಿ ಯಾರೇ ಅವರನ್ನು ಸ್ವರ್ಗಕ್ಕೆ ಕಳಿಸಬೇಕಾದರೆ ಸಿದ್ದ ಬೇಕೇಬೇಕು ತಾಯಿತು. ನಮ್ಮಲ್ಲಿ ಯಾರಾದರು ಸತ್ತರೆ 11 ಸೂತಕ ಅಂತ ಮಾಡುತ್ತಾರೆ. ಅಂದರೆ ಅಂದಿನಿಂದ ಷ್ಯರೊಂದಿಗಿನ ಸತ್ತವರ ಸಂಬಂಧ ಮುಗೀತು ಅಂತ ಆದ್ದರಿಂದ ಹನ್ನೊಂದು ದಿನಗಳಿಗೆ ರುವಷ್ಟು ಅಕ್ಕಿ, ಎಲೆ, ಅಡಿಕೆ, ಖರ್ಚಿಗೆ ಅಂತ ಹಣ, ಎಲ್ಲವನ್ನು ಕಟ್ಟಿ ಸತ್ತವರ ತಲೆ ಹಿಂದೆ ತ್ತಾರೆ. 12 ದಿನಕ್ಕೆ ಒಳ ಕರೆಯೋ ಅದನ್ನು ಜಕ್ಣಿ ಕೂಡಿಸುವುದು ಅಂತ ತ್ತಾರೆ. ಅವತ್ತು ಹಲಸಿನ ಮರದ ಮಣೆ ಸತ್ತವರ ಬಟ್ಟೆ ಬರೆ ಜೊತೆಗೆ ಅವರಿಗೆ ದ ಊಟ, ತಿಂಡಿ, ಬೀಡಿ, ಸಾರಾಯಿ ಟ್ಟು ಅವರಿಗೆ ಧೂಪ ಹಾಕುತ್ತಾರೆ. ಅವತ್ತಿಂದ ಸ್ಸ ದೇವರೆಂದು ಪರಿಗಣಿಸಿ ಆ ಮಣೆಯನ್ನು ಮನೆ ಯಲ್ಲಿ ಇಡುತ್ತಾರೆ. ಆ ಮಣೆಯ ಹಲಗೆ ಸತ್ತವರ ಹೆಸರನ್ನು ಬರೆಸಿರುತ್ತಾರೆ.

ಕ್ಕಣೆಯ ಕೊನೆಯ ದಿನ ಸತ್ತವರನ್ನು ಸ್ವರ್ಗಕ್ಕೆ ದ ಕಾರ್ಯಕ್ರಮ ಇರುತ್ತದೆ. ಅಂದು ಸತ್ತವರನ್ನು ಹೊಗಳುವ ಸ್ವರ್ಗದ ಹಾಡನ್ನು ಸಿದ್ದನಷ್ಟು ಚೆನ್ನಾಗಿ ವವರು ಯಾರೂ ಇರಲಿಲ್ಲ, ಸತ್ತವರು ಎಂಥವರೇ ಸಿದ್ದ ಅವರನ್ನು ಹೊಗಳಿಹೊಗಳಿ ಹಾಡುತ್ತಿದ್ದನಲ್ಲದೆ, ಸಂದಿಗೆಲ್ಲ ಸತ್ತವರ ಬಗ್ಗೆ ಎಷ್ಟು ಪ್ರೀತಿ ಇತ್ತು ಸುಶ್ರಾವ್ಯವಾಗಿ ಹಾಡುತ್ತಿದ್ದ. ಅವನ ಹಾಡನ್ನು ಜನ ಬಿಕ್ಕಿಬಿಕ್ಕಿ ಅಳುತ್ತಿದ್ದರು.

ಅವನ ಹಾಡಿನಲ್ಲಿ ದ್ವೈತ ಅದ್ವೈತ ಸಿದ್ಧಾಂತಗಳ ಜೊತೆಗೆ ಎಲ್ಲಾ ದರ್ಶನಗಳ ತತ್ವಜ್ಞಾನವೂ ಇರುತ್ತಿತ್ತು, ಸತ್ತವರು ದೇವಲೋಕದ ಶಾಪದಿಂದಾಗಿಯೇ ಭೂಲೋಕಕ್ಕೆ ಬಂದಿದ್ದರು, ಈಗ ಮತ್ತೆ ದೇವರಾಗಿ ನಿಮ್ಮ ರಕ್ಷಣೆ ಮಾಡುತ್ತಾರೆ ಎಂತೆಲ್ಲ ಸಿದ್ದ ಹಾಡುತ್ತಿದ್ದ. ಶ್ರೀಮಂತರು ಸತ್ತಾಗ ಸಿದ್ದನಿಗೆ ಹೊರಲಾಗದಷ್ಟು ವರಮಾನ ಸಿಕ್ಕಿದ್ದೂ ಇದೆ.

ರಾತ್ರಿ ಊಟ ಮುಗಿಸಿದ ನಂತರ ಒಂಭತ್ತು ಗಂಟೆಗೆ ಸಿದ್ದ ಅಂಗಳದಲ್ಲಿ ಚಾಪೆ ಹಾಕಿ ಹಾಡಲು ಕುಳಿತನೆಂದರೆ ಬೆಳಕು ಹರಿಯುವವರೆಗೂ ಹಾಡುವಷ್ಟು ಹಾಡುಗಳು ಅವನಿಗೆ ಗೊತ್ತಿವೆ.


* * * * *

ಆದರೆ ಸಿದ್ದ ಪುನಃ ಮಂಗನ ಬ್ಯಾಟೆಗೆ ಬರಬೇಕಾದ ಸನ್ನಿವೇಶ ಬಂತು. ಮಂಗನ ಬ್ಯಾಟೆಯನ್ನು ಸರ್ಕಾರ ನಿಷೇಧ ಮಾಡಿದ್ದನ್ನು ವಿರೋಧಿಸಿ ರೈತ ಸಂಘದವರು ಪ್ರತಿಭಟಿಸಿದರು. ಮಂಗ ಗಳನ್ನು ಹಳ್ಳಿಯಿಂದ ಖಾಲಿ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟರು. ಸಿದ್ದನ ಸಹಾಯದಿಂದ ದಿನಕ್ಕೊಂದು ಹಳ್ಳಿಯಿಂದ ಮಂಗಗಳನ್ನು ತಂದು ತಂದೂ ಪೇಟೆಗೆ ಬಿಟ್ಟರು. ಮಂಗ ಗಳನ್ನು ಜೀವಂತ ಹಿಡಿದು ಪೇಟೆಗೆ ತರುವಾಗ ಒಂದಷ್ಟು ಮಂಗಗಳು ಸಾಯುತ್ತಿದ್ದವು. ಸಿದ್ದ ಮತ್ತು ಅವನ ಕಡೆಯವರು ದೊಡ್ಡ ದೊಡ್ಡ ಮಂಗಗಳನ್ನು ನೋಡಿ ಅವು ಗಲಾಟೆ ಮಾಡುತ್ತವೆ ಅಂತ ಹೇಳಿ ಅವುಗಳನ್ನು ದೊಣ್ಣೆಗಳಿಂದ ಬಡಿದು ಸಾಯಿಸಿ ಸಾಯಂಕಾಲ ಸಾರು ಮಾಡಿಕೊಳ್ಳುತ್ತಿದ್ದರು.

ಹೀಗೆ ಸಿದ್ದನಿಗೆ ಮತ್ತೆ ಹಳ್ಳಿಯ ಮಂಗಗಳನ್ನು ಹಿಡಿಯುವ ದೊಡ್ಡ ಕೆಲಸವೇ ಸಿಕ್ಕಿತು. ಮೇಲಾಗಿ ಅದು ಅರಣ್ಯ ಇಲಾಖೆಯವರ ಕೆಲಸವಾಗಿದ್ದರಿಂದ ಇಲಾಖೆಯವರ ಸಖ್ಯವೂ ಆತನಿಗೆ ಸಿಕ್ಕಿ ಅವನ ಉಳಿದ ಕಸುಬುಗಳೂ ಸರಾಗವಾದವು.

ಹಳ್ಳಿಗಳಲ್ಲಿ ಹಿಡಿದ ಮಂಗಗಳನ್ನು ತಂದು ಪೇಟೆಯಲ್ಲಿದ್ದ ಕಾಲೇಜ್ ಸರ್ಕಲ್ ಹತ್ತಿರ ಬಿಡುತ್ತಿದ್ದರು. ಕಾಲೇಜ್ ಹುಡುಗರು ಬಸ್ ಹತ್ತುವ ಜಾಗದ ಲ್ಲೊಂದು ಅಂಗಡಿ ಕಂ ಹೋಟೆಲು ಇತ್ತು. ಆರಂಭದ ದಿನಗಳಲ್ಲಿ ಮನುಷ್ಯರನ್ನು ಕಂಡು ಹೆದರುತ್ತಿದ್ದ ಮಂಗಗಳು ಹತ್ತಿರದಲ್ಲೇ ಇದ್ದ ಮರದ ಮೇಲೆ ಕೂರುತ್ತಿದ್ದವು. ಕಾಲೇಜ್ ಹತ್ತಿರ ಹೆಚ್ಚು ಮರಗಳು ಇಲ್ಲದ್ದರಿಂದ ಅವಕ್ಕೆ ಉಪವಾಸವೇ ಗತಿಯನ್ನುವಂತಾಗಿತ್ತು. ಹುಡುಗರು ನೆಕ್ಕಿ ಬಿಸಾಡಿದ್ದನ್ನು ಯಾರೂ ಇಲ್ಲದ ಬೆಳಗಿನ ಜಾವ ಆಯ್ದು ತಿನ್ನುತ್ತಿದ್ದವು.

ಅಲ್ಲಿ ದಾಟು ಮರಗಳಿಲ್ಲದ್ದರಿಂದ ಮಂಗಗಳು ಮತ್ತು ಮರಿಗಳು ನೆಲದ ಮೇಲೆ ಓಡಾಡುವುದು ಅನಿವಾರ್ಯವಾಯಿತು. ತುಂಟ ಹುಡುಗರು ಮಂಗಗಳಿಗೆ ಅದೂಇದೂ ಕೊಟ್ಟು ಅಭ್ಯಾಸ ಮಾಡಿದರು. ಹೀಗೆ ಬಹಳ ಬೇಗನೆ ಕಾಲೇಜು ಹುಡುಗರೊಂದಿಗೆ ಮಂಗಗಳ ಸ್ನೇಹ, ಸಲುಗೆ ಬೆಳೆದು ಕ್ಲಾಸಿಗೆ ಹೋಗದ ಹುಡುಗರೆಲ್ಲ ಮಂಗ ಗಳೊಂದಿಗೆ ಆಟ ಆಡುತ್ತಾ ಕಾಲ ಕಳೆಯುವುದಕ್ಕೆ ಪ್ರಾರಂಭಿಸಿದರು. ಇದ ರಿಂದ ಕೆಲವೇ ದಿನಗಳಲ್ಲಿ ಮಂಗಗಳು ಎಷ್ಟು ಮುಂದುವರೆದವೆಂದರೆ ಹಾಕಿ ದ್ದನ್ನು ತಿನ್ನುವುದಲ್ಲದೆ, ಹುಡುಗರ ಕೈಯಿಂದ ಕಿತ್ತುಕೊಂಡು ತಿನ್ನುವುದನ್ನೂ ಪ್ರಾರಂಭಿಸಿದವು. ಇವುಗಳ ಕಾಟ ದಿಂದಾಗಿ ಕೈಯಲ್ಲಿ ಏನನ್ನೂ ಹಿಡಿದು ಕೊಂಡು ಹೋಗುವಂತಿರಲಿಲ್ಲ.



3

ಆದರೆ ಬರಿಗೈಯಲ್ಲಿ ಹೋದರೆ ಕಾಲೇಜಿನಲ್ಲಿ ಮೇಷ್ಟ್ರು ಪಾಠ ಮಾಡುವಂತಿರಲಿಲ್ಲ, ಕ್ಲಾಸ್‌ರೂಮಿನಲ್ಲಿ ಮೇಷ್ಟ್ರು ಪಾಠ ಮಾಡುತ್ತಿದ್ದರೆ, ಹೊರಗೆ ಏನೇನೋ ಕೀಟಲೆ, ಅಶ್ಲೀಲವಾದದ್ದನ್ನೆಲ್ಲ ಮಾಡುತ್ತಿದ್ದ ಮಂಗಗಳ ಮೇಲೆಯೇ ಹುಡುಗರ ಗಮನವೆಲ್ಲ ಇರುತ್ತಿತ್ತು, ಈ ನಡುವೆ ಕೈಯಲ್ಲಿ ತಿಂಡ ಪೊಟ್ಟಣವನ್ನು ಹಿಡಿದು ಕೊಂಡಿದ್ದ ಹುಡುಗಿಯೊಬ್ಬಳ ಮೇಲೆ ದಾಳಿ ಮಾಡಿದ ಮಂಗ ಅವಳನ್ನು ಪರಚಿ ಪೊಟ್ಟಣವನ್ನು ಕಿತ್ತುಕೊಂಡಿತ್ತು. ಹೀಗೆ ಹುಡುಗರ ಮತ್ತು ಮಂಗಗಳ ದಿನಕ್ಕೊಂದು ರಗಳೆ ನೋಡಿ ರೋಸಿಹೋದವರು ಪ್ರಿನ್ಸಿಪಾಲ್ ಜಿ.ಎನ್. ಗೌಡರು.

ಜಿ.ಎನ್.ಗೌಡರು ತನ್ನ ಹಿರಿಯ ಸಹೋದ್ಯೋಗಿಗಳನ್ನು ಹಿಂದಕ್ಕೆ ಸರಿಸಿ ಮ್ಯಾನೇಜ್‌ಮೆಂಟ್ ಕೃಪೆಯಿಂದ ಹಂಗಾಮಿ ಪ್ರಿನ್ಸಿಪಾಲರಾಗಿದ್ದರು. ಪ್ರಿನ್ಸಿಪಾಲ್ ಆದ ದಿನದಿಂದ ಅದೆಷ್ಟೇ ಸೆಖೆ ಇದ್ದರೂ ಗೌಡರು ತ್ರೀ ಪೀಸ್‌ಸೂಟ್ ಧರಿಸುತ್ತಿದ್ದರು. ಆ ಸೂಟ್ ಮೇಲೆ ಒಂದು ದಾರದಿಂದ ಅವರ ಫೋಟೊ ಇದ್ದ ಐಡೆಂಟಿಟಿ ಕಾರ್ಡ್ ನೇತಾಡುತ್ತಿತ್ತು, ಇನ್ನೊಂದು ದಾರದಿಂದ ಅವರ ಮೊಬೈಲ್ ನೇತಾಡುತ್ತಿತ್ತು.

ಸಾಮಾನ್ಯ ಎತ್ತರದ ಗೌಡರು ಪ್ರಿನ್ಸಿಪಾಲ್ ಆದ ಮೇಲೆ ಹೊಟ್ಟೆಯನ್ನು ಎಷ್ಟು ಬೆಳೆಸಿಕೊಂಡಿದ್ದರೆಂದರೆ ಅವರು ಕುರ್ಚಿಯಲ್ಲಿ ಕುಳಿತಿದ್ದರೂ ಒರಗಿಕೊಂಡವರಂತೆ ಕಾಣುತ್ತಿದ್ದರು. ಮದುವೆ ಆದಾಗ ಅವರ ಮಾವ ಹೊಲಿಸಿಕೊಟ್ಟಿದ್ದ ಕೋಟುಗಳನ್ನೇ ಅವರು ಇವತ್ತಿಗೂ ಧರಿಸುತ್ತಿದ್ದರು. ಆದರೆ ಆ ಕೋಟುಗಳು ಅವರ ಉಬ್ಬಿದ್ದ ಹೊಟ್ಟೆಯನ್ನು ಮುಚ್ಚುವಲ್ಲಿ ವಿಫಲವಾಗಿದ್ದರಿಂದ ಕೋಟನ್ನು ಎರಡೂ ಕಡೆಯಿಂದ ನಿರಂತರವಾಗಿ ಎಳೆದುಕೊಳ್ಳುವುದೇ ಅವರ ಅಭ್ಯಾಸವಾಗಿತ್ತು, ಹುಡುಗರನ್ನು ಬೈಯುವಾಗ ಗೌಡರು "ಏ ಮಂಗ್ಯಾ" ಎನ್ನುತ್ತಿದ್ದರಾದರೂ ಅವರು ಹುಬ್ಬಳ್ಳಿಯ ಕಡೆಯವರಾದ್ದರಿಂದ ಮಂಗಗಳನ್ನು ಪ್ರತ್ಯಕ್ಷ ದೇವರೆಂದು ನಂಬಿದ್ದರು.

ಒಂದು ದಿನ ಹುಡುಗರು ಮತ್ತು ಮಂಗಗಳ ಗಲಾಟೆ ಕೇಳಿ ಕಾಲೇಜು ಕ್ಯಾಂಟೀನ್ ಹತ್ತಿರ ರೌಂಡ್ಸ್ ಬಂದ ಪ್ರಿನ್ಸಿಪಾಲರ ಕೈಯಲ್ಲಿ ಮೊಬೈಲಿತ್ತು, ಆಗ ಒಂದು ಮಂಗನಿಗೆ ಅದೇನನ್ನಿಸಿತೋ, ಅದು ಪ್ರಿನ್ಸಿಪಾಲರ ಮೇಲೆಗರಿ ಅವರ ಮೊಬೈಲನ್ನು ಕಿತ್ತುಕೊಂಡು ಮರ ಏರಿತು. ಅದನ್ನು ಕಂಡು ಹುಡುಗರೆಲ್ಲ ಬೊಬ್ಬೆ ಹೊಡೆದರೂ ಮಂಗ ಕೆಳಗೆ ಬರಲಿಲ್ಲ, ಆಗ ಚಾಲಾಕಿ ಹುಡುಗನೊಬ್ಬ "ಮೊಬೈಲ್‌ಗೆ ರಿಂಗ್ ಮಾಡಿ ಸಾರ್" ಎಂದ. ಪ್ರಿನ್ಸಿಪಾಲರು ತಮ್ಮ ಮೊಬೈಲ್‌ನಲ್ಲಿ ಅದ್ಯಾವ ರಿಂಗ್ ಟೋನ್ ಹಾಕಿದ್ದರೋ, ಅದು ರಿಂಗ್ ಆಗುತ್ತಿದ್ದಂತೆ ಮಂಗ ಮೊಬೈಲ್ ಕೈಬಿಟ್ಟಿತು. ಆದರೆ ಆ ಮೊಬೈಲ್‌ಗೆ ಹಾಕಿದ್ದ ಹಗ್ಗದ ದೆಸೆಯಿಂದ ಅದು ಮರದ ಹರೆಗೆ ಸಿಕ್ಕಿಕೊಂಡು ನೇತಾಡಿತು. ಪ್ರಿನ್ಸಿಪಾಲರಿಗೆ ಏನು ಮಾಡ ಬೇಕು ಎಂದೇ ಗೊತ್ತಾಗಲಿಲ್ಲ.

ಹೇಳಿಕೇಳಿ ಅದು ನೂರಡಿ ಎತ್ತರ ಬೆಳೆದಿದ್ದ ನೀಲಗಿರಿ ಮರ. ಅಷ್ಟು ಎತ್ತರ ದಿಂದ ಮೊಬೈಲ್ ಬಿದ್ದರೆ ಅದರ ಕತೆ ಮುಗಿದಂತೆಯೇ, ಆ ಮರವನ್ನು ಹತ್ತಲು ಯಾರಿಂದಲೂ ಸಾಧ್ಯವಿರಲಿಲ್ಲ, ಆಗ ಯಾರಿಗೋ ಸಿದ್ದನ ನೆನಪಾಯಿತು. ಸಿದ್ದನಿಗೆ ಬುಲಾವ್ ಹೋಯಿತು. ಸಿದ್ದ ಬಂದವನೇ ಮರ ಹತ್ತಿ ಮೊಬೈಲ್ ಅನ್ನು ಕೆಳಗಿಳಿಸಲು ಐನೂರು ರೂಪಾಯಿ ಕೇಳಿದ. ಪ್ರಿನ್ಸಿಪಾಲರು ತನ್ನ ಜೀವ ಮಾನದಲ್ಲಿ ಎಂದೂ ಸುಲಭವಾಗಿ ದುಡ್ಡು ಬಿಚ್ಚಿದ ವರಲ್ಲ, ಆದರೆ ಮೊಬೈಲ್ ಬೇಕಿತ್ತು. ವಿಧಿ ಇಲ್ಲದೆ ಅವರು ಒಪ್ಪಿಕೊಂಡ ನಂತರ ಸಿದ್ದ ಮರ ಹತ್ತಿ ಮೊಬೈಲ್ ಇಳಿಸಿದ.

ಇದಾದನಂತರ ಪ್ರಿನ್ಸಿಪಾಲರು ಮ್ಯಾನೇಜ್ ಮೆಂಟ್‌ಗೆ ಮಂಗಗಳ ಹಾವಳಿ ಬಗ್ಗೆ ದೂರು ಕೊಟ್ಟು, ಕಾಲೇಜಿನ ಕ್ಯಾಂಟಿನ್ ಕಂ ಅಂಗಡಿಯನ್ನು ಮುಚ್ಚಿಸಿದರು. ಜೊತೆಗೆ ಕಾಲೇಜು ಹುಡುಗರಿಗೆಲ್ಲ ನೋಟಿಸ್ ಜಾರಿ ಮಾಡಿ ಯಾರಾದರು ಮಂಗಗಳಿಗೆ ತಿಂಡಿ ಕೊಟ್ಟರೆ ಅವರನ್ನು ಕಾಲೇಜಿನಿಂದ ಡಿಬಾರ್ ಮಾಡಲಾಗುವುದು ಎಂದು ಎಚ್ಚರಿಸಿದರು. ಇದರಿಂದಾಗಿ ಉಪವಾಸ ಬಿದ್ದ ಮಂಗಗಳನ್ನು ನೋಡಲಾಗದೆ ಕಾಲೇಜಿನ ಎನ್.ಸಿ.ಸಿ ಮತ್ತು ಎನ್.ಎಸ್.ಎಸ್ ಹುಡುಗರೆಲ್ಲ ಜೊತೆಗೂಡಿ ಸಿದ್ದನ ಸಹಾಯದೊಂದಿಗೆ ಮಂಗಗಳನ್ನು ಕಾಲೇಜ್ ಕ್ಯಾಂಪಸ್‌ನಿಂದ ಪೇಟೆಗೆ ದಾಟಿಸಿದರು.

ಹೀಗೆ ಕಾಡಿನಿಂದ ನಾಡಿಗೆ ಬಂದ ಮಂಗಗಳು ಮರ ಬಿಟ್ಟು ಮನೆ ಮಾಡುಗಳಲ್ಲಿ ಆಶ್ರಯ ಪಡೆದವು. ರಸ್ತೆ ದಾಟಲು ಮಂಗಗಳು ಕರೆಂಟ್ ವೈರ್ ಮತ್ತು ಕೇಬಲ್ ವೈರ್‌ಗಳನ್ನು ಬಳಸುತ್ತಿದ್ದ ರಿಂದ ಆ ವೈರ್‌ಗಳೆಲ್ಲ ಲೂಸ್ ಆಗಿ ಹಲವೊಮ್ಮೆ ಕಂಟ್ಯಾಕ್ಟ್ ಆಗಿ ದಿನಕ್ಕೊಂದು ಬಾರಿಗೆ ಕರೆಂಟ್ ತಪ್ಪಿಸುತ್ತಿದ್ದವು. ಕಾಲೇಜ್ ಹತ್ತಿರ ಚಿಪ್ಸ್, ಕುರ್‌ಕುರೆ ತಿನ್ನುವುದನ್ನು ಅಭ್ಯಾಸ ಮಾಡಿಕೊಂಡಿದ್ದ ಮಂಗಗಳು ತಿಂಡಿ ಸಾಮಾನುಗಳನ್ನು ಎಗರಿಸಿ ಮಾಡಿನ ಮೇಲೆ ಅವುಗಳನ್ನು ತಿನ್ನುತ್ತಿದ್ದವು. ತರಕಾರಿ ಹಣ್ಣುಗಳನ್ನೂ ಹೊರಗಡೆ ಇಡಲಾಗದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಅಂಗಡಿಗಳಿಂದ ಚಿಪ್ಸ್ ಅಲ್ಲದೆ ಗುಟ್ಕದ ಪ್ಯಾಕೆಟ್‌ಗಳನ್ನು ಎತ್ತಿಕೊಂಡು ಹೋಗುತ್ತಿದ್ದ ಮಂಗಗಳು ನಿಧಾನಕ್ಕೆ ಗುಟ್ಕ ತಿನ್ನುವುದನ್ನೂ ಚಟ ಮಾಡಿಕೊಂಡವು.

ತಮಗೆ ಇನ್ನಿಲ್ಲದ ಕಾಟ ಕೊಡುತ್ತಿದ್ದ ಮಂಗಗಳಿಗೆ ಪಾಠ ಕಲಿಸಲು ಅಂಗಡಿ ಮಾಲೀಕರು ಅದೆಷ್ಟೋ ಮಂಗಗಳ ಬಾಲ ಮತ್ತು ಕೈಕಾಲುಗಳನ್ನು ಕತ್ತರಿಸಿ ಹಾಕಿದ್ದರಿಂದ ಮಂಗಗಳ ಗುಂಪುಗಳಲ್ಲಿ ಅಂಗವಿಕಲ ಮಂಗಗಳ ಸಂಖ್ಯೆಯೂ ಹೆಚ್ಚಾಯಿತು. ಆಧುನಿಕರು ತಿನ್ನುವ ಆಹಾರವನ್ನೇ ಮಂಗಗಳೂ ತಿನ್ನುತ್ತಿದ್ದರಿಂದ ಅವು ಕೊಬ್ಬಿ ಹೋಗಲು ಪ್ರಾರಂಭಿಸಿದವು.

ಮಂಗನ ಬ್ಯಾಟೆ ಮಾಡುವವರಿಗೆ ಮಂಗಗಳ ಗುಂಪಿನ ಲೀಡರ್ ಅನ್ನು ಹೋರಿ ಮಂಗ ಎಂದು ಕರೆಯುತ್ತಾರೆ ಎಂಬುದು ಗೊತ್ತಿರುತ್ತೆ, ಆ ಹೋರಿ ಮಂಗ ದಷ್ಟ ಪುಷ್ಟವಾಗಿರುತ್ತೆ, ಅದರ ಆಜ್ಞೆಯನ್ನು ಇತರೆ ಮಂಗಗಳು ದಾಟುವುದಿಲ್ಲ. ಹೀಗೆ ಕೊಬ್ಬಲಾರಂಭಿಸಿದ ಮಂಗಗಳು ಸ್ವಲ್ಪ ದಿನಗಳಲ್ಲೇ ಭ್ರಷ್ಟ ರಾಜಕಾರಣಿಗಳಂತೆ ಬೆಳೆದವು. ಹೇಗೆ ಭ್ರಷ್ಟರಲ್ಲಿ ಮುಖ್ಯಮಂತ್ರಿ ಯಾರು, ಸಚಿವ, ಶಾಸಕ, ಅಧಿಕಾರಿ ಯಾರು ಅಂತ ಗುರುತಿಸುವುದು ಕಷ್ಟವೋ ಹಾಗೆಯೇ ಮಂಗಗಳಲ್ಲಿ ಸೈನಿಕ ಮಂಗ ಯಾವುದು, ರಾಜ ಮಂಗ ಯಾವುದು ಅಂತ ಗುರುತಿಸುವುದೂ ಕಷ್ಟವಾಗಲಾರಂಭಿಸಿತು.

ಅಂದಹಾಗೆ, ಮಂಗಗಳ ಸಾಮ್ರಾಜ್ಯದಲ್ಲಿ ಪ್ರತಿನಿತ್ಯ ನಾಯಕತ್ವಕ್ಕಾಗಿ ಹೊಡೆದಾಟ ನಡೆಯುತ್ತಿರುತ್ತದೆ. ಆದರೆ ಪೇಟೆ ಜನರಿಗೆ ಮಂಗಗಳು ಯಾಕೆ ಕಚ್ಚಾಡುತ್ತವೆ ಅಂತ ಅರ್ಥವಾಗುತ್ತಿರಲಿಲ್ಲ, ಮಂಗಗಳು ಪೇಟೆಯ ಎಲ್ಲರಿಗೂ ಉಪದ್ರವ ಕೊಡುತ್ತಿದ್ದವು. ಮನೆಯಲ್ಲಿ ಅಡುಗೆ ಮಾಡಿಟ್ಟು ಆಫೀಸಿಗೆ ಹೋಗಿ ಸಂಜೆ ಹೊತ್ತಿಗೆ ಹಸಿದು ಬಂದು ನೋಡಿದರೆ, ಮನೆಯಲ್ಲಿ ಊಟಾನೂ ಇಲ್ಲ ಊಟದ ... ಇಲ್ಲ ಎಂಬಂತಹ ಸ್ಥಿತಿ ಎದುರಾಗುತ್ತಿತ್ತು.

(ಮುಂದುವರೆಯುವುದು)


ಕೊಳಂಬೆ ಪುಟ್ಟಣ್ಣ ಗೌಡರ 'ಕಾಲೂರ ಚೆಲುವೆ' ಕುರಿತು ಒಂದೆರಡು ಮಾತು



ಕಳೆದ ವಾರ ಬಸವರಾಜ್ ಎಂಬುವರು ಲಂಕೇಶ್ ಕಚೇರಿಗೆ ಬಂದು ತಮ್ಮನ್ನು ಪರಿಚಯಿಸಿಕೊಂಡು ಕೆಲಹೊತ್ತು ಮಾತನಾಡಿ ಹೋದರು. ವಿಪ್ರೋದಲ್ಲಿ ಕೆಲಸ ಮಾಡುವ ಬಸವರಾಜ್ ರಾಯಚೂರಿನವರು, ಸಾಹಿತ್ಯಾಸಕ್ತ, ನಮ್ಮ ಮಾತಿನ ನಡುವೆ ಬಸವರಾಜ್ ಕೊಳಂಬೆ ಪುಟ್ಟಣ್ಣ ಗೌಡರ ಬಗ್ಗೆ ಹೇಳುತ್ತಾ ಅವರ 'ಕಾಲೂರ ಚೆಲುವೆ' ನೀಳ್ಗವಿತೆ ಕುರಿತು ಪ್ರಸ್ತಾಪಿಸಿದರು.

ಪುಟ್ಟಣ್ಣಗೌಡರ 'ಅಚ್ಚಗನ್ನಡ ಶಬ್ದಕೋಶ'ವನ್ನು ನಾನು ನೋಡಿದ್ದೆ. ಕುವೆಂಪುರವರ ಅಳಿಯ ಚಿದಾನಂದಗೌಡರ ತಂದೆಯೇ ಈ ಪುಟ್ಟಣ್ಣಗೌಡರು. ಇವರು ಶಬ್ದಕೋಶವಲ್ಲದೆ ಪದ್ಯಗಳು, 'ತಲೆಯಂತೆ ಬಾಲ' ಹಾಗೂ 'ತಾಳಿ' ಎಂಬ ನಾಟಕಗಳನ್ನು, ಮಕ್ಕಳ ಕತೆ, ಯಕ್ಷಗಾನ ಕುರಿತ ಒಂದು ಪುಸ್ತಕ ಬರೆದಿದ್ದಾರೆಂದು ತಿಳಿಯಿತು.

'ಕಾಲೂರ ಚೆಲುವೆ' ಒಂದು ನೀಳ್ಗವಿತೆ. ಐದು ಮಾತ್ರೆಗಳ ರಗಳೆಯ ವಿನ್ಯಾಸದಲ್ಲಿ, ಅಚ್ಚಗನ್ನಡ ನುಡಿಗಳಲ್ಲಿ ಜೀವ ತಳೆದಿರುವ ಬರಹ. ತಮ್ಮ ಬರಹದ ಬಗ್ಗೆ ಹೇಳಿಕೊಳ್ಳುತ್ತಾ ಪುಟ್ಟಣ್ಣಗೌಡರು "ಇಂದು ಸಿಾವಾಡುವ ನುಡಿಗಳಲ್ಲಿ ಕೆಲವೆಡೆ ನೂರರಲ್ಲಿ ನಲ್ವತ್ತರಿಂದ ಅರುವತ್ತರವರೆಗೆ ಹೆರರ ನುಡಿಗಳೇ ತುಂಬಿರುತ್ತವೆ. ಹೀಗಾಗಿ ಕನ್ನುಡಿಯ ಚೆನ್ನಾದ ನುಡಿಯ ಹರಳುಗಳು ಅಲ್ಲಲ್ಲಿ ಕಣ್ಮರೆಯಾಗುತ್ತಾ ಬರುತ್ತಿವೆ. ಇದು ಸರಿಯಲ್ಲವೆಂಬುದು ನನ್ನ ಹುಚ್ಚೆಣಿಕೆ. ಈ ಹಂಬಲದ ಹೆಚ್ಚಳದಿಂದ ನೂರಾರು ಹಗಲಿರುಳು ಕನವರಿಸಿ ಕೊನೆಗೆ 'ಕಾಲೂರ ಚೆಲುವೆ'ಯೆಂಬ ಹಾಡೇ ಒಡಲಾದ ಈ ಬರಹವನ್ನೂ ಬರೆದು ಮುಗಿಸಿದೆನು". ಎಂದು ಭಿನ್ನವಿಸಿಕೊಳ್ಳುತ್ತಾರೆ.


ಕನ್ನುಡಿಯ ಹೊನ್ನೀಡು

ನಾಡ ನುಡಿಯಲ್ಲೇ ಬರೆದ

ಕಾಲೂರ ಚೆಲುವೆ

1963

ನೂರ ಎಂಬತ್ತು ಪುಟಗಳ ಈ ಪುಸ್ತಕದ ಮೊದಲ ಇಪ್ಪತ್ತು ಪುಟದಲ್ಲಿ ಕಥಾಸಾರ ನೀಡಲಾಗಿದೆ. ಈ ಗದ್ಯ ಚೇತೋಹಾರಿಯಾಗಿದೆ.

ಲೋಕದೊಡೆಯನು ಹಸುರಿನ ಹಾಲ್ಗಡಲಿನಲ್ಲಿ ಮಲಗಿದಂತಿಬ್ಬು ಆತನ ನಲ್ಮೆಯ ಸತಿ ಬಿಸಿಲುಗಾಳಿಗಳಿಂದ ಸೇವಿಸುತ್ತಿದ್ದಂತೆ ರಂಜಿಸುವ ಹೊಸಪೂರೆಂಬ ಒಂದು ಹಳ್ಳಿ ಇತ್ತು. ಆ ಊರಿನ ಮುಳ್ಳಿನ ಮನೆಯೇ ತನ್ನ ಮೂರು ಲೋಕಗಳೆಂದು ತಿಳಿದುಕೊಂಡಿದ್ದ ಕೊರಗು ಎಂಬ ಬೇಸಾಯಗಾರನಿದ್ದನು. ಹೆಂಡತಿ ಮಕ್ಕಳು ಹೇಳಲಾಗದ ಅವನ ಹೆಸರು ಸರಕಾರಕ್ಕಾಗಿ ಮಾತ್ರ ಬೇಕಾಗಿತ್ತು. ಮನೆ ಎಂಬಾಕೆ ಆತನ ಹೆಂಡತಿಯಾಗಿದ್ದಳು. ಗಂಡ ಹೆಂಡತಿ ಒಡಲು ಮತ್ತು ಒಡವೆಗಳಂತಿದ್ದರು. ಅವರಿಗೆ ಉತ್ಸವದಂತೆ ಕಾಳು ಎಂಬುವನು ಮಗನಾಗಿದ್ದನು. ಬೆಳ್ಳಿ ಎಂಬುವಳು ಪ್ರೀತಿಯ ಮಗಳಾಗಿದ್ದಳು...

- ಹೀಗೆ ಶುರುವಾಗುವ ಕತೆ ಬೆಳ್ಳಿಯ ಚೆಲುವು ಹೊನ್ನ ಎಂಬುವವನೊಡನೆ ಆಕೆಗೆ ಉಂಟಾಗುವ ಪ್ರೇಮಗಳನ್ನು ನಿರೂಪಿಸುತ್ತಾ ಸಾಗುತ್ತದೆ.

'ಕಾಲೂರ ಚೆಲುವೆ' ಮೊದಲು ಪ್ರಕಟವಾದದ್ದು 1963ರಲ್ಲಿ, ಗೆಳೆಯ ಬಸವರಾಜ್ ಇದನ್ನು ಪುನರ್‌ಮುದ್ರಿಸಲು ಸಾಧ್ಯವೇ ಎಂದಾಗ ಹಂಪೆಯ ಕನ್ನಡ ವಿಶ್ವವಿದ್ಯಾಲಯವನ್ನು ಕೇಳಿದರೆ ಸೂಕ್ತ ಎಂದೆವು. ಏಕೆಂದರೆ ಆಂಡಯ್ಯ ಕವಿಯ ನಂತರ ಅಚ್ಚಗನ್ನಡದಲ್ಲಿ ಬರೆದಿರುವ ಮೊದಲ ಪುಸ್ತಕವೆಂಬ ಹೆಗ್ಗಳಿಕೆ ಪುಟ್ಟಣ್ಣ ಗೌಡರ ಈ ಪುಸ್ತಕದ್ದಾಗಿದೆ. ಇಂತಹ ಬರಹ ಕನ್ನಡ ವಿವಿ ಮೂಲಕ ಪ್ರಕಟವಾದರೆ ಚೆಂದ ಅನ್ನಿಸಿತು ನಮಗೆ.

ನಮ್ಮ ಕಚೇರಿಯ ಬಹುತೇಕ ಸಾಹಿತ್ಯಾಸಕ್ತರಿಗೆ ಪುಟ್ಟಣ್ಣ ಗೌಡರ ಬದುಕು, ಬರಹಗಳ ಬಗ್ಗೆ ಹೆಚ್ಚು ಗೊತ್ತಿರಲಿಲ್ಲ, ಅದಿರಲಿ, ಆದರೆ ನನ್ನನ್ನು ಕಾಡಿದ ಪ್ರಶ್ನೆ ಏನೆಂದರೆ ಕುವೆಂಪು ಆಗಲಿ, ತೇಜಸ್ವಿಯಾಗಲಿ ತಮ್ಮ ಬರಹಗಳಲ್ಲಿ ಕೊಳಂಬೆ ಪುಟ್ಟಣ್ಣ ಗೌಡರ ಬದುಕು ಬರಹ ಹಾಗೂ ಕನ್ನಡ ಭಾಷಾ, ಪ್ರೇಮ, ಬದ್ಧತೆ ಕುರಿತಂತೆ ಪ್ರಸ್ತಾಪಿಸಿದ್ದಾರಾ ಎಂಬುದು? ಈ ಬಗ್ಗೆ ಕನ್ನಡ ವಿವಿಯ ಡಾ.ಶಿವಾರೆಡ್ಡಿ ಮಾಹಿತಿ ನೀಡಿ ಪುಟ್ಟಣ್ಣಗೌಡರ ಪದ್ಯಗಳ ಸಂಕಲನಕ್ಕೆ ಕುವೆಂಪು ಮೆಚ್ಚುಗೆಯ ಮುನ್ನುಡಿಯೊಂದನ್ನು ಬರೆದಿದ್ದಾನೆಂದು ತಿಳಿಸಿದರು.



ಕುವೆಂಪು, ಬೇಂದ್ರೆ, ಅಡಿಗರು, ಮಾಸ್ತಿ ಮುಂತಾದವರು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಜೃಂಭಿಸುತ್ತಿದ್ದಾಗ ಅವರ ನಡುವೆ ತಲೆಯೆತ್ತುವ ಹಾದಿಯು, ಮೂಲತಃ ಸಂಕೋಚ ಹಾಗೂ ಘನತೆಯುಳ್ಳ ಕೊಳಂಬೆಯವರಿಗೆ ಕಷ್ಟವಾಗಿದ್ದಿರಬೇಕು. ಆದರೆ ವಿದ್ವತ್‌ಪೂರ್ಣ ವ್ಯಕ್ತಿತ್ವದ ಕೊಳಂಬೆ ಪುಟ್ಟಣ್ಣಗೌಡರು ಕನ್ನಡ ವಿಮರ್ಶಕರ ನಜರಿಗೆ ಬೀಳಲಿಲ್ಲವೇಕೆಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

ಮೂಲತಃ ಸುಳ್ಯದವರಾದ ಪುಟ್ಟಣ್ಣಗೌಡರ ಫೋಟೋ ಹಾಗೂ ಅವರ 'ಕಾಲೂರ ಚೆಲುವೆ' ನೀಳ್ಗವಿತೆಯ ಪುಸ್ತಕದ ಮುಖಪುಟವನ್ನು ಇಲ್ಲಿ ಪ್ರಕಟಿಸಿದೆ.

ಯಾರಾದರೂ ಆಸಕ್ತಿವಹಿಸಿ ಕೊಳಂಬೆ ಪುಟ್ಟಣ್ಣಗೌಡರ ವ್ಯಕ್ತಿತ್ವ ಹಾಗೂ ಬರಹ ಕುರಿತಂತೆ ಬರೆದರೆ ಚೆನ್ನ...

• ಪಾರ್ವತೀಶ

ಋಷಿ ಮುನಿಗಳೂ ಮಾಂಸ ತಿನ್ನುತ್ತಿದ್ದರು

ಲಂಕೇಶ್ ಪ್ರಕಾಶನ ಪ್ರಕಟಿಸಿರುವ, ನಾ. ದಿವಾಕರರಿಂದ ಭಾಷಾಂತರಗೊಂಡಿರುವ ಡಿ.ಎನ್.ಝಾರವರ 'ಗೋವು ಪವಿತ್ರ ಎಂಬ ಮಿಥ್ಯೆ' ಪುಸ್ತಕವನ್ನೋದಿದ ಬಳಿಕ ಅದರ ಬಗ್ಗೆ ನನ್ನ ಕೆಲವು ಅನ್ನಿಸಿಕೆಗಳನ್ನು ಹಂಚಿಕೊಳ್ಳೋಣವೆನ್ನಿಸಿ ಇದನ್ನು ಬರೆಯುತ್ತಿದ್ದೇನೆ.

ಪುಸ್ತಕದ ಮಟ್ಟಿಗೆ ಹೇಳುವದಾದರೆ ಅದರ ವಿನ್ಯಾಸ, getup ಆಕರ್ಷಕವಾಗಿದೆ. ಮುದ್ರಣವೂ ಅಕ್ಷರದೋಷ, ಇತ್ಯಾದಿಗಳಿಂದ ಮುಕ್ತವಾಗಿದ್ದು ಸುಂದರವಾಗಿದೆ. ಹೃತ್ಪೂರ್ವಕ ಅಭಿನಂದನೆಗಳು.

ಬಹಳ ವರ್ಷಗಳ ಹಿಂದೆ ಯಾವುದೋ ಮಾಧ್ಯಮಿಕ ತರಗತಿಯ ಕನ್ನಡ ಪಠ್ಯ ಪುಸ್ತಕದಲ್ಲಿ ಕಥೆಯೊಂದನ್ನು ಓದಿದ್ದೆ. ಇಲ್ವಲನೆಂಬ ರಾಕ್ಷಸನು ಬ್ರಾಹ್ಮಣ(?)ನ ವೇಷ ಧರಿಸಿ ತನ್ನ ಮನೆಯ ಬಳಿ ಹಾದುಹೋಗುತ್ತಿದ್ದ ಯಾತ್ರಿಗಳನ್ನು ಮನೆಗೆ ಕರೆತಂದು ಸತ್ಕರಿಸಿ ಭೋಜನಕ್ಕೆ ಕೂರಿಸುತ್ತಿದ್ದನಂತೆ. ವಾತಾಪಿಯೆಂಬ ತನ್ನ ಸೋದರನನ್ನು ಕೊಂದು ಅವರಿಗೆ ಮಾಂಸದೂಟವನ್ನು ಬಡಿಸುತ್ತಿದ್ದನಂತೆ. ಭೋಜನಾನಂತರ "ವಾತಾಪಿ ಎದ್ದು ಬಾ!" ಎಂದಾಗ ವಾತಾಪಿಯು ಆ ಅತಿಥಿಯ ಹೊಟ್ಟೆಯನ್ನು ಒಳಗಿನಿಂದ ಬಗೆದು ಹೊರಬರುತ್ತಿದ್ದನಂತೆ. ಇಬ್ಬರೂ ಸತ್ತವನ ಧನಕನಕಾದಿಗಳನ್ನು ತೆಗೆದುಕೊಳ್ಳುತ್ತಿದ್ದರಂತೆ. ಇದನ್ನು ತಿಳಿದ ಅಗಸ್ತ್ಯ ಮಹರ್ಷಿಯು



ಯಾತ್ರಿಯಾಗಿ ಹೋಗಿ ಔತಣವನ್ನು ಸ್ವೀಕರಿಸಿ, ಇಲ್ವಲನು ಕರೆಯುವದಕ್ಕೆ ಮುನ್ನವೇ "ವಾತಾಪಿ ಜೀರ್ಣೋಭವ!" ಎಂದು ಅವನನ್ನು ಹೊರಬರದಂತೆ ಮಾಡಿದನಂತೆ.

ಆಗಲೇ ನನ್ನಲ್ಲಾದ ಪ್ರಶ್ನೆ: ಬ್ರಾಹ್ಮಣರು, ಋಷಿಗಳು ಆ ಕಾಲದಲ್ಲಿ ಮಾಂಸ ತಿನ್ನುತ್ತಿದ್ದರೇ? ವರ್ಷಗಳ ಬಳಿಕ, ಅಶ್ವಮೇಧ ಮೊದಲಾದ ಯಾಗಗಳಲ್ಲಿ ಅವರು ಪ್ರಾಣಿಗಳ ಮಾಂಸವನ್ನು ತಿನ್ನುತ್ತಿದ್ದರು ಎಂದು ತಿಳಿದೆ. ಮಾಂಸವನ್ನು ತಿನ್ನುತ್ತಿದ್ದರೆಂದ ಮೇಲೆ ದನವಾದರೇನು, ಕುದುರೆ, ಕುರಿಯಾದರೇನು ಎಂದುಕೊಂಡು, ಜೈನ ಅಥವಾ ಬೌದ್ಧ ಧರ್ಮದ ಪ್ರಭಾವದಿಂದ ಕಾಲಕ್ರಮೇಣ ಬಿಟ್ಟಿರಬೇಕು ಎಂದು ಊಹಿಸಿಕೊಂಡೆ. 'ಗೋವು ಪವಿತ್ರ ಎಂಬ ಮಿಥ್ಯೆ' ಪುಸ್ತಕದಲ್ಲಿ ಹಲವಾರು ಉದಾಹರಣೆಗಳೊಂದಿಗೆ ಹಿಂದೆ ಭಾರತೀಯರೆಲ್ಲರೂ ಮಾಂಸಾಹಾರಿಗಳಾಗಿದ್ದರು; ಗೋವನ್ನೂ ತಿನ್ನುತ್ತಿದ್ದದ್ದು ಅದು ಪವಿತ್ರವೆಂದಲ್ಲ (ದ್ರಾಕ್ಷಾರಸ ಯೇಸುವಿನ ರಕ್ತವೆಂದು ನಂಬಿ ಕುಡಿದು, ಅವನ ಸದ್ಗುಣಗಳು ತಮ್ಮಲ್ಲಿ ರಕ್ತಗತವಾಗುವುದೆಂಬ ನಂಬಿಕೆಯಿರುವಂತೆ); ಬರೇ ಆಹಾರವೆಂದು ಪರಿಗಣಿಸಿ, ಎಂದು ಪ್ರತಿಪಾದಿಸಿದ್ದಾರೆ. ಅನುಬಂಧದಲ್ಲಿ ಡಾ. ಅಂಬೇಡ್ಕರರ ಲೇಖನ ವಿಚಾರಪೂರ್ಣವಾಗಿದೆ.

ಪವಿತ್ರ ಎಂಬುದಕ್ಕೆ ಪಾವಿತ್ರ್ಯ ಎಂದಿದೆಯಲ್ಲದೆ ಪಾವಿತ್ರ್ಯತೆ ಎಂದು ಪುಸ್ತಕದಲ್ಲಿರುವುದು ಸರಿಯಲ್ಲ, ಅಲ್ವಾ?

ಪುಸ್ತಕದಲ್ಲಿ ಬಹುತೇಕವಾಗಿ ಅಭಿಪ್ರಾಯಗಳನ್ನು ಮಂಡಿಸುವಾಗ ವೇದಗಳಿಂದ ಸೂಕ್ತಗಳನ್ನು ಸಂಸ್ಕೃತದಲ್ಲಿರುವಂತೆ ಉದ್ಧರಿಸದೇ ಇರುವುದರಿಂದ, ಹೆಚ್ಚಿನ authenticity ಕಾಣಿಸದು. Of course, ಅಲ್ಲಲ್ಲಿ ಶ್ಲೋಕ/ಸೂಕ್ತಗಳ cross references ಅನ್ನು ಕೊಟ್ಟಿರುವುದರಿಂದ ಅವುಗಳನ್ನು ನೋಡಬಹುದು ಎಂದು ಸಮಾಧಾನಪಟ್ಟುಕೊಳ್ಳೋಣವೇ?

ಎಲ್ಲಾ ಬಗೆಯ ಪ್ರಾಣಿ-ಪಕ್ಷಿಗಳನ್ನು ತಿನ್ನುತ್ತಿದ್ದರೂ ಗೋವನ್ನು ಮಾತ್ರ ಪವಿತ್ರ, ಪೂಜನೀಯ ಎಂದು ಪರಿಗಣಿಸಲು ಕಾರಣವೇನಿದ್ದಿರಬಹುದು ಎಂದು ಪುಸ್ತಕದಲ್ಲಿ ಕಾಣಸಿಗಲಿಲ್ಲ, ಹಂದಿಯನ್ನು ಹಾಗೆ ಭಾವಿಸಬಹುದಿತ್ತು, ಏಕೆಂದರೆ ಅದು ದಶಾವತಾರಗಳಲ್ಲಿ ಒಂದಾಗಿತ್ತಲ್ವಾ? ಹಾಗೆ ನೋಡಿದರೆ ವಿಷ್ಣುವಿನ ಅವತಾರಗಳಲ್ಲಿ ಮೀನು, ಆಮೆ, ಹಂದಿ, ಯಾವುದೂ ಪವಿತ್ರ-ಪೂಜನೀಯವಲ್ಲ.

ಝಾರವರ ಮೂಲಕೃತಿ ಯಾವಾಗ ಪ್ರಕಟವಾಯಿತೆಂದು ಪುಸ್ತಕದಲ್ಲಿಲ್ಲದ ಕಾರಣ ಕುತೂಹಲಕ್ಕೆ ಸಮಾಧಾನ ಸಿಗಲಿಲ್ಲ.


ಮಾಂಸವನ್ನು ತಿನ್ನುವಾಗ ಅದು ದನದ್ದೆಂದು ತಿಳಿಯದೆ ತಿಂದ ಹಿಂದೂಗಳು ಪರಿತಾಪ/ಪಶ್ಚಾತ್ತಾಪ ಪಡುತ್ತಿದ್ದರೆ, ಪುಸ್ತಕವನ್ನೋದಿ ನಮ್ಮ ಪೂರ್ವಜರು, ಗೋತ್ರದ ಋಷಿಗಳು, ಮೊದಲಾದವರೂ ಎಲ್ಲಾ ತರದ ಪ್ರಾಣಿ-ಪಕ್ಷಿಗಳನ್ನು ತಿನ್ನುತ್ತಿದ್ದರಲ್ಲಾ, ಇನ್ನೇಕೆ ಚಿಂತೆ, ಎಂದು ಸಮಾಧಾನಪಟ್ಟುಕೊಳ್ಳಬಹುದು.

ಪುಸ್ತಕವನ್ನೋದಿದ ನಂತರ 'ವಂಶವೃಕ್ಷ'ದ ಶ್ರೋತ್ರಿಯ ನೆನಪಾಯಿತು. ತಮ್ಮ ವಂಶವೃಕ್ಷ ಬುಡ ಕಳಚಿ ಬಿದ್ದಾಗ, ಸತ್ಯ ಮಿಥ್ಯದ ಪರದೆಯನ್ನು ಛಿದ್ರಗೊಳಿಸಿದಾಗ, ಎಲ್ಲದರ ನಿರರ್ಥಕತೆಯನ್ನು ಕಂಡ ಶ್ರೋತ್ರಿಯಗಳು ನಿರ್ಲಿಪ್ತರಾಗಿ ಎಲ್ಲವನ್ನೂ ಎಲ್ಲರನ್ನೂ ಬಿಟ್ಟು ಹೊರಟುಹೋಗುತ್ತಾರೆ. ಆದರೆ, ನಾವು ಯಾವುದನ್ನು ಪವಿತ್ರ, ಪೂಜನೀಯ, ಮಾತೆ, ಎಂದೆಲ್ಲಾ ನಂಬಿದ್ದೆವೋ, ಅವೆಲ್ಲಾ ಯಾವವೂ ಯಾವತ್ತೂ ದಿಟವಾಗಿರಲಿಲ್ಲ; ನಮ್ಮ ಪೂರ್ವಜರು, ಋಷಿಗಳು, ವೇದ ಇತ್ಯಾದಿಗಳ ಕರ್ತೃಗಳು ಅವನ್ನು ಹಾಗೆ ಪರಿಗಣಿಸಿರಲೂ ಇಲ್ಲ, 'ಗೋವು ಪವಿತ್ರ, ಪೂಜನೀಯ ಎಂಬುದು ಮಿಥ್ಯೆ' ಎಂದರಿತ ಮೇಲೂ ನಮ್ಮ ಜನ ಅರಿವಿಗೂ ನಂಬಿಕೆಗೂ ಸಂಬಂಧವಿಲ್ಲದಂತಿರುತ್ತಾರೇನೋ?

ಧಾರ್ಮಿಕ-ರಾಜಕೀಯ ಕಾರಣಗಳಿಗೆ ಏನೇನೋ ನಂಬಿಕೆ, ಪದ್ಧತಿ, ಸಂಪ್ರದಾಯಗಳನ್ನು ಮನುಷ್ಯರು ಸೃಷ್ಟಿಸುತ್ತಾ ಬಂದಿದ್ದಾರೆ. ತಾಳಿ, ಅರಿಸಿನ, ಕುಂಕುಮ, ಕಾಲುಂಗುರ ಏನೆಲ್ಲಾ..! ಇವೆಲ್ಲಾ ಬಹುಶಃ ಯವನರ ದಾಳಿಗಳ ಪರಿಣಾಮದಿಂದ ಬಂದಿರಬಹುದು. ಸೀತೆಯಾಗಲೀ, ದ್ರೌಪದಿಯಾಗಲೀ, ದಮಯಂತಿಯಾಗಲೀ ತಾಳಿ, ಅರಸಿನ ಕುಂಕುಮಗಳನ್ನು ಧರಿಸಿದ್ದರೆ ಸಿನಿಮಾ-ನಾಟಕಗಳಲ್ಲಿ ಮಾತ್ರ ಇರಬಹುದೇನೋ! At least ಇಂದಿನ ಯುವತಿಯರು ಅವನ್ನೆಲ್ಲಾ ಸದ್ದಿಲ್ಲದೇ ಬದಿಗಿರಿಸಿದ್ದಾರೆ ಎಂಬುದು ಸಂತಸದ ಸಂಗತಿ.

• ಐನಂಡ ಪ್ರಭುಕುಮಾರ್

ತೀರ್ಪು



ಈ ನೆಲದ ಹಲವರು ನಂಬಿಕೆಯಿಂದ ಹೇಳುವರು-ನೀನು ದೇವರು
ಸಕಲ ಚರಾಚರದರೆಲ್ಲದರಲ್ಲೂ ಇರುವವನೂ ಕೊಡುವವನೂ, ಆದರೆ
ನಿನಗೂ ಒಂದಂಗುಲ ಜಾಗ ಬೇಕಿತ್ತೇ ರಾಮ? ಈಗ ತೀರ್ಪಿನ ಸುತ್ತ
ಅನುಮಾನಗಳ ಹುತ್ತ, ನಂಬಿಕೆನೆಂಟನ ನೆಪ ಸುಳ್ಳುಗಳ ಪರಾಕಾಷ್ಠೆ ಸತ್ಯದ ಸಮಾಧಿ
ಬಿಡು, ಈ ನೆಲದ ಮಣ್ಣೀಗಲೂ ರಕ್ತದ ಕಲೆಯ ನೆಂಟ ಬರುದಿನ ಬಂಟ.

ಪ್ರಾಕ್ತನ ಉತ್ಖನನ ಶಾಸನ ನಾಣ್ಯ ಬರಹ ಶಿಲ್ಪವಾಸ್ತು ಮಣ್ಣು ಮಸಿ
ನಿನ್ನ ಜನ್ಮಕ್ಕಿಷ್ಟು ಸಾಕ್ಷ್ಯ ರುಜುವಾತು ಮಾಡದ ಹೊತ್ತು ಮಾನವೀಯತೆಗೆ
ಬಂತೇಕೆ ಕುತ್ತು? ನ್ಯಾಯಸ್ಥಾನಗಳು ದೇವಸ್ಥಾನಗಳು-ಗೊತ್ತಿಲ್ಲದೆ ಏನು,
ಕಟಕಟೆ ಯಾರಪ್ಪನ ಸ್ವತ್ತು ಅಲ್ಲಿ ನೀನಿಲ್ಲದೆ ಮತ್ತೆಲ್ಲಿ ಅಡಗಿದ್ದೆ
ತೀರ್ಪು ಹೊರಬೀಳುವ ಹೊತ್ತು, ಪಾವನವಾಯ್ತು ಬಿಡು ನಿನ್ನ ಜನ್ಮ.

ದೈವೀರೂಪವನು ಕಾಣುವ ಅನುಭವಿಸುವ ಕಣ್ಣು ಮನಸಿಗೀಗ
ಖುಷಿಯಾಗಿದೆ ರಾಮ. ನಿನ್ನ ಹೆಸರಿನದೊಂದು ಬೃಹತ್ ಅಲಂಕೃತ
ಗುಡಿ ಕಟ್ಟಿ ಪೂಜಿಸಿ ಮೆರೆಸುವ ಮಹದಾಸೆಯ ಕಾಲ ಸನ್ನಿಹಿತ
ಎನ್ನುವಾಗಲೂ ಅದಿನ್ನಿಷ್ಟು ಕಾಲ ಮುಂದೋಗುವುದು ಬಹು
ನಿಶ್ಚಿತವಾಗಿದೆ ರಾಮ. ಏನೀ ಒಳಗುಟ್ಟು ತೀರ್ಪಿನ ಹಕೀಕತ್ತು?

• ಎಂ. ಜವರಾಜ್



...ವಿ ದೊಡ್ಡರಂಗೇಗೌಡ ಇದಾನ ಸಬೆಲಿ ಕವನ ಓದಿದನಂತೆ

...ತ್ತಡಿ ದೂರದ ನಂತರ ಏನೂ ಕಾಣದಂತಹ ... ಮುಸುಕಿತ್ತು. ಆ ಮಂಜಿನೊಳಗೆ ಕಾಳಮಾವ ... ಸೀರ ಚಳಿ ತಡೆಯಲು ಧರಿಸಿದ ದುಪಟ ...ಂದಿಗೆ ತಡ್ರಿಸಿಕೊಂಡು ನಡೆಯುತ್ತ ಹೋಟೆಲ್ ...ತ್ತಿದರು. ಆವರನ್ನು ನೋಡಿ ನಕ್ಕ ಉಗ್ರಿ,

...ದೇನ್ರೊ ಮಾವ ಸತ್ತು ಸ್ವರ್ಗದಲ್ಲಿ ನ್ಯಡಿತಾಯಿರಂಗೆ ...ನ್ನೊ" ಎಂದ.

...ರೆ ದಟ್ಟವಾಗಿ ಬೀಳ್ತಾ ಆದೆ. ಕ್ವರೆ ಬದ್ದಷ್ಟೂ ...ಯಿ ಚನ್ನಾಯ್ತವೆ" ಎಂದ ಕಾಳಮಾವ ಅಂತಹ

...ಯ ಲು ಸೀ ಮೆ

...ಷ್ಟಪುರಾಣ

▸ಬಿ. ಚಂದ್ರೇಗೌಡ

...ನ್ನೊ ಅವರೆಕಾಯಿ ಬಗ್ಗೆ ಚಿಂತಿಸಿದ. ಆಗ ಉಗ್ರಿ, ...ನಗೆಲ್ಲೊ ಬ್ರುಮೆ ಕಣಮಾವ, ದೇಸದ ಕಂಬಳಿ ...ಇಲ್ಲಿಗೆ ಬಂದಿರಂಗೆ ಕಾಣ್ತಾ ಅವೆ. ಅವ್ರು ಅವ್ರುರೆಕಾಯಿ ..." ಎಂದ.

...ದೇನೊ ನಿಜ ಕಣೊ ಉಗ್ರಿ. ಆ ಹಾಳು ಕಂಬಳಿ ...ನೋಡಿದ್ರೆ ಅಯ್ಯಪ್ಪ ಸ್ವಾಮಿ ಭಕ್ತರು ಸಬರಿ ...ಬಂದಂಗೆ ಕಾಣ್ತವೆ" ಎಂದ ವಾಟಿಸ್ಸೆ.

...ಬರಿ ಮಲೆಲಿ ಸಾವ್ರರಾರು ಜನ ಸತ್ತರಂತೆ, ...?" ಎಂದಳು ಜುಮ್ಮಿ.

...ವ್ರರಾರು ಜನ ಸತ್ತಿಲ್ಲ ಕಣಕ್ಕ, ನೂರಾರು ಜನ ...ಗೆ ಹದಿನೈದು ಜನ ಸತ್ತವ್ರುರೆ ಅಂತ ಗೊತ್ತಾದಾಗ ...ರು ಬೇಜಾರಾಗಿದ್ರು. ಯಾವಾಗ ನೂರಾರು ...ತ ಗೊತ್ತಾಯ್ತೋ ಆಗವ್ರುರಿಗೆ ಸಮಾಧಾನಾಯ್ತು. ...ಅಂದ್ರೆ, ಸಾವು ಜಾಸ್ತಿಯಾದಂಗೂ ದಿನವ್ಯಲ್ಲ ...ದಬವ್ದುದು ನೋಡು ಅದ್ಕೆ."

...ತ ಅನ್ಯಾಯದ ಮಾತ್ನು ಆಡ್ತರೇನ್ಲ?"

...ನ್ಯಾಯದ ಮಾತಲ್ಲ ಕಣಕ್ಕ. ದುರಂತನೆ ಕಾಯ್ಕಂಡು ... ಛಾನಲ್‌ಗಳ ಮನಸು ಯಂಗಿರತದೆ ಅನ್ನದ ... ನೋಡು, ನಾನು ಯಾರನಾರ ವಡುದ್ರೆ ...ಶನ್ನಿಗೆ ಕಂಪ್ಲೇಂಟ್ ಕೊಡ್ತಾರೆ. ಕೇಸಾಯ್ತದೆ. ...ಆಗಬವ್ದುದು. ಆದ್ರೆ ಸಬರಿಮಲೆಲಿ ನೂರಾರು ...ಳುದು ಸಾಯಿಸಿದ್ರು. ಯಾರ ಮ್ಯಾಲೂ ಒಂದು ...ದೇವರ್‍ಗಂಗೆ ಅಪರಾಧಿಗಳ ಕಾಪಾಡ್ತವನೆ ನೋಡು" ...ವಾಟಿಸ್ಸೆ.

...ಲ್ರೋರ್‍ಯಲ್ಲ ಕುಡುಕರಂತೆ ನಿಜವೇನ್ಲ?"

"ಅಹ, ಸತ್ತ ಜನಗಳ ಮ್ಯಾಲೆ ಯಂತ ಆಪಾದನೆ ಸೃಷ್ಟಿ ಮಾಡ್ತವುರಪ್ಪ ಈ ಜನ?"

"ಅದೇನಾರ ಆಗ್ಲಿ ನೀನ್ಯಾವಾಗಾರ ಸಬರಿ ಮಲಿಗೋಗಬ್ಯಾಡ."

"ನಾನು ಹೋಗದ ಬಿಟ್ಟು ಭಾಳ ವರ್ಸಾಯ್ತು ಕಣಕ್ಕ. ಅಲ್ಲಿ ನೂರಾರು ಜನ ಸತ್ರ ಅಂತ ಯಾರೂ ಹೋಗದ ಬುಡ್ತಾಯಿಲ್ಲ. ಬೇಕಾದೋಟು ಜನ ಹೋಯಿತ್ಲೆ ಅವುರೆ. ಬತ್ಲೆ ಅವುರೆ. ಜನ ಯಾವುದ್ನು ಕೇರ್ ಮಾಡೋದಿಲ್ಲ ಗೊತ್ತೆ. ಸತ್ತೋರಿಗೆ ಕೇರಳದ ಸರ್ಕಾರ ಐದು ಲಕ್ಷ ಕೊಡ್ತದೆ, ಎಡೂರಪ್ಪ ಒಂದು ಲಕ್ಷ ಕೊಡ್ತನೆ, ಇನ್ನೇನಾಗಬೇಕು."

"ಎಡೂರಪ್ಪನ ಗಲಾಟೆ ಎಲ್ಲಿಗೆ ಬತ್ಲ?" ಎಂದ ಕಾಳಮಾವ.

"ಅವ್ರುನ ದ್ಯಸಿಂದ ವಿದಾನಸಭೆನೂ ನ್ಯಡಿಲಿಲ್ಲ, ವಿದಾನ ಪರಿಷತ್ತೂ ನ್ಯಡಿಲಿಲ್ಲ ದ್ವಡಪ್ಪ, ವಿಧಾನಪರಿಷತ್ತಿನಲ್ಲಿ ನಮ್ಮ ದೊಡ್ಡರಂಗೇಗೌಡ ಒಂದು ಕವನ ಬರದು ಓದಿದ್ನಂತೆ.

"ದ್ವಡ್ಡರಂಗ್ಯಾರ್ಲ?"

"ಅವುನು ಕವಿ ದ್ವಡಪ್ಪ. ನೋಡಕ್ಕೆ ಯಂಗವುನಪ್ಪ ಅಂದ್ರೇ, ಲಿಂಗಾಯಿತ್ರ ಮಠದ ಕಾರ್ಯದರ್ಶಿ ಇದ್ದಂಗವುನೆ. ಆದ್ರು ವಳ್ಳೆ ಮನ್ಸ. ಇಂತ ಮಂಜು ನೋಡಿದ್ರೆ ಪದ ಬರಿತನೆ. ಅದ್ಕೆ ನಮ್ಮ ಚುಂಚನಗಿರಿ ಸ್ವಾಮಿಗಳು ಆಗಾಗ್ಗೆ ಕರದು ಕಾಲಿಗೆ ಬೀಳಿಸಿಗಂಡು, ಒಂದು ಪದ ಬರಿ ಅಂತರೆ. ಕೂಡ್ಲೆ ಇವುನು ಹೂಸು ಬುಟ್ಟಂಗೆ ಬರದು ಕೊಡ್ತನೆ. ಅವುರು 'ಚನ್ನಾಗಿದೆ, ನನ್ನ ಬಗ್ಗೆ ಇನ್ನೂ ಚೆನ್ನಾಗಿ ಬರಿ' ಅಂತ ಹೇಳಿಕಳುಸ್ತರೆ. ಇವುನು ಗೊತ್ತಿರೊ ಭಟ್ಟಂಗಿ ಪದನ್ಯಲ್ಲ ಸೇರಿಸಿ ಬರದು ಬರದು ಬಿಸಾಕ್ತನತ್ತಗೆ."

"ಅಂಗರೆ ಚುಂಚನಗಿರಿ ಮಠದ ಕವಿ ಅನ್ನು" ಎಂದ ಉಗ್ರಿ.

"ಮಠದ ಕವಿ ಜೊತೆಗೆ ಸಿನುಮ ಹಾಡ್ನೂ ಬರದವುನೆ. ಪರಸಂಗದ ಗ್ಯಂಡೆ ತಿಮ್ಮನಿಗೆ ಹಾಡು ಬರದು ಫೇಮಸ್ ಆದ. ಅದೇ ತರ ಎಡೂರಪ್ಪನ ಮ್ಯಾಲೂ ಪದ ಬರದವುನೆ, ಕೇಳ್ತಿರಾ?"

"ಹೇಳ್ಳ ಅದೇನು ಬರದವುನೆ ನೋಡನ" ಎಂದು ಜುಮ್ಮಿ ಹೇಳಿದಕೂಡಲೆ ವಾಟಿಸ್ಸೆ ದೊರಂಗೌ ಶೈಲಿಯಲ್ಲಿ ಇಲ್ಲದ ಜುಬ್ಬ ಸರಿ ಮಾಡಿಕೊಂಡು,

"ತೇರಾ ಏರಿ ಅಬ್ಬರದಲ್ಲಿ ಯಡ್ಡಿ ಬರುತಾನೇ
ಮರಗಿಡ ಮಲಿಗ್ಯಾವೇ, ಹಕ್ಕಿ ಹಾರ್‍ಯಾವೆ,
ಚಿಲಿಪಿಲಿ ಹಕ್ಕಿ ಹಾರ್‍ಯಾವೇ,
ಬೀರ್‍ಯಾವೇ ಕಲ್ಲು ಬೀರ್‍ಯಾವೇ.
ನಾವ್ ಹಾಡಿ ಕುಣಿಯೋಣ ತಿಮ್ಮಾ,
ನಾವ್ ನೋಡಿ ನಲಿಯೋಣ ತಿಮ್ಮಾ,

ಬೂಕನ ಕೆರೆಯ ಬುಳ್ಳನು ಹೋದ ಶಿಕಾರಿಪುರಕ್ಕೇ,
ಮೊಣಕೈಯಂಗಿ ತುಂಡು ಚೆಡ್ಡಿ ಲಾಟಿ ಹಿಡಕೊಂಡು,
ಮೈತ್ರಾದೇವಿ ಮದುವೆಯಾಗಿ, ಮಾವನ ಮನೆಯ
ಮುಂಡಾಮೋಚಿ, ವಿಧಾನಸೌಧಕೆ ಲಗ್ಗೆಯಿಟ್ಟು
ಲಾಗ ಹೊಡೆದಾನೊ, ಯಡ್ಡಿ ಲಾಗ ಹೊಡೆದಾನೊ.
"ತೇರ"

ಆಪಾದನೆಗಳು ಅಂಟಿಕೊಂಡರೂ ಜಗುತ್ತಲೆಯಿಲ್ಲಾ
ಶಿಕಾರಿಪುರಕೂ ವಿಧಾನಸೌಧಕು ಫರಕೆಯಿಲ್ಲಲ್ಲೊ
ಬಂದಲಾಗಾಯ್ತು ಬಿಡುವೆಯಿಲ್ಲ ನುಂಗುತ



ಭೂಮಿಯಾ
ಗುಡ್ಡಗಳನ್ನು, ರೆಡ್ಡಿಗೆ ವಹಿಸಿ, ಸಮತಟ್ಟನ್ನು
ಸಮಂದಿಗೊಹಿಂಸಿ, ಸತ್ಯವೆ ಸುಳ್ಳು, ಸುಳ್ಳೇ
ಸತ್ಯ ಎಂದು ಕುಣಿದಾನೊ,
ಯಡ್ಡಿ ಕುಣಿದೇ ಕುಣಿದಾನೊ,
"ತೇರಾ"

ಕೋರ್ಟಿಗೂ ಆಂಜದೆ ಲೋಕಕೂ ಅಂಜದೆ
ಭಂಡಬಿದ್ದಾನೊ,
ಮಠಗಳ ಮಂದಿಯ ಆಸಿರ್ವಾದ ಬೇಡಿ
ನಿಂತಾನೊ,
ಕಾಲಿಗೆ ಬಿದ್ದರೆ ಕಾಲಲಿ ವದೆಯುತ,
ಕಾಲಲಿ ವದ್ದರೆ ಕಾಲಿಗೆ ಬೀಳುತ,
ನಕ್ಸಂತ ವಂಟಾನೊ, ಯಡ್ಡಿ ನಕ್ಸಂತ ವಂಟಾನೊ,
"ತೇರ"

ಪತ್ರಿಕೆಯವರಿಗೆ ಕಾಸನು ಕೊಟ್ಟು ಭ್ರಷ್ಟರ
ಮಾಡಿಟ್ಟಾ,
ಕಾವಿ ಜನರಿಗೆ ಹಿಂಡಿಯ ಕೊಟ್ಟು ಹಂದಿಯ
ಮಾಡಿಟ್ಟ,
ಜಾತಿಜನಗಳು ಉಸಿರೇಯಿಲ್ಲದೆ ಮೌನ
ತಳದಾರೇ,
ದ್ಯಾವನ ಮಕ್ಕಳು ಗಾಳಿಯ ಗುದ್ದುತ ಸಿದ್ದನ
ಹಿಂದವರೆ,
ತಿರಗಾ ಸಿದ್ದನ ಹಿಂದವರೇ,
ತೇರಾ ಏರಿ ಅಬ್ಬರದಲ್ಲಿ ಯಡ್ಡಿಯು ಬರುತಾನೆ,
ಭೂಮಿ ನಡುಗ್ಯಾದೇ ಮರಗಳು ಮನಿಗ್ಯಾವೆ."

ಎಂದು ವಾಟಿಸ್ಸೆ ಪರಸಂಗದ ಗೆಂಡೆತಿಮ್ಮನಂತೆ ಕೈಯ್ಯಾಡಿಸುತ್ತ ಹೇಳಿ,

"ಯಂಗದೆ ದ್ವಡಪ್ಪ ಕವನ?" ಎಂದ.

"ಚನ್ನಾಗ್ ಬರದವುನೆ ಕಂಡ್ಯ. ಎಡೂರಪ್ಪ ಇರುದು ಅಂಗೆಯಾ. ಇವುನು ಬರದಿರದು ಅಂಗೆಯ. ಒಂಥರಾ ಲಾವಣಿ ಇದ್ದಂಗದೆ" ಎಂದ ಕಾಳಮಾವ.

"ದ್ವಡ್ಡರಂಗೇಗೌಡನ್ನ ನೋಡಿದ್ರೆ ಒಂಥರಾ ಹಳಿಸೋಗಿರೊ ಬಿಸಿಬೇಳೇ ಬಾತಿನಂಗೆ ಕಾಣ್ತನೆ. ಅವುನು ಇಂತ ಕವನ ಬರಿಲಾರ ಕಣೊ" ಎಂದ ಉಗ್ರಿ.


"ಕರಟ್ಟಾಗಿ ಗೆಸ್ ಮಾಡಿದೆ ಕಣೊ ಉಗ್ರಿ. ದೊಡ್ಡರಂಗೇಗೌಡ ಇಂತ ಕವುನ ಬರಿಯದಾದ್ರೆ ಅವುನು ಇದಾನಸಭೆ ವಳಿಕೋಯ್ತಿರಲಿಲ್ಲ. ಶಿವಗಂಗೆ ಭ್ಯಟ್ಟದತ್ರ ತಿರುಗಾಡೋನು, ಇನ್ನೂ ವಳ್ಳೆ ಕವುನ ಬರಿಯೋನು."

"ಅಂಗರವುನ ಬರದದ್ದಲವೇನ್ಲ?" ಎಂದಳು ಜುಮ್ಮಿ.

"ಈ ಜನುಮದಲ್ಲಿ ಈತರ ಬರಿಯದಿಲ್ಲ ಕಣಕ್ಕ ಅವುನು. ಯಾಕೆ ಅಂದ್ರೇ ತುಂಬ ವಳ್ಳೆ ಮನುಸ ಅವುನು. ಜಗದ್ಗುರುಗಳ ನೋಡಿದೇಟಿಕೆ ಅವುನ ಕೈಯಿ ಅವರ ಪಾದದ ಕಡಿಕೇ ಹೋಯ್ತವೆ, ರಾಜಕಾರಣಿಗಳು ಕಂಡ್ರೆ ಬಾಲ ಅಲ್ಲಾಡುಸ್ತನೆ. ಆದ್ರಿಂದ ಹಿ ನೆವರ್ ರೈಟ್ ದಿಸ್ ಟೈಪ್ ಆಫ್ ಪೊಯಮ್."

...ಟಲಿಯ ಹಳೇ ಹುಲಿ

...ಇಟಲಿಯಲ್ಲೀಗ ಬರ್ಲುಸ್ಕೋನಿ ಎಂಬ ಸಾಹುಕಾರನ ದರ್ಬಾರು; ಈತ ಪ್ರಧಾನಿ. ...ಯ ಅತ್ಯಂತ ಪ್ರಭಾವಿ ಪತ್ರಿಕೆಗಳು, ಟಿವಿಯ ಒಡೆಯ. ಆನೆಯನ್ನು ಜರಿದು ಒಂಟೆ



ಹುಟ್ಟಿದಂತೆ ಈ ಬರ್ಲುಸ್ಕೋನಿ ವೃತ್ತಿ ರಾಜಕಾರಣಿಗಳ ಭ್ರಷ್ಟತೆ, ಕಿಡಿಗೇಡಿತನವನ್ನು ಟೀಕಿಸಿ ಅಧಿಕಾರಕ್ಕೆ ಬಂದ. ಆದರೆ ಈಗ ಈ ಪ್ರಧಾನಿ ತೊಂದರೆಯಲ್ಲಿದ್ದಾನೆ. ಇವನ ಸಂಪತ್ತಿನ ಸಾಮ್ರಾಜ್ಯ ಹೇಗೆ ಬಂತು- ಎಂದು ತನಿಖೆಯಾಗಿ ಇವನ ತಮ್ಮನ ದಸ್ತಗಿರಿಯಾಗಿದೆ. ಬರ್ಲುಸ್ಕೋನಿ ಕೋರ್ಟಿನ ಅಧಿಕಾರ ತಗ್ಗಿಸಲು ಯತ್ನಿಸುತ್ತಿದ್ದಾನೆ. ಅಖಂಡ ಶ್ರೀಮಂತಿಕೆ ಮತ್ತು ಅಪರಿಮಿತ ಅಧಿಕಾರ ಒಟ್ಟಾಗಿರಲು ಸಾಧ್ಯ ಎಂದು ತೋರಲು ಹೆಣಗುತ್ತಿದ್ದಾನೆ.

ಆದು ಸಾಧ್ಯವಾಗುತ್ತಿಲ್ಲ, ಹಾಗೆ ಸಾಧ್ಯವಾಗದಿರುವುದು ಹಳೇ ಹುಲಿಯಂಥ ಇಂದ್ರೋ ಮಾಂಟನೆಲಿಯಂಥ ಪತ್ರಕರ್ತರಿಂದ 85 ವರ್ಷದ ಈ ಮಾಂಟನೆಲ್ಲಿ ಇಟಲಿಯ ರಾಜಕೀಯ, ರಾಜಕಾರಣಿಗಳ ಆಟಗಳನ್ನೆಲ್ಲ ಬಲ್ಲವನು, ಎರಡನೆಯ ಮಹಾಯುದ್ಧದ ಕಾಲದಲ್ಲಿ ಫ್ಯಾಸಿಸ್ಟ್ ಮುಸೋಲಿನಿಯೆಂಬ ಸರ್ವಾಧಿಕಾರ...ಗಳನ್ನೆಲ್ಲ ಅರಿತು ಅವನ ಅರೆಸ್ಟ್‌ಗಾಗಿ ಪ್ರಯತ್ನಿಸಿದವನು. ಸ್ಪೇನಿನ ಯುದ್ಧದಲ್ಲಿ ... ಸತ್ತೇಹೋದ ಎಂಬ ಪುಕಾರೆದ್ದಿದ್ದರೂ ಬದುಕಿಬಂದಿದ್ದ ಮಾಂಟನೆಲ್ಲಿ, ಇವತ್ತು ...ಸ್ಕೋನಿಯ ದ್ವಿಮುಖ ನೀತಿಯ, ಅಪ್ರಾಮಾಣಿಕ ರಾಜಕೀಯದ, ಅಧಿಕಾರ ...ಂಡಿಹೋಗದ ಉಗ್ರ ಟೀಕಾಕಾರ ಈ ಮಹಾನ್ ಪತ್ರಕರ್ತ ಮಾಂಟನೆಲ್ಲಿ.

...5 ವರ್ಷ. ಸೆಟ್ಟಗೆ ನಿಲ್ಲುವ ಮನುಷ್ಯ, ಒಂದೇ ನಾಲಗೆಯ ದಿಟ್ಟ ನೈತಿಕವಾಗಿ ...ಳೆದ ಇಟಲಿಯ ಅದ್ಭುತ ಜಿಗುಟು ವ್ಯಕ್ತಿ ಮಾಂಟನೆಲ್ಲಿ, ಯಾವ ಪಾಂಥಲನ್ನೂ ... ಕಿಡಿಸುವುದಿಲ್ಲ, ಯಾವ ಅಧಿಕಾರವೂ ಇವನನ್ನು ಹೆದರಿಸುವುದಿಲ್ಲ.

ಈತ ಗೆಲ್ಲುವುದಾದರೆ-ಜಗತ್ತಿನ ಒಂದು ಅದ್ಭುತ

ಮನುಷ್ಯ ಮಹಾ ನೀಚನೆಂದು ಅರಿತಿದ್ದೇವೆ. ಆತ ತನ್ನ ಮುತ್ತಾತಂದಿರಿಗೆ ಆದ ಅನ್ಯಾಯವನ್ನು ನೆನಪಿಟ್ಟುಕೊಂಡು ರಕ್ತಪಾತಕ್ಕಿಳಿಯಬಲ್ಲ, ಗುಹೆಯ ಮಾನವನಂತೆ ಇವತ್ತು ಕೂಡ ವರ್ತಿಸಬಲ್ಲ, ಅಸೂಯೆ, ಸಿಟ್ಟು, ಆಕರ್ಷಣೆ, ಸ್ವಾರ್ಥ- ಎಲ್ಲರೆದುರು ರಾಷ್ಟ್ರಪ್ರೇಮ, ಮಾನವೀಯತೆ,



ಸೌಹಾರ್ದ, ಸ್ನೇಹ ಮುಂತಾದವೆಲ್ಲ ಕರಗಿಹೋಗುತ್ತವೆ. ಚಿತ್ರ ಕಲ್ಪಿಸಿಕೊಳ್ಳಿ, ನಲವತ್ತು ವರ್ಷದಿಂದ ಈ ಹುಡುಗಿ ಬಲ್ಲ ಯಜಮಾನಿ ಅಸಹಾಯಕಳಾಗಿ, ಏಕಾಂಗಿಯಾಗಿದ್ದಾಗ ಅವಳ ಕುತ್ತಿಗೆ ಸುತ್ತಿದ ಬೆರಳುಗಳು; ದೇವಿಕಾರಾಣಿಗೆ ಆದದ್ದು ಅದು, ಯಾರಿಗಾದರೂ ಆಗುವಂಥದು.

ಮಾನವನ ಬಗ್ಗೆ ಇದನ್ನೆಲ್ಲ ಸುಳ್ಳಾಗಿಸಲು ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್ ಮಂಡೇಲಾ ಮತ್ತು ಮಿತ್ರರು ಪ್ರಯತ್ನಿಸುತ್ತಿದ್ದಾರೆ. ನೂರಾರು ವರ್ಷದಿಂದ ಕಪ್ಪು ಜನರನ್ನು ಬಿಳಿಯರು ಹಿಂಸಿಸಿದರು; ಜೈಲಿಗೆ ನೂಕಿದರು; ಪ್ರತ್ಯೇಕವಾಗಿ ಬದುಕಲು ಕಟ್ಟಾಜ್ಞೆ ಮಾಡಿದರು. ಮಂಡೇಲಾನನ್ನೇ 26 ವರ್ಷ ಜೈಲಿಗೆ ಹಾಕಿ ಕಲ್ಲು ಒಡೆಯಲು ಹಚ್ಚಿದರು, ಒಬ್ಬಂಟಿಯಾಗಿ ನಶಿಸಲು ಬಿಟ್ಟರು.

ಕೊನೆಗೂ ಮಂಡೇಲಾಗೆ ಅಧಿಕಾರ ಬಂತು. ಮನಸ್ಸು ಮಾಡಿದ್ದರೆ ಬಿಳಿಯರನ್ನೆಲ್ಲ ಸಾಲಾಗಿ ನಿಲ್ಲಿಸಿ ಕೊಚ್ಚಿ ಹಾಕಬಹುದಿತ್ತು, ಬಿಳಿ ಹೆಂಗಸರನ್ನು ಕೆಡಿಸಬಹುದಿತ್ತು.

ಅದನ್ನು ಮಾಡಲಿಲ್ಲ.

'ನಮ್ಮ ದೇಶದ ಎಲ್ಲರೂ ಒಂದೇ. ಈ ದೇಶದ ಸಂವಿಧಾನ ಎಲ್ಲರಿಗೂ ರಕ್ಷಣೆ ಒದಗಿಸುತ್ತದೆ. ನೆಮ್ಮದಿಯ ಭರವಸೆ ನೀಡುತ್ತದೆ" ಅಂದ ಮಂಡೇಲಾ. ಆತನೊಬ್ಬ ಹಾಗೆಂದಿದ್ದರೆ ಆಗುತ್ತಿರಲಿಲ್ಲ, ಕಪ್ಪು ಜನರ ಸಂಕುಲವೇ ಅದನ್ನು ಒಪ್ಪಿತು. ಸಹನೆ ಮತ್ತು ಸಹಬಾಳ್ವೆ: ದೇಶ ಕಟ್ಟುವುದಕ್ಕಾಗಿ ಎಲ್ಲರ ಸಹಕಾರ ಮತ್ತು ಸ್ಫೂರ್ತಿ.

ಇಪ್ಪತ್ತನೆಯ ಶತಮಾನದಲ್ಲಿ ಅನ್ಯಾಯ, ರಕ್ತಪಾತ, ಕ್ರೌರ್ಯ ನೋಡಿದವರಿಗೆ ಇದು ಪವಾಡದಂಥ ದೃಶ್ಯ.

ಇದು ಮುಂದುವರಿಯಬಹುದೆ? ಬೆಟ್ ಕಟ್ಟಿ. ಎಲ್ಲ ಹಣಕ್ಕೂ ಮಿತಿ ಇದೆ; ಎಲ್ಲ ಹಣಕ್ಕೂ ರೋಮಾಂಚಕ ಮುಖವಿದೆ.

ನಾವಿಂದು ಎರಡನೆಯದನ್ನು ನಂಬಬಹುದು.

ಆಗಸ್ಟ್ 31, 1994



ಎಲ್ಲಾ ಸತ್ಯಸಂಧರೇ!

ಭ್ರಷ್ಟಾಚಾರವೆಂಬ ಬ್ರಹ್ಮರಾಕ್ಷಸ ತಾಂಡವನೃತ್ಯ ಮಾಡುತ್ತಿದ್ದಾನೆ. ಈಗ ಯಾರ ಬಾಯಲ್ಲಿ ಕೇಳಿದರೂ ಅವನ ಅವಾಂತರದ್ದೇ ಸುದ್ದಿ. ಆಡಳಿತ ಪಕ್ಷ, ವಿಪಕ್ಷ ಎಲ್ಲವೂ ಅದನ್ನ ಕಿತ್ತೆಸೆಯಬೇಕು ಅನ್ನುತ್ತಿವೆ. ಅದಕ್ಕೇ ಇರಬೇಕು. ನಡೆಯದ ವಿಧಾನಸಭೆಗೆ ಯಡ್ಯೂರಪ್ನೋರು ಕೆಂಪು ಬ್ರೀಫ್‌ಕೇಸ್ ಸಹಿತ ಹಾಜರಾಗಿದ್ದರು. ಮಾತಿಗೆ ಮಾತು ಬೆಳೀತು. 'ಭಾಜಪ ಸರ್ಕಾರದ ಅಭಿವೃದ್ಧಿ ಕೆಲಸಗಳನ್ನು ಸಹಿಸಲಾರದೆ ಆಧಾರರಹಿತ ಆರೋಪ ಮಾಡ್ತಿವೆ' ಎಂದು ಹಾದಿಬೀದೀಲಿ ಹೇಳ್ಕೊಂಡು ತಿರುಗ್ತಿರೋ ಅವರು ವಿಧಾನಸಭೆ ಒಳಗೂ ಅದೇ ಆಧಾರರಹಿತ ಆರೋಪ(!) ಮಾಡಿದರೆ ಸಹಿಸಿಕೊಳ್ಳಲು ಆಗಲ್ಲ ಅಲ್ವಾ. 'ನಿಮ್ಮಪ್ಪ ಮಕ್ಕಳ ಜಾತಕಾನೆ ಇಲ್ಲಿದೆ. ಎಲ್ಲ ಬಿಚ್ಚಿಡ್ತೀನಿ' ಅಂತ ಬ್ರೀಫ್‌ಕೇಸ್ ಒಳಗಿಂದ ಫೈಲುಗಳ ಕಂತೆನ ತೆಗೆದು ಅಲ್ಲಾಡಿಸುತ್ತಾ ಗುಡುಗಿದರು. 'ಗುಡುಗು' ಅನ್ನೋ ಪದ ಮಾಧ್ಯಮಗಳ ಸೃಷ್ಟಿ. ಅದರ ಹಿಂದೆ ಏನೂ ಯಾವ ಮಳೆಯೂ ಸುರಿದಂಗೆ ಕಾಣಲಿಲ್ಲ. ಇದು ಹೇಗಿತ್ತಪ್ಪ ಅಂದ್ರೆ ಸಂತೇಲಿ ಹಾವಾಡಿಗರೋನು ಹೆಗಲಚೀಲದಿಂದ ಹೊರಕ್ಕೆ ಹಾವಿನಬುಟ್ಟಿ ತೆಗೀತಾನಲ್ಲ, ಇದರ ಒಳಗೆ ಐತೆ ಭಯಂಕರ ಸರ್ಪಾದುಮರಿ ಅಂತ ಹೇಳ್ತಾನಲ್ಲ ಹಂಗಿತ್ತು. ಆದರಲ್ಲಿ ಎಂತಹ ಹಾವಿತ್ತು? ಅದೇನು ಕೊಳಕ ಮಂಡಲಾನೊ? ನಾಗರಹಾವೊ? ಕ್ಯಾರೆ ಹಾವೊ? ಅಥ್ವ ಹಾವೇ ಇರಲಿಲ್ಲವೊ? ಒಂದೆ ತಿಳಿಯಲ್ಲ ಅಲ್ವಾ. ಇದೂ ಹಂಗೇ ಆಗಿತ್ತು. ಅಂತೂ ಏನೋ ಇದೆ ಅನ್ನೋ ಹಂಗೆ ಆಡಿದ್ದಂತೂ ನಿಜ. ಆ ಬುಟ್ಟಿಯಲ್ಲಿ ಎಂತಹದ್ದೋ ಅಪಾಯಕರ ಹಾವು ಇರುವುದು ನಿಜ ಅನ್ನುವುದು ಕೆಲವರ ಅಭಿಪ್ರಾಯ: ಯಾಕೆಂದರೆ ಅದರಲ್ಲಿ ಏನಿದೆ ಅಂತ ರಾಷ್ಟ್ರಪತಿಗಳಿಗೆ, ಪ್ರಧಾನಮಂತ್ರಿಗಳಿಗೆ ತಿಳುಸ್ತೀನಿ ಅಂತ ಅವರೇ ಹೇಳಿದ್ದಾರೆ. ಅಲ್ಲ ಇಲ್ಲೇ ಕಾನೂನುರೀತಿ ಕ್ರಮ ತೆಗೆದುಕೊಳ್ಳಬಹುದಿತ್ತಲ್ಲಾ ಅಂದ್ರೆ ಯಡ್ಯೂರಪ್ನೋರ ಸರ್ಕಾರಕ್ಕೆ ಆ ಅಧಿಕಾರನೇ ಇಲ್ವೊ ಏನೊ! ಯಾರಿಗೆ ಗೊತ್ತು?



ಅಂತೂಇಂತೂ ಯಡ್ಯೂರಪ್ನೋರು ಅಪ್ಪ, ಮಕ್ಕಳ್ದ ಬಿಚ್ಚಲಿಲ್ಲ. ಬಿಚ್ಚಿ ತೋರಿಸಿದ್ರೆ ಚೆನ್ನಾಗಿತ್ತು. ಇರಲಿ. ಮಾರನೆದಿನ ರೇವಣ್ಣೋರು ಸೂಟ್‌ಕೇಸ್ನೆ ಹೊರುಸ್ಕಂಬಂದ್ರು. 'ಇದೇನ್ರಿ ಇದು? ಇದನ್ನೆಲ್ಲ ತರಂಗಿಲ್ಲ' ಅಂದದ್ಕೆ 'ಅವ್ರು ಬ್ರೀಫ್‌ಕೇಸ್ ತಂದಿದ್ರು. ನಾನು ಸೂಟ್‌ಕೇಸ್ ತಂದಿವ್ನಿ' ಅಂದ್ರು. 'ಅದ್ರಲ್ಲಿ ಫೈಲುಗಳಿದ್ವೊ ಕಣ್ರಿ' ಅಂದದ್ಕೆ 'ಇದ್ರಲ್ಲೂ ಭ್ರಷ್ಟಾಚಾರ, ಡಿನೋಟಿಫಿಕೇಶನ್ ದಾಖಲೆಗಳಿವೆ' ಅಂದ್ಬುಟ್ರು! ಅಪ್ಪ ಮಕ್ಕಳದ್ದು 'ಬ್ರೀಫ್‌ಕೇಸ್ ಹಗರಣ,' ಮುಖ್ಯಮಂತ್ರಿಗೋಳ್ದು 'ಸೂಟ್‌ಕೇಸ್ ಹಗರಣ' ಅಂದಂಗಾಯ್ತು. ಅಲ್ಲಾ ಯಡ್ಯೂರಪ್ನೋರು ಬ್ರೀಫ್‌ಕೇಸ್ ಬದಲು ಸೂಟ್‌ಕೇಸ್ನೇ ತಂದಿದ್ರೆ ಇವರೇನು ಮಾಡ್ತಿದ್ದರೂ ಅಂತಾವ.....

ಅದ್ಯಾವುದೋ ಸಿನಿಮಾದಲ್ಲಿ ಅಗಸನಿಗೆ ಬಟ್ಟೆ ಹಾಕೋಕೆ ಬಟ್ಟಿ ಕೂಳು ತಿನ್ಕೊಂಡು ಯಾರ್ದೊ ಮನೇಲಿ ಬಿದ್ದಿರೋ ಇಬ್ರು ಪೈಪೋಟಿಗೆ ಬೀಳ್ತಾರೆ. ಜಿದ್ದಿಗೆ ಬಿದ್ದವ್ರಂತೆ ಮಡಿ ಮಾಡಿ ಇಸ್ತ್ರಿ ಹಾಕಿಸಿದ್ದ ಬಟ್ಟೆಗಳನ್ನೂ ಅಗಸನಿಗೆ ಹಾಕ್ತಾರೆ. ಅವು ಮುಗೀತಿದ್ದಂತೆ ಮೈಮೇಲಿನ ಬಟ್ಟೇನೂ ಬಿಚ್ಚಿ ಹೊಗೆಯಲು ಹಾಕ್ತಾರೆ. ಯಾರದ್ದೋ ದುಡ್ಡು ಯಲ್ಲಮ್ಮನ ಜಾತ್ರೆ! ಈ ಸೂಟ್‌ಕೇಸ್, ಬ್ರೀಫ್‌ಕೇಸ್ ಕಿತ್ತಾಟ ನೋಡಿದ್ರೆ ಇದು ಹಂಗೇನೇ ಅನ್ನಿಸುತ್ತೆ....

****

ಇತ್ತೀಚೆಗೆ ನಡೆದಾಡುವ ದೇವರಿಗೂ ಇದರ ಕುರಿತು ಚಿಂತನೆ ಆರಂಭ ಆಗಿರುವಂತಿದೆ. 'ಭ್ರಷ್ಟಾಚಾರ ದೇಶವ್ಯಾಪಿಯಾಗಿದೆ. ಅದರ ನಿರ್ಮೂಲನೆ ಆಗಬೇಕು' ಎಂದು ಮಂಡ್ಯದಲ್ಲಿ ಆಶೀರ್ವದಿಸಿದ್ದಾರೆ. ಆಶೀರ್ವಾದ ಪದ ನಮ್ಮದಲ್ಲ, ಅದು ಭಕ್ತರಕೃಪೆ. ಕಾವಿಧಾರಿಗಳು ಯಾವತ್ತೂ ಮಾತನಾಡುವುದಿಲ್ಲ, ಹೇಳಿಕೆ ನೀಡುವುದಿಲ್ಲ, ಅಷ್ಟೇ ಏಕೆ, ಕೆಮ್ಮುವುದಿಲ್ಲ, ಕ್ಯಾಕರಿಸುವುದಿಲ್ಲ, ಹೂಂಕರಿಸುವುದಿಲ್ಲ. ಅವರ ಕೆಮ್ಮು, ಕ್ಯಾಕರಿಕೆ, ಹೂಂಕಾರ ಎಲ್ಲವೂ ಆಶೀರ್ವಾದವೇ. ಅವರ ದೇಹದಿಂದ ಹೊರಬರುವ ಪ್ರತಿಯೊಂದನ್ನೂ ಆಶೀರ್ವಾದವೆಂದೇ ಪರಿಗಣಿಸಬೇಕೆಂಬುದು ಭಕ್ತರ ಬಲವಂತದ ಕೋರಿಕೆ! ಪೂಜ್ಯರ ಕೃಪಾಪೋಷಿತ ನಾಟಕ ಮಂಡಳಿಯ ಸಕ್ರಿಯ ಸದಸ್ಯರೇ ಭ್ರಷ್ಟಾಚಾರ ಬ್ರಹ್ಮರಾಕ್ಷಸ ಆರಾಧಕರಾಗಿದ್ದಾರೆಂದು ಕೆಲವರ ಆರೋಪ. ಇದನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿಲ್ಲ, ಏಕೆಂದರೆ ಅವರೆಲ್ಲ ಈ ನಡೆದಾಡುವ ದೇವರಿಗೆ ಸತ್ಯ ಸಂಧರಂತೆ ತೋರಿರಬಹುದು!


ಸರ್ವಸಂಗ ಪರಿತ್ಯಾಗಿಗಳಾದವರನ್ನೆ ಭ್ರಷ್ಟಾಚಾರವೆಂಬ ಬ್ರಹ್ಮರಾಕ್ಷಸ ಈ ಪರಿಯ ಮನೋವ್ಯಾಕುಲತೆಯನ್ನು ತಂದಿರಬೇಕಾದರೆ ಅದರಲ್ಲೇ ಸಿಕ್ಕಿಕೊಂಡವರಿಗಂತೂ ಜೀವನ್ಮರಣದ ಪ್ರಶ್ನೆಯಾಗಿ ಕಾಡಿರುವುದರಲ್ಲಿ ಸಂಶಯವೇ ಇಲ್ಲ, ದೇಶದ ಪ್ರಧಾನಿ 'ಭ್ರಷ್ಟಾಚಾರದಿಂದ ದೇಶದ ಪ್ರಗತಿ ಕುಂಠಿತವಾಗಿದೆ' ಎಂದು ಮನನೊಂದು ಹೇಳಿದ್ದಾರೆ. ಆದರೆ ಇದಕ್ಕೆ ಮಂತ್ರಿಮಂಡಲದ ಸದಸ್ಯರಲ್ಲೇ ಸಹಮತ ಇಲ್ಲ. 2ಜಿ ತರಂಗಾಂತರ ಹಗರಣವನ್ನೇ ನೋಡಿ. ಲೆಕ್ಕ ಪರಿಶೋಧಕರು ಅದೆಷ್ಟೋ ಕೋಟಿ ಹಗರಣ ನಡೆದಿದೆ ಎನ್ನುತ್ತಾರೆ. ಈಗಿನ ಅದರ ಮಂತ್ರಿ ಕಪಿಲ್ ಸಿಬಲ್ ಯಾವುದೇ ಹಗರಣ ನಡೆದಿಲ್ಲ; ಸರ್ಕಾರದ ಬೊಕ್ಕಸಕ್ಕೆ ಸೊನ್ನೆ ನಷ್ಟವಾಗಿದೆ ಎನ್ನುತ್ತಾರೆ. 'ಅರೆ ಅದ್ಯಾಗೋ ಮಹಾರಾಯ, ಅಂದರೆ ಎರಡು ಸಾವಿರ ಎರಡರಲ್ಲಿ ಎಷ್ಟಿತ್ತೋ ಅಷ್ಟಕ್ಕೆ ಮಾರಾಟ ಮಾಡಲಾಗಿದೆ' ಅಂತಾರೆ! 'ಈ ಮಾರಾಟ ನಡೆದದ್ದು ಎರಡು ಸಾವಿರದ ಎಂಟರಲ್ವೇನೋ ಮಾರಾಯ, ಅದೆಂಗೆ ಎರಡು ಸಾವಿರದ ಎರಡರ ದರ ನಿಗದಿ ಮಾಡ್ತಿ? ಹಂಗಾದ್ರೆ ಎಲ್ಲಾ ಅಗತ್ಯ ವಸ್ತುಗಳನ್ನೂ ಹಿಂದಿನ ಬೆಲೆಗೆ ಕೊಡ್ರು' ಅಂತೇನಾದ್ರೂ ತರಾಟೆಗೆ ತಗೊಂಡ್ರೆ..... 'ನನ್ನ ಡಿಪಾರ್ಟ್‌ಮೆಂಟಿಗೆ ಅವು ಬರಲ್ಲ, ಸಂಬಂಧಿಸಿದವರ ಕೇಳಿ ಪಡ್ಕಳಿ' ಅನ್ನಬಹುದೇನೋ!

ಆಗಲಪ್ಪ ಮಾರಾಯ. ನಿನ್ನ ಮಾತೇ ಮುಂದಾಗಲಿ. ನಿಮ್ಮ ಘನ ಸರ್ಕಾರ ತಾಳೆ ಎಣ್ಣೆ ಹಗರಣದಲ್ಲಿ ಬಿದ್ದಿರೋ ಥಾಮಸ್ ಅಂತಹ ನೊಣವನ್ನು ತಂದು ಕೇಂದ್ರ ವಿಚಕ್ಷಣದಳದ ಮುಖ್ಯಸ್ಥನ್ನ ಮಾಡಿದೆ. ಭ್ರಷ್ಟಾಚಾರ ಬಲೇಲಿಬಿದ್ದಿರೋ ಬಾಲಕೃಷ್ಣ ಸಾಹೇಬರನ್ನ ತಂದು ಮಾನವಹಕ್ಕು ಆಯೋಗದ ಅಧ್ಯಕ್ಷನ್ನ ಮಾಡಿ ಕುಳ್ಳಿರಿಸಿದೆ. ಇನ್ನು ಜನರಿಗೆ ನ್ಯಾಯ ಹೇಗಪ್ಪ ಸಿಗುತ್ತೆ? ಭ್ರಷ್ಟಾಚಾರ ನಿರ್ಮೂಲನೆ ಹೇಗಪ್ಪ ಮಾಡ್ತೀರಿ ಅಂದ್ರೆ ಕಪಿಲ್ ಸಾಹೇಬರು 'ಕಳ್ಳನ ಗುಟ್ಟು ಕಳ್ಳನಿಗೇ ಗೊತ್ತು. ಕಳ್ಳರನ್ನು ಕಂಡು ಹಿಡೀರಿ ಅಂತಾನೆ ಇಂತಹ ಖದೀಮರನ್ನ ತಂದು ಕೂಡ್ರಿಸಿದೀವಿ' ಅನ್ನಬಹುದೋ ಏನೋ!

****

ಹಿಂಗೇ ಮಾತಿಗೆಮಾತು ಬಂತು. 'ದಿನಕ್ಕೊಂದು ಹಗರಣ ಹೊರಬರ್‍ತಾ ಇದೆ. ಅಂತಹುದ್ದರಲ್ಲಿ ಯಾತ್ಕೇ ಆ ಮನಮೋಹನ್‌ಸಿಂಗ್ ಪ್ರಧಾನಿಯಾಗಿ ಮುಂದುವರೀಬೇಕು? ನೈತಿಕವಾಗಿ ಅವರಿಗೇನು ಹಕ್ಕು ಇದೇರಿ' ಅಂತ ಯಾರೋ ಪ್ರಶ್ನಿಸಿದ್ದಕ್ಕೆ 'ಹಂಗೆಲ್ಲ ಹೇಳಬ್ಯಾಡ್ರಿ. ಅವ್ರು ಶಾನೆ ಒಳ್ಳೆ ಜನ ಅಂತೆ. ಹಗರಣಗಳಲ್ಲಿ ಕೈಕೊಳಕು ಮಾಡಿಕೊಳ್ಳೋ ಕುಳ ಅಲ್ವಂತೆ ಅದು' ಅಂದೆ. ಅದ್ಕೆ ಅವ್ರು 'ಎಂಥ ಒಳ್ಳೆತನಾರಿ. ದೇಶ ಕೊಳ್ಳೆ ಹೊಡೀತಿರೋರನ್ನ ನೋಡ್ಕಂಡು ತೆಪ್ಪಿರೋದು ಒಳ್ಳೇತನಾನಾ' ಅಂತ ಜಿಗುಪ್ಸೆಯಿಂದ ಮಾತನಾಡಿದರು. 'ಹಂಗಲ್ಲಾರೀ. ಅವ್ರು ಪ್ರಾಮಾಣಿಕರಂತೆ, ಸತ್ಯಸಂಧರಂತೆ. ಈ ಕಾಲ್ದಲ್ಲೂ ಅಂತೋರು ಪ್ರಧಾನಿಯಾಗಿರೋದು ನಮ್ಮ ಪುಣ್ಯ' ಅಂದೆ. 'ಪುಣ್ಯವಂತೆ ಪುಣ್ಯ. ಅವರ ಫೋಟೋ ಇಟ್ಕಂಡು ದಿನಾ ಪೂಜೆ ಮಾಡಿ. ಪ್ರಧಾನಿ ಕುರ್ಚೀಗೆ ಬೇರೆಯವರು ಬರ್‍ಲಿ' ಅಂದು ಬಿಡೋದೆ ಪುಣ್ಯಾತ್ಮ!

ಹೆಂಡತಿ ಹೊಡೆಯಬೇಕೆ? ವಿದೇಶಕ್ಕೆ ಹಾರಿ!



ಎಚ್.ಎಲ್. ಕೇಶವಮೂರ್ತಿ

ಅಣಕ

ಹೆಂಡತಿಗೆ ಹೊಡೆಯುವುದು ಪತಿ ಪರಮೇಶ್ವರನ ಹಕ್ಕು! ಇದನ್ನು ಸರ್ವೋಚ್ಚ ನ್ಯಾಯಾಲಯವೇ ಒಪ್ಪಿದೆ. ಗಂಡ ಮಾತ್ರ ಅಲ್ಲ ಮನೆಯಲ್ಲಿರುವ ಇತರರೂ ಈ ಹಕ್ಕನ್ನು ಪಡೆದಿದ್ದಾರೆ ಎಂಬುದೇ ಅದರ ಅಭಿಮತ ಆಗಿದೆ. ಆದರೆ ಕೆಲವು ತರಲೆ ಸಂಘಟನೆಗಳು ಅಂತ ಇರುತ್ವೆ. ಅವು ಹೆಂಡ್ತೀಗೆ ಕಿರುಕುಳ ನೀಡಿದಾನೆ ಅಂತ ಗಲಾಟೆ ಎಬ್ಬಿಸ್ತವೆ.

ಇಂತಹ ಕಿರುಕುಳದಿಂದ ಪಾರಾಗಬೇಕೆ?

ವಿದೇಶಕ್ಕೆ ಹಾರಿ! ಅಲ್ಲಿ ಮನಸೋ ಇಚ್ಛೆ ಹೆಂಡತಿಗೆ ಬಡಿಯಿರಿ! ಆದರೆ ಎಲ್ಲರಿಗೂ ಈ ಹಕ್ಕು ಇಲ್ಲ, ರಾಜತಾಂತ್ರಿಕರಿಗೆ ಮೀಸಲು ಇದು!

ಅನಿಲ್‌ವರ್ಮಾ ಇದನ್ನು ಮಾಡಿತೋರಿಸಿದ. ಅವನು ಭಾರತೀಯ ರಾಯಭಾರಿ ಕಚೇರಿಯ ಹಿರಿಯ ರಾಜತಾಂತ್ರಿಕ ಅಧಿಕಾರಿ. ಮೊದಲೇ ಪುರುಷ. ಮೇಲಾಗಿ ಹುದ್ದೆಯ ರಕ್ಷಣೆ! ಡಬ್ಬಲ್ ಪುರುಷ ದಬ್ಬಾಳಿಕೆ ನಡೆಸಿದ. ಹೆಂಡತಿಗೆ ಮನಸೋ ಇಚ್ಛೆ ದುಬ್ಬುತ್ತಿದ್ದ. ಹೆಂಡತಿ ಏನಾದರೂ ಪೊಲೀಸು ಗೀಲೀಸು ಅಂತ ದನಿ ಎತ್ತಿದ್ರೆ 'ನಾನ್ಯಾರು ಗೊತ್ತೇನೆ.... ರಾಜತಾಂತ್ರಿಕ ಅಧಿಕಾರಿ. ನನಗೆ ಯಾವ ಕಾನೂನು ಏನೂ ಮಾಡಲು ಸಾಧ್ಯವಿಲ್ಲ. ನನಗೆ ರಕ್ಷಣೆ ಇದೆ' ಎಂದು ತನ್ನ ಪುರುಷತ್ವವನ್ನು ಸಿದ್ಧಿಗೊಳಿಸುತ್ತಿದ್ದ!

ಒಂದು ದಿನ ಹೊಡೆತದ ನೋವು ತಾಳಲಾರದ ಹೆಂಡತಿ ಕಿರುಚಿಕೊಂಡಳಂತೆ. ಕಿರುಚಾಟ, ನರಳಾಟ ನೆರೆಮನೆಯವರಿಗೆ ಕೇಳಿಸಿತಂತೆ. ಕೇಳಿಸಿದರೇನಂತೆ. ಅಯ್ಯೋ ಇದು ಗಂಡಹೆಂಡತಿ ಜಗಳ ನಾವ್ಯಾಕೆ ಮೂಗು ತೂರಿಸೋದು ಎಂದು ಸಭ್ಯ ಭಾರತೀಯ ನಾಗರಿಕರಂತೆ ತೆಪ್ಪಗಿರಲಾರದೆ ಪೊಲೀಸರಿಗೆ ದೂರು ನೀಡಿದರಂತೆ.


ಪೊಲೀಸನವರು ಬಂದರು. ಹೆಂಡತಿ ಮೂಗಿನಿಂದ ರಕ್ತ ಇನ್ನೂ ತೊಟ್ಟಿಕ್ಕುತ್ತಿತ್ತು. ಆದರೆ ಪತಿರಾಯನನ್ನು ಬಂಧಿಸುವಂತಿಲ್ಲ! ಯಾಕೆಂದರೆ ಅವನು ಉನ್ನತ ರಾಜತಾಂತ್ರಿಕ ಅಧಿಕಾರಿ!

ಭಾರತದ ಮಂತ್ರಾಲಯಕ್ಕೆ ವಿಷಯ ತಿಳಿಯಿತು. ಹಿರಿಯ ಐಎಎಸ್ ಅಧಿಕಾರಿಗಳಿಗೆ ತಮ್ಮ ಮರಿ ಸಂತತಿಯ ಕೃತ್ಯ ಬಲೇ ಮುಜುಗರ ತಂದಿತು. ಹೆಂಡತಿ ಹೊಡೆದ ಅನ್ನುವ ಕಾರಣಕ್ಕಲ್ಲ, ಎಲ್ಲರಿಗೂ ಗೊತ್ತಾಗುವಂತೆ ಮಾಡಿದನಲ್ಲ ಎಂದು! ಅವರೆಲ್ಲ ಹಳೇ ಹುಲಿಗಳು ಅಲ್ವಾ. ತಿಪ್ಪೆ ಸಾರಿಸೋದರಲ್ಲಿ ಬಲೇ ಪ್ರವೀಣರು. ಅವನ್ನ ಭಾರತಕ್ಕೆ ಕರೆಸಿಕೊಂಡರು!

ವರ್ಗಾವಣೆಯೇ ಶಿಕ್ಷೆಯಾಗಿರಬಹುದು!

ಆಹಾ ಏನು ನ್ಯಾಯ! ಏನು ಐಎಎಸ್ಸು!

ಸೇನ್ ಜೀವಾವಧಿ ಶಿಕ್ಷೆ ಪ್ರಜಾಪ್ರಭುತ್ವಕ್ಕೆ ವಿಧಿಸಿದ ಮರಣದಂಡನೆ



'ಲಂಕೇಶ್'ನಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಅಣ್ಣನ ನೆನಪು' ಪ್ರಕಟಗೊಂಡಿದ್ದು 1989-90ರ ಸಾಲಿನಲ್ಲಿ ಅಲ್ಲ. ನಾನು 'ಲಂಕೇಶ್' ಓದಲು ಆರಂಭಿಸಿದ್ದು 1993 ಜೂನ್ ತಿಂಗಳಿಂದ. ನನಗೆ ತಿಳಿದಮಟ್ಟಿಗೆ ಕುವೆಂಪು ತೀರಿಕೊಂಡಿದ್ದು 1993-94ರ ಸಂದರ್ಭ. ಅನಂತರದ ವರ್ಷದಲ್ಲಿ ಪಿ.ಲಂಕೇಶ್ ಒತ್ತಾಯದ ಮೇರೆಗೆ ತೇಜಸ್ವಿಯವರು ಗೊಣಗುತ್ತಲೇ ತಮ್ಮ ನೆನಪಿನ ಬುತ್ತಿಯಿಂದ 'ಅಣ್ಣನ ನೆನಪು' ಬಿಚ್ಚಿಟ್ಟದ್ದು, ಅದು ಪ್ರತಿವಾರ 'ಲಂಕೇಶ್ ಪತ್ರಿಕೆ'ಯಲ್ಲಿ ಪ್ರಕಟಗೊಂಡು ಸಾಹಿತ್ಯಾಸಕ್ತರನ್ನು ಹಿಡಿದಿಟ್ಟದ್ದು 1995ರ ಸಾಲಿನಲ್ಲಿ ಎಂಬುದನ್ನು ಯೋಗೀಶ ಚಾಳಿ ಹಿರಿಯೂರು ಅವರ ಗಮನಕ್ಕೆ ತರಬಯಸುತ್ತೇನೆ.

-ಎಂ. ಜವರಾಜ್, ಮೈಸೂರು

ಜನವರಿ 12ರ ಸಂಚಿಕೆ ನೋಡಿದೆ. 'ಕಂಡಹಾಗೆ' ಹಾಗೂ 'ಚಾರ್ವಾಕ' ಎರಡು ಅಂಕಣಗಳಲ್ಲಿ ಒಂದೇ ವಿಷಯವನ್ನು ಪ್ರಸ್ತಾಪಿಸಿರುವುದನ್ನು ನೋಡಿ ಆಶ್ಚರ್ಯವಾಯ್ತು. ತನ್ನ ಇದೀ ಜೀವನವನ್ನು ಬಡ ಆದಿವಾಸಿಗಳ ಸೇವೆಗಾಗಿ ಮುಡುಪಾಗಿಟ್ಟ ವೈದ್ಯರೊಬ್ಬರಿಗೆ ಛತ್ತೀಸ್‌ಗಡದಲ್ಲಿ ಜೀವಾವಧಿ ಶಿಕ್ಷೆ ವಿಧಿಸಿರುವುದನ್ನು ತಿಳಿದು ತುಂಬ ಖೇದವಾಯಿತು; ಅದಕ್ಕಿಂತ ಹೆಚ್ಚಾಗಿ ನಾಚಿಕೆಯಾಯ್ತು... ಏಕೆಂದರೆ ಪ್ರಜೆಗಳಾದ ನಾವು ಇಂತಹ ಪ್ರಭುತ್ವವನ್ನು ಸ್ಥಾಪಿಸಿದ್ದೇವಲ್ಲಾ... ಎಂದು! ನಮ್ಮ ಪ್ರಜಾಪ್ರಭುತ್ವವನ್ನು ಆಳಲು ರಾಕ್ಷಸರ ಕೈಗೆ ಕೊಡುತ್ತಿದ್ದೇವಲ್ಲಾ ಎಂದು. ಶಿವಸುಂದರ್ ಹೇಳಿರುವಂತೆ ಡಾ.ಬಿನಾಯಕ್ ಸೇನ್‌ರಿಗೆ ವಿಧಿಸಿರುವ ಜೀವಾವಧಿ ಶಿಕ್ಷೆ ಪ್ರಜಾಪ್ರಭುತ್ವಕ್ಕೆ ವಿಧಿಸಿದ ಮರಣದಂಡನೆಯೇ ಸರಿ.

ನಮ್ಮ ಪ್ರಜಾಪ್ರಭುತ್ವವನ್ನು ಈ ರಾಕ್ಷಸರಿಂದ ರಕ್ಷಿಸಲು ಸಾಧ್ಯವಿಲ್ಲವೇ? ಖಂಡಿತಾ ಸಾಧ್ಯವಿದೆ!

ಈ ಜನವಿರೋಧಿ ಆಡಳಿತ ನಮ್ಮಲ್ಲಿ ಈವರೆಗೂ ಜೀವಂತವಾಗಿರುವುದಕ್ಕೆ ಜನಸಾಮಾನ್ಯನ ಅಜ್ಞಾನವೇ ಕಾರಣ. ಈ ಅಜ್ಞಾನವನ್ನು ಅಳಿಸಿ ಹಾಕಿ ಜನಪರವಾದ ಜ್ಞಾನವನ್ನು ಬಿತ್ತುವುದು ಸ್ವಲ್ಪ ಕಷ್ಟಕರವಾದರೂ ಅಸಾಧ್ಯವೇನಲ್ಲ. ನಮ್ಮ ನಿಮ್ಮಂತಹ ಜನಪರ ಕಾಳಜಿಯುಳ್ಳ ಕೆಲವೇ ಮಂದಿಯಾದರೂ ಗಟ್ಟಿ ನಿರ್ಧಾರ ಮಾಡಿ ನಮ್ಮ ಪ್ರಜಾಪ್ರಭುತ್ವವನ್ನು ರಾಕ್ಷಸರಿಂದ ಪಾರು ಮಾಡಬೇಕಿದೆ.

-ವೀರಬ್ಯಾತಯ್ಯ, ಬೆಂಗಳೂರು

ನಾನು 'ಲಂಕೇಶ್' ಅನ್ನು ಆರಂಭದಿಂದಲೂ ಓದುತ್ತಾ ಮೇಷ್ಟರ ನೇರ-ನಿಷ್ಠುರತೆಗಳಿಂದ ಪ್ರಭಾವಿತನಾದವನು. ಇದೀಗ 'ಲಂಕೇಶ್' ಕೂಡ ಅದೇ ಪರಂಪರೆ ಮುಂದುವರೆಸಿಕೊಂಡು ಹೋಗುತ್ತಿರುವುದು ಸಂತಸದ ವಿಚಾರ. ಲಂಕೇಶರು ಭ್ರಷ್ಟಾಚಾರದ ವಿರುದ್ಧ ಬೆಂಕಿ ಉಗುಳುತ್ತಿದ್ದರು. ಅದೇ ಕಾವು ನಿಮ್ಮ ನಿಲುವುಗಳಲ್ಲೂ ವ್ಯಕ್ತವಾಗುತ್ತಿರುವುದು ಖುಷಿ ಕೊಟ್ಟಿದೆ.

ಈ ಕೆಚ್ಚು ನಿರಂತರವಾಗಿರಲೆಂದು ಹಾರೈಸುತ್ತೇನೆ.

-ಕೆ.ವಿಶ್ವೇಶ್ವರಯ್ಯ, ಕೊಡಗು

ನಿಮ್ಮ ಪತ್ರಿಕೆಯಲ್ಲಿ ಹೊನ್ನಾವರದ ನ್ಯೂ ಇಂಗ್ಲಿಷ್ ಶಾಲೆಯಲ್ಲಿ ಸತ್ತ ಮುಸ್ಲಿಂ ಹುಡುಗನ ಬಗೆಗಿನ ವರದಿ 'ಸತ್ತ ಹುಡುಗನ ಸುತ್ತ ಕೋಮು ಹುತ್ತ' ತುಂಬಾ ವಸ್ತುನಿಷ್ಠವಾಗಿತ್ತು. ಒಂದು ಅಮಾಯಕ ವಿದ್ಯಾರ್ಥಿಯ ಸಾವು ಕೋಮುವಾದದ ಬಣ್ಣಹಚ್ಚಿಕೊಂಡು ತನ್ನ ಮಹತ್ವವನ್ನು ಕಳಕೊಂಡಿದ್ದು ತೀರಾ ದುಃಖದಾಯಕವಾದ ವಿಷಯವಾಗಿದೆ. ಶಾಲಾ ವಿದ್ಯಾರ್ಥಿಯ ಸಾವನ್ನು ಮುಂದಿಟ್ಟು ಮಾಡಿದ ಸಾರ್ವಜನಿಕ ಆಸ್ತಿಪಾಸ್ತಿ ಹಾನಿ ನಿಜಕ್ಕೂ ಖಂಡನಾರ್ಹವೇ. ಆದರೆ ಅಂತಹುದನ್ನು ಖಂಡಿಸುತ್ತಿರುವವರು ಮಾತ್ರ ಅಂತಹ ಕೃತ್ಯಗಳನ್ನು ಈ ದೇಶದಲ್ಲಿ ಸದಾ ಮಾಡುತ್ತಿರುವ ಸಂಘಪರಿವಾರಗಳನ್ನು ಬೆಂಬಲಿಸುವ ವರ್ಗಕ್ಕೆ ಸೇರಿದವರಾಗಿದ್ದಾರೆ ಎನ್ನುವುದು ತೀರಾ ಹಾಸ್ಯಾಸ್ಪದವಾಗಿದೆ. ಸಂಘಪರಿವಾರದವರ ಕೊಲೆ, ಸುಲಿಗೆ, ದರೋಡೆ, ಅತ್ಯಾಚಾರ, ಸಾರ್ವಜನಿಕ ಆಸ್ತಿಪಾಸ್ತಿ ಲೂಟಿಯನ್ನು ಗುಜರಾತ್ ಹತ್ಯಾಕಾಂಡದಂತಹ ನರಮೇಧವನ್ನು ಎಂದಿಗೂ ಖಂಡಿಸದ ನಮ್ಮ ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಸಂಘದವರು ಆಯಾ ತಾಲ್ಲೂಕುಗಳಲ್ಲಿ, ಶಾಲೆಯಲ್ಲಿ ಪ್ರತಿಭಟನೆ ವೇಳೆ ಆದ ಹಾನಿಯನ್ನು ಮಾತ್ರ ಖಂಡಿಸಿದ್ದು ಶಿಕ್ಷಕರಲ್ಲಿಯ ಕೋಮುವಾದಿ ದೃಷ್ಟಿಕೋನವನ್ನು ಕೂಡ ನೋಡಬಹುದಾಗಿದೆ.ಈ ಶಿಕ್ಷಕ ಸಂಘದವರು ಎಂತಹ ಪಕ್ಷಪಾತಿಗಳೆಂದರೆ ಸಂಘ ಪರಿವಾರಿಗಳು ಈ ದೇಶದ ಬೇರೆ ಬೇರೆ ಕಡೆ ನಡೆಸುವ ಅಪಕೃತ್ಯಗಳನ್ನು ಬಿಡಿ. ಇದೇ ಘಟನೆ ಆದನಂತರ ಈ ಘಟನೆ ಬಗ್ಗೆ 'ಸಾವು ಇದೇ ಮೊದಲಲ್ಲ' ಎಂದು ವರದಿ ಮಾಡಿದ ಕನ್ನಡ ಜನಾಂತರಂಗ ಪತ್ರಿಕೆಯ ವರದಿಗಾರರಾದ ವಿಜಯ ಕುಮಾರ ನಾಯ್ಕರ ಮೇಲೆ ಶಾಲಾ ಆವರಣದಲ್ಲೇ ಸಂಘಪರಿವಾರದ ಕಡೆಯವರು ಕೂಡಿಹಾಕಿ ದಾದಾಗಿರಿ ಮಾಡಿದ್ದರು. ಕನಿಷ್ಠ ಪಕ್ಷ ಅಂತಹ ಘಟನೆಯನ್ನು ಕೂಡ ಈ ಶಿಕ್ಷಕ ಸಮುದಾಯ ಖಂಡಿಸಲಿಲ್ಲ, ಕೇವಲ ಕೋಮುವಾದಿ ನೆಲೆಗಟ್ಟಿನಲ್ಲೇ ಶಾಲೆಗೆ ಆದ ಹಾನಿಯನ್ನು ಮಾತ್ರ ಖಂಡಿಸಿದ್ದು ದೊಡ್ಡ ದುರಂತವಾಗಿದೆ. ಶಿಕ್ಷಕ ಸಂಘದವರಿಗೆ ಒಂದು ಪ್ರಶ್ನೆ ಕೇಳಲೇಬೇಕಿದೆ, "ದೊಂಬಿ ಎನ್ನುವಲ್ಲಿ 'ಮುಸ್ಲಿಂ ದೊಂಬಿ', 'ಹಿಂದೂ ದೊಂಬಿ' ಎನ್ನುವುದಿದೆಯೇ?" ಎಂದು.

-ಎಚ್.ಉದಯನಾಯ್ಕ, ಹೊನ್ನಾವರ


...ಕಾಸು ಮಾಡಿಕೊಂಡ ಬಾಸ್ ಅಭಿಮಾನಿಗಳಿಗೆ ಲಾಸ್

...ಾನ್ನೆ 'ಜಾಕಿ'.
...ಾದ ನಂತರ 'ಸೂಪರ್'.
...ಪರ್' ನಂತರ 'ಮೈಲಾರಿ'.
...ೀಗ 'ಬಾಸ್'.

...ನ ಮೂರು ತಿಂಗಳಲ್ಲಿ ಕನ್ನಡ ಚಿತ್ರರಂಗದಲ್ಲಿ ...ಹೊಸ ಟ್ರೆಂಡ್ ಆರಂಭವಾಗಿದೆ. ಅದೇನೆಂದರೆ ...ದರೂ ನೂರಕ್ಕೂ ಹೆಚ್ಚು ಥಿಯೇಟರ್‌ಗಳಲ್ಲಿ ಒಂದು ... ಬಿಡುಗಡೆ ಮಾಡುವುದು. ಹಿಂದಿನ ಕಾಲದಲ್ಲಿ ...ದು 100 ದಿನ ಓಡಲಿ ಎಂದೇ ಹಾರೈಸುತ್ತಿದ್ದರು. ...ತ್ರವೊಂದು ಶತದಿನೋತ್ಸವ ಆಚರಿಸುವುದು ಬಹಳ ...ಆಗಿದೆ. ಆದರ ಬದಲಿಗೆ ನೂರಕ್ಕೂ ಹೆಚ್ಚು ...ರ್‌ಗಳಲ್ಲಿ ಸಿನಿಮಾವನ್ನು ಬಿಡುಗಡೆ ಮಾಡಲಾಗು...

...ಲ್ಲ ಆರಂಭವಾದದ್ದು ಪುನೀತ್ ರಾಜ್‌ಕುಮಾರ್ ...'ಜಾಕಿ' ಚಿತ್ರದಿಂದ. ಆ ಚಿತ್ರದ ನಿರ್ಮಾಪಕರಾದ ...ಂದ್ರ ರಾಜ್‌ಕುಮಾರ್ ಸುಮಾರು 114 ...ರ್‌ಗಳಲ್ಲಿ 'ಜಾಕಿ'ಯನ್ನು ಬಿಡುಗಡೆ ಮಾಡಿದರು. ...ರಿಯಾದ ಪ್ರತಿಫಲವೂ ಅವರಿಗೆ ದೊರೆಯಿತು. ... ರಾಘಣ್ಣ ಹಿಡಿದ ದಾರಿಯನ್ನೇ ನಿರ್ಮಾಪಕ ...ನ್ ವೆಂಕಟೇಶ್ ಕೂಡಾ ತುಳಿದು ಅವರ ...ದ 'ಸೂಪರ್' ಚಿತ್ರವನ್ನು 122 ಥಿಯೇಟರ್‌ಗಳಲ್ಲಿ ...ಪ್ರದರ್ಶಿಸಿದರು. ಹೀಗೆ ಮಾಡಿದ್ದರಿಂದ ಅವರಿಗೂ ... ಆಯಿತು. ಅನಂತರ ನಿರ್ಮಾಪಕ ಶ್ರೀಕಾಂತ್ ಕೂಡಾ ಧೈರ್ಯ ಮಾಡಿ ಶಿವರಾಜ್‌ಕುಮಾರ್ ಅಭಿನಯದ 'ಮೈಲಾರಿ'ಯನ್ನು 125 ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಿದರು. ಅವರಿಗೂ ಪ್ರೇಕ್ಷಕ ನಿರಾಶೆಗೊಳಿಸಲಿಲ್ಲ.

ಇದೀಗ ಅದೇ ಸಾಲಿಗೆ ದರ್ಶನ್ ಅಭಿನಯದ 'ಬಾಸ್' ಚಿತ್ರ ಸೇರಿಕೊಂಡಿದೆ. ಈ ಚಿತ್ರವನ್ನು ಒಟ್ಟು 132 ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವ ಮುಖಾಂತರ ಹಂಚಿಕೆದಾರರಾದ ಕೆ.ಸಿ.ಎನ್.ಕುಮಾರ್ ಒಂದು ಹೊಸ ದಾಖಲೆಯನ್ನು ಸೃಷ್ಟಿಸಿದ್ದಾರೆ. ವಾಸ್ತವವಾಗಿ ಈ ಚಿತ್ರ ಎರಡು ವರ್ಷಗಳಷ್ಟು ಹಳೆಯ ಚಿತ್ರ. ರಮೇಶ್ ಯಾದವ್ ನಿರ್ಮಿಸಿರುವ ಈ ಚಿತ್ರ ಹಣದ ಕೊರತೆಯಿಂದಾಗಿ ಅನೇಕ ಬಾರಿ ನಿಂತು ಹೋಗಿತ್ತು. ಅಷ್ಟೇ ಅಲ್ಲ, ನಿರ್ಮಾಪಕ ರಮೇಶ್ ಯಾದವ್ ಮತ್ತು ನಾಯಕ ನಟ ದರ್ಶನ್ ನಡುವೆ ಮಾತಿನ ಚಕಮಕಿ ನಡೆದು ಅವು ಪತ್ರಿಕೆಗಳಲ್ಲೂ ವರದಿಯಾದವು. ಇದೆಲ್ಲದರಿಂದ 'ಬಾಸ್' ಚಿತ್ರ ಬಿಡುಗಡೆಯಾಗುವುದೇ ಕಷ್ಟ ಎಂದು ಗಾಂಧಿನಗರದ ಪಂಡಿತರು ಭವಿಷ್ಯ ನುಡಿದಿದ್ದರು.



ಇದಕ್ಕೆ ಕಾರಣವೂ ಇತ್ತು. ಈ ಚಿತ್ರವನ್ನು ಬಿಡುಗಡೆ ಮಾಡುವುದಕ್ಕೆ ಕನಿಷ್ಠವೆಂದರೂ ಸುಮಾರು ನಾಲ್ಕುಕಾಲು ಕೋಟಿ ರೂಪಾಯಿಗಳನ್ನು ರಮೇಶ್ ಯಾದವ್ ಖರ್ಚು ಮಾಡಬೇಕಾಗಿತ್ತು. ಆದರೆ ಚಿತ್ರ ಸಂಪೂರ್ಣಗೊಳಿಸುವ ಮೊದಲೆ ರಮೇಶ್ ಯಾದವ್ ದಿವಾಳಿಯಾಗಿದ್ದರು. ದರ್ಶನ್‌ಗೂ ಈ ಚಿತ್ರದ ಬಗ್ಗೆ ಆಸಕ್ತಿ ಹೊರಟು ಹೋಗಿತ್ತು.

ಆಗ ಗಾಂಧಿನಗರದ ಹಂಚಿಕೆದಾರರಲ್ಲಿ ದೊಡ್ಡ ಹೆಸರು ಮಾಡಿರುವ ಕೆ.ಸಿ.ಎನ್.ಕುಮಾರ್ ರಮೇಶ್ ಯಾದವ್ ಬೆಂಬಲಕ್ಕೆ ನಿಂತು ಅವರಿಗೆ ಅಗತ್ಯವಿದ್ದ ನಾಲ್ಕುಕಾಲು ಕೋಟಿ ರೂಪಾಯಿಗಳನ್ನು ನೀಡಿದ್ದರು. ಈ ಹಣದಿಂದಲೇ ರಮೇಶ್ ಯಾದವ್ ಐಡಿಬಿಐ ಬ್ಯಾಂಕ್‌ನಿಂದ ಪಡೆದಿದ್ದ ಸಾಲವನ್ನು ಮರು ಪಾವತಿಸಿ ಚಿತ್ರ ಬಿಡುಗಡೆಗೆ ದಾರಿ ಮಾಡಿಕೊಂಡರು. ನಿರ್ಮಾಪಕರಾದ ರಾಕ್‌ಲೈನ್ ವೆಂಕಟೇಶ್ ಮತ್ತು ಸುರೇಶ್ ಗೌಡ ಕೂಡ ರಮೇಶ್ ಯಾದವ್‌ಗೆ ಆರ್ಥಿಕ ಸಹಾಯವನ್ನು ಮಾಡಿದರು.

ಹೀಗಾಗಿ ಇಷ್ಟು ದೊಡ್ಡ ಮೊತ್ತವನ್ನು ವಾಪಸ್ ಪಡೆಯಬೇಕಾದರೆ 100ಕ್ಕಿಂತ ಹೆಚ್ಚು ಥಿಯೇಟರ್‌ಗಳಲ್ಲಿ ಚಿತ್ರವನ್ನು ಬಿಡುಗಡೆ ಮಾಡಿ ಮೊದಲ ವಾರದಲ್ಲೇ ಹಣವನ್ನು ದೋಚಿಕೊಳ್ಳುವುದು ಇವರ ಮುಂದಿದ್ದ ಏಕೈಕ ಮಾರ್ಗ. ಈಗ ಅದನ್ನು ಕುಮಾರ್ ಯಶಸ್ವಿಯಾಗಿ ನಿರ್ವಹಿಸಿ ಮೊದಲ ವಾರದಲ್ಲಿ ಮೂರು ಕೋಟಿ ರೂಪಾಯಿ ಸಂಪಾದಿಸಿದ್ದಾರೆ.

ಈ ಚಿತ್ರದ ಯಶಸ್ಸಿಗೆ ಇದು ಬಿಡುಗಡೆಯಾದ ಸಂದರ್ಭವೂ ಕಾರಣ ಎನ್ನುವವರಿದ್ದಾರೆ. ಉದಾಹರಣೆಗೆ ಸಂಕ್ರಾಂತಿ ಸಂದರ್ಭದಲ್ಲಿ ಸಾಧಾರಣವಾಗಿ ಯಾವುದೇ ಚಿತ್ರ ತೆರೆ ಕಂಡರೂ ಅದು ಗೆದ್ದೇ ಗೆಲ್ಲುತ್ತದೆ ಎಂಬುದು ಗಾಂಧಿನಗರದವರ ನಂಬಿಕೆ. ಏಕೆಂದರೆ ಆ ಸಂದರ್ಭದಲ್ಲಿ ರೈತರು ತಮ್ಮ ಹೋರಿಗಳಿಗೆ ಪೂಜೆ ಮಾಡಿ ಹಬ್ಬದ ಸಂಭ್ರಮದಲ್ಲಿ ಇರುತ್ತಾರೆ. ಇಂತಹ ಸಂದರ್ಭದಲ್ಲಿ ಸಿನಿಮಾ ನೋಡುವುದು ಅವರ ಹವ್ಯಾಸ. ಈ ಕಾರಣಕ್ಕಾಗಿಯೇ ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ತಂದೆ ವೀರಾಸ್ವಾಮಿಯವರು ಪ್ರತಿ ವರ್ಷ ಸಂಕ್ರಾಂತಿ ಸಂದರ್ಭದಲ್ಲಿ ತಮ್ಮ ನಿರ್ಮಾಣದ ಒಂದಲ್ಲಾ ಒಂದು ಚಿತ್ರವನ್ನು ಬಿಡುಗಡೆ ಮಾಡುತ್ತಿದ್ದರು. ಅಷ್ಟೇ ಅಲ್ಲ, ಹಾಗೆ ಬಿಡುಗಡೆಯಾದ ಅವರ ಬಹುತೇಕ ಚಿತ್ರಗಳು ಅವರಿಗೆ ಲಾಭವನ್ನು ತಂದುಕೊಟ್ಟಿದ್ದವು.

ಕಳೆದ ವಾರ 'ಬಾಸ್' ಜೊತೆಗೇ ಬಿಡುಗಡೆಯಾಗಬೇಕಾಗಿದ್ದ ದುನಿಯಾ ವಿಜಯ್ ನಟಿಸಿರುವ 'ಕಂಠೀರವ' ಚಿತ್ರವನ್ನು ಮುಂದೂಡಿದ್ದೂ 'ಬಾಸ್' ಚಿತ್ರದ ಯಶಸ್ಸಿಗೆ ನೆರವು ನೀಡಿದೆ. ಒಂದು ವೇಳೆ ಈ ಎರಡು ಚಿತ್ರಗಳು ಪರಸ್ಪರ ಪೈಪೋಟಿಗೆ ಇಳಿದು ಒಂದೇ ವಾರ ಬಿಡುಗಡೆಯಾಗಿದ್ದರೂ 'ಬಾಸ್' ಚಿತ್ರಕ್ಕೆ ಕನಿಷ್ಠವೆಂದರೂ ಶೇ 30ರಷ್ಟು ಧಕ್ಕೆಯಾಗುತ್ತಿತ್ತು.

ಹಾಗಾಗಿ, ಹಬ್ಬದ ಸಂದರ್ಭ, ಪೈಪೋಟಿ ಇಲ್ಲದ್ದು ಮತ್ತು ಹಂಚಿದಾರರ ಬಾಜಿ .. ಈ ಮೂರು ಅಂಶಗಳು 'ಬಾಸ್' ಗೆಲುವಿಗೆ ಕಾರಣ ಎನ್ನಬಹುದು.

● ಶೆಣೈ

...ಡಲ್ ಬಡಾಯಿ ಜೋಗಯ್ಯಾ!

"...ಜನಿಕಾಂತ್ 'ಜೋಗಯ್ಯ' ಚಿತ್ರದಲ್ಲಿ ಗೆಸ್ಟ್ ರೋಲ್‌ನಲ್ಲಿ ಕಾಣಿಸಿಕೊಳ್ಳಕ್ಕೆ ಒಪ್ಪಿದಾರೆ....", "...ಗಿ ಒಂದು ಹಾಡು ಕೂಡಾ ಚಿತ್ರದಲ್ಲಿ ಇದೆ"... ಇಂಥ ಅಂತೆ ಕಂತೆಗಳು ಗಾಂಧಿನಗರದ ...ಾರಗಳಲ್ಲಿ ಈಗ ಗಿರ್ರಗಿರ್ರನೆ ಗಿರಕಿಹೊಡೆಯುತ್ತಿವೆ.


"...ನು ರಜನಿಕಾಂತ್ ನಟಿಸಲಿರುವ ತಮಿಳು ಸಿನಿಮಾ ಡೈರೆಕ್ಟ್ ಮಾಡ್ತಿದೀನಿ. ಸ್ಕ್ರಿಪ್ಟು ...ಡ್ತಿದೀನಿ. ಇನ್ನೇನು ಶೂಟಿಂಗ್ ಸುರೂ ಮಾಡದೆಯಾ..." ಎಂದೆಲ್ಲ ನಿರ್ದೇಶಕ ...'ಜೋಗಿ' ಪಿಚ್ಚರ್ ರಿಲೀಜಾದಾಗಿನಿಂದಲೂ ಪುಂಗುತ್ತಲೇ ಬಂದಿರುವುದು ಹಳಸಲು ...ದರೆ ಈಗಲೂ "ನನ್ನ ನಿರ್ದೇಶನದ 'ಜೋಗಯ್ಯ'ದಲ್ಲಿ ರಜನಿ ಆ್ಯಕ್ಟ್ ಮಾಡ್ತಾವ್ರೆ..." ...ಒಂದೇಸಮನೆ ರೂಮರುಗಳನ್ನು ಪ್ರೇಮ್ ಹಬ್ಬಿಸುತ್ತಿದ್ದಾರೆ. ಹೀಗೆ ಒಂದು ಸಿನಿಮಾ ...ಗಿ ಅದು ಬಿಡುಗಡೆಯಾಗುವ ತನಕ ಇಂಥ ತಲೆಬುಡವಿಲ್ಲದ ಗಾಳಿ ಸುದ್ದಿಗಳನ್ನು ...ವುದು ಪ್ರೇಮ್‌ಗೆ ಸಿದ್ಧಿಸಿರುವ ವಿದ್ಯೆ ಮತ್ತು ಖಯಾಲಿ.

...ಕಾಂತ್ ಬೆಂಗಳೂರಿಗೆ ಪಾದ ಸೋಕಿಸುವುದರಿಂದ ಹಿಡಿದು ಅವರ ಪ್ರತಿಯೊಂದು ... ಅವರ ಆಗಿನ ಕಾಲದ ಗೆಳೆಯ ರಾಜ್‌ಬಹದ್ದೂರ್‌ಗೆ ತಿಳಿದೇ ಇರುತ್ತೆ. ರಜನಿ ...ರಿಗೆ ಬಂದಾಗ ಮೈತುಂಬ ಶಾಲು ಹೊದ್ದು, ವೇಶ ...ಂಡು ಬೀದಿಬೀದಿಯಲ್ಲಿ ಬಜ್ಜಿ ಬೋಂಡಾ ತಿನ್ನುತ್ತಾ, ...ಪಾರಿಂದ ಹಿಡಿದು ಗಾಂಧಿನಗರದ ತನಕ ತಿರುಗಾಡು...ದೇ ರಾಜ್‌ಬಹದ್ದೂರ್ ಜೊತೆಗೆ. ಹಾಗಿರುವಾಗ ...ನ್ನಡ ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ನಟಿಸುತ್ತಿರುವ ...ವರಿಗೆ ಗೊತ್ತಾಗದೇ ಇರುತ್ತಾ?

... ರಾಜ್ ಬಹದ್ದೂರ್ ಬಳಿ ರಜನಿಯ 'ಕನ್ನಡ ...ಕುರಿತು ಪ್ರಶ್ನಿಸುತ್ತಿದ್ದಂತೆಯೇ "ರಜನಿಕಾಂತ್ ಕನ್ನಡ ... ಆ್ಯಕ್ಟ್ ಮಾಡ್ತಾರಾ? ಯಾರ್ರೀ ಹೇಳಿದ್ದು? ಪ್ರೇಮಾ? ...ದ್ಧ ಬಂಡಲ್ ರಾಜಾ!" ಎಂದು ಹೇಳಿ ಫೋನು ...

...್ ಗಿಮಿಕ್ಕಾಲಜಿಗೆ ಬಹದ್ದೂರ್ ಕೊಟ್ಟ ಕೋಕ್ ...

... ಬಹದ್ದೂರ್ ಹೇಳುವ ಪ್ರಕಾರ ಸದ್ಯ ಕನ್ನಡದಲ್ಲಿ ...ಷ್ಟು ಟೈಮ್ ರಜನಿಗೆ ಇಲ್ಲವಂತೆ. ಅವರು ...ವರೂ ಕನ್ನಡ ಚಿತ್ರದಲ್ಲಿ ನಟಿಸುವುದಿದ್ದರೆ ಅದನ್ನು ...ದಿಕೆ ಮೂಲಕವೇ ಮಾಡುತ್ತಾರೆ. ಅದನ್ನು ಬಿಟ್ಟು ...ತ್ರಗಳಲ್ಲಿ ನಟಿಸುವ ಯೋಚನೆಯನ್ನೂ ಅವರು ...ಂತೆ. ●




ಕೂಲ್ ಸ್ಟಾರ್ ಕೋಮಲ್ ಕೋಪ

ಇದೀಗ 'ಕೂಲ್ ಸ್ಟಾರ್' ಕೋಮಲ್ ಅವರಿಂದಾಗಿ ಹೊಸ ವಿವಾದವೊಂದು ಸೃಷ್ಟಿಯಾಗಿದೆ.

ಎರಡು ವಾರಗಳ ಹಿಂದೆ ಕೋಮಲ್ ನಾಯಕನಾಗಿ ನಟಿಸಿದ್ದ ವಿಜಯಲಕ್ಷ್ಮಿ ಸಿಂಗ್ ನಿರ್ದೇಶಿಸಿದ್ದ 'ವಾರೆವ್ಹಾ' ಚಿತ್ರ ಬಿಡುಗಡೆಗೊಂಡು ಬಾಕ್ಸ್ ಆಫೀಸ್‌ನಲ್ಲಿ ಮುಗ್ಗರಿಸಿತ್ತು. ಚಿತ್ರದ ಸೋಲಿಗೆ ಮುಖ್ಯ ಕಾರಣ ನಿರ್ಮಾಪಕರಾದ ಜೈಜಗದೀಶ್ ಮತ್ತು ನಿರ್ದೇಶಕಿ ವಿಜಯಲಕ್ಷ್ಮೀ ಸಿಂಗ್ ಎಂದು ಈಗ ಕೋಮಲ್ ಆರೋಪಿಸಿದ್ದಾರೆ. "ನೋಡಿ ಸಾರ್, ಈ ಹಿಂದೆ 'ಕುರಿಗಳು ಸಾರ್ ಕುರಿಗಳು' ಚಿತ್ರದಲ್ಲಿ ನನಗೆ ಒಳ್ಳೆಯ ಪಾತ್ರ ನೀಡಿದ್ದ ಋಣವನ್ನು ತೀರಿಸುವ ಕಾರಣಕ್ಕಾಗಿ ನಾನು ಈ ಚಿತ್ರಕ್ಕೆ ಒಂದು ಪೈಸೆ ಸಂಭಾವನೆ ಪಡೆಯದೆ ನಾಯಕನಾಗಿ ನಟಿಸಿದ್ದೇನೆ. ಆದರೆ ನಿರ್ಮಾಪಕರು ಒಂದು ರೀತಿಯಲ್ಲಿ ತನ್ನ ಉದಾರತೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಯಾವುದೇ ಪ್ರಚಾರವನ್ನು ಮಾಡದೇ ಚಿತ್ರ ಬಿಡುಗಡೆ ಮಾಡಿದ್ದರಿಂದ ಈ ಚಿತ್ರ ಬಿದ್ದು ಹೋಗಿದೆ" ಎಂಬುದು ಕೋಮಲ್ ಅವರ ವಾದ. ಕನಿಷ್ಠ ಪ್ರಚಾರಕ್ಕಾದರೂ ಒಂದಿಷ್ಟು ಲಕ್ಷ ಹಣವನ್ನು ಖರ್ಚು ಮಾಡಿದ್ದರೆ ಚಿತ್ರ ಯಶಸ್ಸು ಕಾಣುತ್ತಿತ್ತು ಎಂಬುದು ಅವರ ಮಾತು.

ಈ ಚಿತ್ರ ಬಿಡುಗಡೆ ಆಗುವ ಮುನ್ನ ಇದರ ನಿರ್ಮಾಪಕ ಮತ್ತು ನಿರ್ದೇಶಕಿಯನ್ನು ಇಂದ್ರಚಂದ್ರ ಎಂದೆಲ್ಲ ಹೊಗಳುತ್ತಿದ್ದ ಕೋಮಲ್ ಈಗ ಅವರಿಬ್ಬರ ವಿರುದ್ಧವೇ ಇಂತಹ ಮಾತುಗಳನ್ನು ಆಡುತ್ತಿದ್ದಾರೆ. ಆದರೆ ಆ ಚಿತ್ರ ಸೋಲಲು ಪ್ರಚಾರದ ಕೊರತೆಯೇ ಮುಖ್ಯ ಕಾರಣವೇ? ಏಕೆಂದರೆ ಬಹುತೇಕ ಜನ ಈ ಚಿತ್ರವನ್ನು ನೋಡಿದ ನಂತರ "ಇದು ಒಂದು ನಾಟಕದ ತರಹ ಇದೆ" ಎಂದು ಅಪಸ್ವರ ತೆಗೆದಿದ್ದರು. ಇದು ಬಹುಶಃ ಕೋಮಲ್ ಕಿವಿಗೆ ಬಿದ್ದಿಲ್ಲ. ●



ಎಲ್ಲವೂ ವಯಸ್ಸು ಮೀರುವ ಮುನ್ನ!


ಉಂಡು, ಆಡಿ, ಹೊದ್ದು ಮಲಗಬೇಕಿದ್ದ ಮಾಸ್ಟರ್ ಕಿಶನ್‌ನಿಂದ ಆತನ ಅಪ್ಪ ಶ್ರೀಕಾಂತ್ ವಯಸ್ಸಿಗೆ ಮುನ್ನವೇ ಇನ್ನೂ ಏನೇನನ್ನು ಮಾಡಿಸುತ್ತಾರೋ ಗೊತ್ತಿಲ್ಲ!

ಕಿಶನ್ ಇನ್ನೂ ಪ್ರೈಮರಿ ಸ್ಕೂಲಲ್ಲಿದ್ದಾಗಲೇ ಆತನಿಂದ 'ಕೇರಾಫ್ ಫುಟ್‌ಪಾತ್' ಚಿತ್ರವನ್ನು ಮಾಡಿಸಿ 'ಕಿರಿಯ ವಯಸ್ಸಿನ ನಿರ್ದೇಶಕ' ಎಂದು ಗಿನ್ನಿಸ್ ದಾಖಲೆ ನಿರ್ಮಿಸಿದ್ದರು ಆತನ ಅಪ್ಪ. ಈಗ ಇನ್ನೂ ಹತ್ತನೇ ಕ್ಲಾಸು ಓದುತ್ತಿರುವ ಈ ಹುಡುಗನನ್ನು ಹೀರೋ ಮಾಡಿ 'ಟೀನೇಜ್-ಈ ವಯಸ್ಸೇ ಒಂಥರಾ' ಸಿನಿಮಾ ಮಾಡಿದ್ದಾರೆ. ಹೀಗೆ ವಯಸ್ಸಿಗೆ ಮೀರಿದ ಕೆಲಸಗಳಿಗೇ ಫೇಮಸ್ ಆಗಿರುವ ಕಿಶನ್‌ಗೆ ಎಂಟನೆ ಕ್ಲಾಸಲ್ಲೇ ಲವ್ ಪ್ರಪೋಸಲ್ ಬಂದಿತ್ತಂತೆ. ಆದರೆ ಹುಡುಗ ಯಾವುದೇ ಮುಚ್ಚುಮರೆ ಇಲ್ಲದೆ ತನ್ನ ಗೆಳತಿ ಬರೆದಿದ್ದ ಹಾರ್ಟ್ ಶೇಪಿನ ಲವ್‌ಲೆಟರು ತಂದು ತನ್ನಪ್ಪನಿಗೆ ತೋರಿಸಿದ್ದನಂತೆ.

ಈಗ ಮೂರ್ಮೂರು ಹಿರೋಯಿನ್ನುಗಳೊಂದಿಗೆ 'ಟೀನೇಜ್' ಚಿತ್ರದಲ್ಲಿ ಲವರ್‌ಬಾಯ್ ಆಗಿ ನಟಿಸಿರುವ ಕಿಶನ್ ಕನಸುಗಳಲ್ಲಿ ಈಗ ಆ ಮೂರೂ ಹುಡುಗಿಯರು ಬರಲು ಶುರು ಮಾಡಿದ್ದಾರಂತೆ. ಕಿಶನ್ ಕನಸು ಹೀಗೇ ಮುಂದುವರೆದು ವಯಸ್ಸು ಮೀರುವ ಮುನ್ನವೇ ಎಲ್ಲವೂ ಮುಗಿದುಹೋದರೆ ಕಷ್ಟ ಕಷ್ಟ... ●



ಸೈಕಲ್ ಸಮಸ್ಯೆ...!



'...ೈಕಲ್' ಎನ್ನುವ ಸಿನಿಮಾವೊಂದು ತಯಾರಾಗಿದೆ. ಶೂಟಿಂಗ್ ...ವಾಗಿನಿಂದಲೂ 'ಸೈಕಲ್'ಗೆ ಸಮಸ್ಯೆಗಳು ಅಮರಿಕೊಳ್ಳುತ್ತಲೇ ... ಈಗ 'ಸೈಕಲ್' ತುಳಿಯುತ್ತಿರುವ ಜನ ಕಿತ್ತಾಡಿಕೊಂಡು ಥೇಂಬರ್ ...ರಿದರೂ ಅವರ ಜಗಳ ಬಗೆಹರಿದಿಲ್ಲ.

...ಬು ಭಕ್ತವತ್ಸಲಂ ಎಂಬ ಮಧ್ಯಯುಗದ ನಿರ್ಮಾಪಕ ಹಾಗೂ ರಮೇಶ್ ರೆಡ್ಡಿ ಎಂಬುವವರು ...ಡಿ ಈ ಸಿನಿಮಾವನ್ನು ಪಾಲುದಾರಿಕೆಯಲ್ಲಿ ಪ್ರಾರಂಭಿಸಿದ್ದರು. 'ಭಕ್ತ' ಎನ್ನುವ ಚಿತ್ರದಲ್ಲಿ ನಾಯಕನಾಗಿದ್ದ ...ನ್ ಯಾನೆ ಅಗ್ನಿ ಈ ಚಿತ್ರದ ಹೀರೋ ಕಂ ಡೈರೆಕ್ಟರು. ಹತ್ತು ದಿನದ ಶೂಟಿಂಗ್ ಮುಗಿಸಿ ಹತ್ತು ಲಕ್ಷ ...ು ಖರ್ಚುಮಾಡಿದ್ದ ಬಾಬು ಅನಂತರ ಕಾಸು ಹಾಕುವುದನ್ನು ನಿಲ್ಲಿಸಿಬಿಟ್ಟರು. ಹೀಗಾಗಿ 'ಸೈಕಲ್' ಓಟಕ್ಕೆ ...ದಿತ್ತು. ಅನಂತರ ರಮೇಶ್ ರೆಡ್ಡಿ ಮತ್ತೆ ಅದಕ್ಕೆ ಚಾಲನೆ ನೀಡಿ ಸಿನಿಮಾವನ್ನು ಸಂಪೂರ್ಣಗೊಳಿಸಿದರು. ... ಚಿತ್ರದ ಜಾಹೀರಾತಿನಲ್ಲಿ ಬಾಬು ಹೆಸರನ್ನು ಸೂಚಿಸಿಲ್ಲ. ಬರೀ ಹತ್ತು ಲಕ್ಷ ರೂಪಾಯಿ ಕೊಟ್ಟರೆ ಅದು ...ಪಾಲುದಾರಿಕೆಯಾಗುತ್ತದೆ? ಎನ್ನುವುದು ರೆಡ್ಡಿ ಪ್ರಶ್ನೆ. ಸದ್ಯ ಬಾಬು-ರೆಡ್ಡಿಗಳ ಕಚ್ಚಾಟದಲ್ಲಿ 'ಸೈಕಲ್' ರಾಜ...ಷ ಕತ್ತರಿಸಿದ್ದಾರೆ. ಬಿಡುಗಡೆಯ ಜೊತೆಗೆ ಈ 'ಸೈಕಲ್' ಇನ್ನೆಷ್ಟು ರಂಪಾಟಗಳನ್ನು ಒತ್ತು ಸಾಗುತ್ತೋ? ●

ಡಬ್ಬಲ್ ಡೆಕ್ಕರ್

ನವರಸ ನಾಯಕ ಜಗ್ಗೇಶ್ ಮೊದಲು ವಿಧಾನ ಸೌಧದ ಮೆಟ್ಟಲೇರಿ ಅನಂತರ ಅಲ್ಲಿಂದ ವಿಧಾನ ಪರಿಷತ್ ಸದಸ್ಯರಾಗಿ ಈಗ ಮತ್ತೆ ಮುಖಕ್ಕೆ ಬಣ್ಣ ಹಚ್ಚಿ ಗಾಂಧಿನಗರಕ್ಕೆ ಕಾಲಿಟ್ಟಿದ್ದಾರೆ. ಅಂದರೆ ಅತ್ತ ರಾಜಕೀಯದಲ್ಲೂ ಇತ್ತ ಗಾಂಧೀನಗರದಲ್ಲೂ ಏಕಕಾಲದಲ್ಲಿ ಜಗ್ಗೇಶ್ ನಟಿಸುತ್ತಿದ್ದಾರೆ ಎಂದಾಯಿತು.

'ಡಬಲ್ ಡಕ್ಕರ್' ಎಂಬ ಹೊಸ ಚಿತ್ರದಲ್ಲಿ ಜಗ್ಗೇಶ್ ದ್ವಿಪಾತ್ರದಲ್ಲಿ ನಟಿಸುತ್ತಿದ್ದಾರೆ. ವಿರಾಮದ ಮೊದಲು ಒಬ್ಬ ಜಗ್ಗೇಶ್, ವಿರಾಮದ ನಂತರ ಮತ್ತೊಬ್ಬ ಜಗ್ಗೇಶ್ ಜನರನ್ನು ರಂಜಿಸಲಿದ್ದಾರೆ ಎಂದು ಚಿತ್ರದ ನಿರ್ದೇಶಕ ವಿಕ್ಟರಿ ವಾಸು ಹೇಳುತ್ತಾರೆ. ಈ ವಿಕ್ಟರಿ ವಾಸು ಸದ್ಯಕ್ಕೆ ತನ್ನ ಹೆಸರಿನಿಂದ 'ವಿಕ್ಟರಿ' ಎಂಬ ಪದವನ್ನು ಕಿತ್ತು ಹಾಕಿ ಬರಿ ವಾಸು ಆಗಿ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ. ಈ ವಾಸು ಜಗ್ಗೇಶ್ ಅವರ ಅಚ್ಚುಮೆಚ್ಚಿನ ನಿರ್ದೇಶಕ. ಜಗ್ಗೇಶ್ ಚಿತ್ರಗಳನ್ನು ನಿರ್ದೇಶಿಸುವಲ್ಲಿ ಇವರದ್ದು ಎತ್ತಿದ ಕೈ. ಇವರು ನಿರ್ದೇಶಿಸಿದ್ದ ಕೊನೆಯ ಚಿತ್ರ 'ಕೋದಂಡ....' ದಲ್ಲೂ ಜಗ್ಗೇಶ್ ನಟಿಸಿದ್ದರು.

'ಡಬ್ಬಲ್ ಡಕ್ಕರ್' ಚಿತ್ರ ಈ ಹಿಂದೆ ಗೋವಿಂದ ನಟಿಸಿದ್ದ 'ಸ್ಯಾಂಡ್‌ವಿಚ್' ಎಂಬ ಹಿಂದಿ ಚಿತ್ರದ ಜೆರಾಕ್ಸ್ ಕಾಪಿ. ಅಂದಹಾಗೆ ಈ ಚಿತ್ರವನ್ನು ಜಗ್ಗೇಶ್ ತಮ್ಮ ಸ್ನೇಹಿತ ಶ್ರೀನಿವಾಸನ್ ಅವರ ಪಾಲುದಾರಿಕೆಯಲ್ಲಿ ನಿರ್ಮಿಸುತ್ತಿದ್ದಾರೆ.



Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 2-2-2011 RNI No. KARKAN2005/14648

'ಬಿಕಿ'ನೀ ನಡೆದ ಹಾದಿಯಲ್ಲಿ...



ನಿರ್ದೇಶಕರಾಗಿ ದೊಡ್ಡ ಹೆಸರು ಮಾಡಿರುವ ರಾಜೇಂದ್ರ ಸಿಂಗ್ ಬಾಬು ಅವರ ಮಗಳು ರಿಷಿಕಾ ತನ್ನ ಮೊದಲ ಚಿತ್ರ 'ಕಂಠೀರವ'ದಲ್ಲಿ ಬಿಕಿನಿ ತೊಟ್ಟು ಕಾಣಿಸಿಕೊಳ್ಳುತ್ತಿದ್ದಾಳೆ.

ಕನ್ನಡ ಚಿತ್ರಗಳಲ್ಲಿ ಬಿಕಿನಿ ತೊಟ್ಟ ನಟಿಯರ ಸಂಖ್ಯೆ ಬಹಳ ಕಮ್ಮಿ. ಈ ಹಿಂದೆ ಜಯಂತಿ 'ಬಹದ್ದೂರು ಗಂಡು' ಮತ್ತು ಇತರೆ ಚಿತ್ರಗಳಲ್ಲಿ ಬಿಕಿನಿಯನ್ನು ಬೋಲ್ಡ್ ಆಗಿ ತೊಟ್ಟಿದ್ದುಂಟು. ಡುಮ್ಮಿ ಮಾಲಾಶ್ರೀ ಆಗ ಈಗ ಸ್ವಿಮ್ಮಿಂಗ್ ಸೂಟ್ ಧರಿಸಿ ಮೆರೆದಿದ್ದರು. ಅದೇರೀತಿ ಎರಡು ವರ್ಷಗಳ ಹಿಂದೆ ಪೂಜಾ ಗಾಂಧಿ ಜಗ್ಗೇಶ್ ಜೊತೆ ನಟಿಸಿದ್ದ 'ಕೋದಗಾನ ಕೋಳಿ ನುಂಗಿತ್ತಾ' ಚಿತ್ರದಲ್ಲಿ ಈಜಿ ಜಯಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೆ ರಿಷಿಕಾಳ ಬಿಕಿನಿ ಎಂಟ್ರಿ ಆಕೆಯ ಮೊದಲ ಚಿತ್ರದ ಮೂಲಕ ಆಗುತ್ತಿದೆ.

ಸದ್ಯಕ್ಕೆ ಬಿಕಿನಿಯಲ್ಲಿ ಬಂದಿರುವ ಬಾಬು ಮಗಳು ಬಾಡದಿರಲಿ....!!

ಕುದುರೆ ಏರಿ ನೀತು ಬಂದವ್ಳೇ....!



ತಮ್ಮ ಚಿತ್ರಗಳಿಗೆ ಪ್ರಚಾರ ಪಡೆಯಲು ಗಾಂಧಿನಗರದಲ್ಲಿ ಹೊಸ ಹೊಸ ಪ್ರಯೋಗಗಳು ನಡೆಯುತ್ತಿವೆ. 'ಮೈಲಾರಿ' ತಂಡದವರು ಹುಬ್ಬಳ್ಳಿಯತನಕ ವಿಜಯ ಯಾತ್ರೆಯನ್ನು ಹಮ್ಮಿಕೊಂಡಿದ್ದಾರೆ. ಈಗ ಎಸ್.ಮಹೇಂದರ್ ಶಿಷ್ಯ ಬಂಗಾರು ನಿರ್ದೇಶಿಸಿರುವ 'ಕಾಲ್ಗೆಜ್ಜೆ' ಸಿನೆಮಾದ ತಂಡ ಜೋಡಿ ಎತ್ತುಗಳ ಕಾಲಿಗೆ ಗೆಜ್ಜೆ ಕಟ್ಟಿ ರಾಜ್ಯಾದ್ಯಂತ ಗಲ್ಲುಗಲ್ಲೆಂದು ಪ್ರಚಾರದ ಯಾತ್ರೆ ಶುರುಮಾಡಲು ನಿರ್ಧರಿಸಿದೆ.

ಈ ಮಧ್ಯೆ ಕಾರ್ತಿಕ್ ಶೆಟ್ಟಿ ಎಂಬಾತ ಅಭಿನಯಿಸಿರುವ 'ಕಾರ್ತಿಕ್' ಚಿತ್ರದವರು ಕುದುರೆ ಸವಾರಿ ಶುರು ಮಾಡಿದ್ದಾರೆ. ಇದಕ್ಕೆ ಕಾರಣ 'ಕಾರ್ತಿಕ್' ಚಿತ್ರದಲ್ಲಿ ಕುದುರೆಯೊಂದು ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿರುವುದಂತೆ. ಬಾಂಬೆಯಿಂದ ತರಿಸಿಕೊಂಡಿರುವ ಒಂದು ಬಿಳಿ ಕುದುರೆ ಈಗ ಬೆಂಗಳೂರಿನಾದ್ಯಂತ ಸಂಚರಿಸಿ ಪ್ರಚಾರದಲ್ಲಿ ತೊಡಗಿದೆ. ಈ ಪ್ರಚಾರಕ್ಕೆ ಕುದುರೆಯಂತೇ ಮೈ ಹೊಂದಿರುವ ನಟಿ ನೀತೂ ಚಾಲನೆ ನೀಡಿದ್ದಾಳೆ. ಹಾಗಂತ ಕುದುರೆ ಜೊತೆ ನೀತೂ ಕೂಡಾ ಬರ್ತಾಳೆ ಎಂದು ಕಣ್ಣರಳಿಸಿಕೊಂಡು ಕಾಯಬೇಡಿ. ಆಕೆಯದ್ದು ಬರೀ ಆರಂಭ ಮಾತ್ರ. ಮಿಕ್ಕದ್ದೆಲ್ಲಾ ಕುದುರೆಯದ್ದು!!



ರಮ್ಯಾಳ ಹೃದಯ ಕದ್ದ ಹುಡುಗ ಯಾರು?

ಕನ್ನಡ ಚಿತ್ರರಂಗದಲ್ಲಿ 'ಲಕ್ಕಿ ಗರ್ಲ್' ಎಂದೇ ಖ್ಯಾತಿ ಪಡೆದಿರುವ ರಮ್ಯಾಳ ಹೃದಯವನ್ನು ಒಬ್ಬ ಹುಡುಗ ಕದ್ದಿದ್ದಾನಾ? ಆಕೆ ಈಗ ಅವನ ಲವ್ವಲ್ಲಿ ಬಿದ್ದಿದಾಳಾ? ಜಂಭದ ಕೋಳಿ ರಮ್ಯಾಳನ್ನು ಮೆಚ್ಚಿಸಿರುವ ಈ ಹುಡುಗ ಯಾರು?

ರಮ್ಯಾಳಿಗೆ ಅಪಾರ ಫ್ಯಾನ್‌ಗಳಿದ್ದಾರೆ. ತಮ್ಮ ಮೈಕೈ ಮೇಲೆ 'ರಮ್ಯಾ ಐ ಲವ್ ಯೂ' ಎಂದೆಲ್ಲಾ ಹಚ್ಚೆ ಹಾಕಿಸಿಕೊಳ್ಳುವ ಹುಚ್ಚುಚ್ಚು ಅಭಿಮಾನಿಗಳಿದ್ದಾರೆ. ಫೇಸ್ ಬುಕ್ ಮತ್ತು ಆರ್ಕುಟ್ ತರಹದ ಇಂಟರ್‌ನೆಟ್ ಸಂಪರ್ಕತಾಣಗಳಲ್ಲಿ ಈಕೆಯೊಂದಿಗೆ ಸ್ನೇಹ ಸಂಪರ್ಕ ಬೆಳೆಸಿಕೊಳ್ಳಲು ಹಗಲೂರಾತ್ರಿ ಕಂಪ್ಯೂಟರ್ ಮುಂದೆ ಕಾಯುವ ಆರಾಧಕರಿಗೂ ಲೆಕ್ಕವಿಲ್ಲ.

ರಕ್ಷಿತಾ ಮತ್ತು ರಾಧಿಕಾ ನಿವೃತ್ತಿಯಾದ ನಂತರ ರಮ್ಯಳಿಗೆ ಸರಿಗಟ್ಟುವ ಮತ್ತೊಬ್ಬ ನಾಯಕಿ ಕನ್ನಡದಲ್ಲಿ ಹುಟ್ಟಿ ಬಂದಿಲ್ಲ. ಚೆಲುವು, ಮೈಮಾಟ, ನಟನೆಯಲ್ಲಿ ರಮ್ಯಾಳನ್ನು ಮೀರಿಸುವ ಒಬ್ಬಳೂ ಈ ತನಕ ಯಾರ ಕಣ್ಣಿಗೂ ಬಿದ್ದಿಲ್ಲ. ಈ ಕಾರಣಕ್ಕಾಗಿಯೇ ಈ ರಮ್ಯಾಳ ಕಿರಿಕಿರಿಗಳೇನೇ ಇದ್ದರೂ ಆಕೆ ಈಗಲೂ ಕನ್ನಡ ಚಿತ್ರದಲ್ಲಿ ನಂಬರ್ ಒನ್ ನಟಿ.




ವೃತ್ತಿಯಲ್ಲಿ ಸಂಪೂರ್ಣವಾಗಿ ಪ್ರೊಫೆಶನಲ್ ಆದ ರಮ್ಯಾ ಇಲ್ಲಿಯತನಕ ಎಂದೂ ತನ್ನ ಖಾಸಗಿ ವಿಷಯಗಳ ಬಗ್ಗೆ ತುಟಿಪಿಟಿಕ್ ಎಂದಿಲ್ಲ. ಆದರೆ ರಮ್ಯ ಈಗ ಹೊಸ ರಾಗ ಹಾಡುತ್ತಿದ್ದಾಳೆ. ತನ್ನ ಫೇಸ್ ಬುಕ್ ಅಕೌಂಟಿನಲ್ಲಿ ಇತ್ತೀಚೆಗೆ 'ರಿಲೇಷನ್‌ಶಿಪ್ ಸ್ಟೇಟಸ್' ಎಂಬಲ್ಲಿ "ಇನ್ ಅ ರಿಲೇಶನ್‌ಶಿಪ್" (ನಾನೀಗ ಒಬ್ಬಂಟಿಯಾಗಿಲ್ಲ) ಎಂದು ರಮ್ಯಾ ಹೇಳಿಕೊಂಡಿದ್ದಾಳೆ. ಅಷ್ಟೇ ಅಲ್ಲ, ತನ್ನ 'ಜೊತೆ'ಗಾರನನ್ನು ಯದ್ವಾತದ್ವಾ ಕೊಂಡಾಡುತ್ತಿರುವ ರಮ್ಯಾ "ನನ್ನ ಜೀವನದಲ್ಲಿ ಎಂದೂ ಸಿಗದ, ಬೆಲೆ ಕಟ್ಟಲಾಗಧಂತಹ ಹುಡುಗ ನನಗೆ ಸಿಕ್ಕಿದ್ದಾನೆ.. ನನ್ನ ಬದುಕಲ್ಲಿ ಹೊಸ ಸಂತಸವನ್ನು ಹುಟ್ಟಿಸಿದ್ದಾನೆ" ಎಂದೆಲ್ಲ ಹೇಳುತ್ತಿದ್ದಾಳೆ.

ಸಹಜವಾಗಿಯೇ ನಮ್ಮ 'ಲಕ್ಕಿ ಹುಡುಗಿ'ಯ ಸಿಂಗಲ್ ಸ್ಟೇಟಸ್‌ಅನ್ನು ಬದಲಿಸಿದ ಆ ಪುಣ್ಯಾತ್ಮ ಯಾರು ಎಂಬುದೇ ಈಗ ಎಲ್ಲರ ಪ್ರಶ್ನೆಯಾಗಿದೆ. ಇದರ ಬಗ್ಗೆ ರಮ್ಯಾಳನ್ನೇ ಕೇಳಿದರೆ "ಅದನ್ನು ಈಗಲೇ ಬಹಿರಂಗಪಡಿಸಲು ನಂಗೆ ಇಷ್ಟ ಇಲ್ಲ..." ಎಂದು ನಾಚಿ ನೀರಾಗುತ್ತಿದ್ದಾಳೆ.



ಚಿತ್ರರಂಗದಲ್ಲಿ ಗಾಸಿಪ್ ಸಹಜ. ಆದ್ದರಿಂದ ಈ ಹಿಂದೆ ಗಾಸಿಪ್‌ಗಳಲ್ಲಿ ರಮ್ಯಾಳ ಹೆಸರು ಹಲವರು ಹುಡುಗರ ಹೆಸರೊಂದಿಗೆ ಬೆಸೆದುಕೊಂಡಿತ್ತು. ತಮಿಳಿನ ನಟ ಮಾಧವನ್, ಶ್ಯಾಮ್ ಮತ್ತು ರಜನೀಕಾಂತರ ಅಳಿಯ ಧನುಷ್‌ರೊಂದಿಗೆ ಈಕೆಗೆ ನಿಕಟವಾದ ಸ್ನೇಹವಿದೆ. ತೆಲುಗಿನ ಸೂಪರ್ ಸ್ಟಾರ್ ಚಿರಂಜೀವಿ ಅವರ ಮಗ ರಾಮ್‌ಚರಣ್ ತೇಜ ಮತ್ತು ರಮ್ಯಾ ನಡುವೆ ಲವ್ವು ಹುಟ್ಟಿಕೊಂಡಿದೆ ಎಂದು ಆಂಧ್ರದ ವಾಹಿನಿಗಳು ಪಿಸುಗುಟ್ಟಿದ್ದವು. ಜೊತೆಗೆ ಖ್ಯಾತ ನಿರ್ದೇಶಕ ಗೌತಮ್ ಮೆನನ್ ಮತ್ತು ರಮ್ಯಾಳ ಸ್ನೇಹದ ಬಗ್ಗೆ ತಮಿಳು ಮಾಧ್ಯಮಗಳು ಪುಟಗಟ್ಟಲೇ ಬರೆದಿದ್ದವು. ಇನ್ನು ಕನ್ನಡದ ಲೂಸ್ ಮಾದ, ದಿಗಂತ್ ಮತ್ತು ಚಿರಂಜೀವಿ ಸರ್ಜಾ ತರಹದ ಯುವ ನಟರೂ ರಮ್ಯಾಳ ಪಾರ್ಟಿಗಳಲ್ಲಿ ಕಾಣಿಸಿಕೊಂಡಿದ್ದೂ ಹಲವು ಗಾಸಿಪ್‌ಗಳಿಗೆ ಕಾರಣವಾಗಿತ್ತು.



ಆದರೆ ಇಂತಹ ಯಾವ ಗಾಸಿಪ್‌ಗಳ ಬಗ್ಗೆ ರಮ್ಯಾ ಎಂದೂ ತಲೆಕೆಡಿಸಿಕೊಂಡಿಲ್ಲ.

ಆದರೀಗ ಆಕೆಯೇ ತನ್ನ 'ಜೊತೆಗಾರ'ನ ಬಗ್ಗೆ ಹೇಳಿರುವುದು ಮತ್ತು ಇದೇ ಹೊತ್ತಿಗೆ ಓರ್ವ ಯುವ ಐಎಎಸ್ ಅಧಿಕಾರಿಯ ಬಗ್ಗೆಯೂ ಪಿಸುಮಾತುಗಳು ಕೇಳಿಬರುತ್ತಿರುವುದು ಕೇವಲ ಕಾಕತಾಳೀಯವಲ್ಲ ಎಂಬುದು ಹಲವರ ಅಂಬೋಣ. ಸದ್ಯದ ಗಾಸಿಪ್ ಪ್ರಕಾರ ಒಕ್ಕಲಿಗ ಸಮುದಾಯಕ್ಕೆ ಸೇರಿರುವ ಈ ಯುವ ಐಎಎಸ್ ಅಧಿಕಾರಿ ಮತ್ತು ರಮ್ಯಾ ನಡುವೆ ಸ್ನೇಹ, ಪ್ರೀತಿ ಶುರುವಾಗಿದೆಯಂತೆ.



ಇದು ನಿಜವೇ ಆಗಿದ್ದರೆ ಆತ ನಿಜವಾಗಲೂ 'ಲಕ್ಕಿ ಬಾಯ್'!

● ಅರುಣ್

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : ...
Fax : 26604536, E-mail :lankesh70@rediffmail.com, Printed at Rajhans ...